
ಬಿ.ವಿ. ಅನಂತರಾಮ್



894.814 30872
ANA N97
ಗ್ರಂಥ ಸ್ವಾಮ್ಯ ವಿಭಾಗ

# ಡೆಸರ್ಟ್ ಸ್ಟಾರ್ಮ್

11,633 1997

ಬಿ. ವಿ. ಅನಂತರಾಮ್

ಪ್ರಕಾಶಕರು :

**ವಸಂತ ಪ್ರಕಾಶನ**

ನಂ. 10, ತುಳಸೀವನಂ,

ಬೆಂಗಳೂರು–5600 53

META ENTERED

DESERT STORM—written by B. V. Anantha Ram, Published by Vasantha Prakashana, No. 10 Thulasivanam, Bangalore-560 053.

ಪ್ರಥಮ ಮುದ್ರಣ : 1997

891.8101 ಅನಂ 94
ANA N 97
8 4 4 11 CR

ಪುಟಗಳು : 103

ಬೆಲೆ : ರೂ. 25-00

"ಡೆಸರ್ಟ್ ಸ್ಟಾರ್ಮ್"—ಬರೆದವರು ಬಿ. ವಿ. ಅನಂತರಾಮ್, ಪ್ರಕಾಶಕರು ವಸಂತ ಪ್ರಕಾಶನ, ನಂ. 10, ತುಳಸೀವನಂ, ಬೆಂಗಳೂರು-560053. ಮತ್ತು ಮುದ್ರಿಸಿದವರು ಸಾಧನಾ ಮುದ್ರಣಾಲಯ, 2/2, 1ನೇ ಕ್ರಾಸ್, ಕೋಟದದೇವರ ಗಲ್ಲಿ, ಕಾಟನ್‌ಪೇಟೆ, ಬೆಂಗಳೂರು-53,

# ಮುನ್ನುಡಿ

ಆತ್ಮೀಯ ಓದುಗ ಗೆಳೆಯ ಗೆಳತಿಯರೇ,

ಡೆಸರ್ಟ್ ಸ್ವಾರ್ಮ್ ಹೊಸದೊಂದು ಅಸೈನ್‌ಮೆಂಟ್ ಇದೀಗ ನಿಮ್ಮ ಕೈಯಲ್ಲಿದೆ. ಓದಿ ಹೇಗಿದೆ ಎಂಬುದನ್ನು ತಿಳಿಸಿ.

ಕೃತಿ ಪ್ರಕಟಿಸುತ್ತಿರುವ ವಸಂತ ಪ್ರಕಾಶನದವರಿಗೆ ನಾನು ಕೃತಜ್ಞ.

ಮುಖಪುಟ ಕಲಾವಿದರಿಗೆ, ಅಚ್ಚುಕೂಟದ ಗೆಳೆಯರಿಗೆ ನಮನ.

ವಿಶ್ವಾಸವಿರಲಿ

—ಬಿ. ವಿ. ಅನಂತರಾಮ್

1652, ಪ್ರಕಾಶನಗರ
ಮೂರನೇ ಹಂತ,
ಬೆಂಗಳೂರು–21.

# ಪ್ರಕಾಶಕರ ನುಡಿ

ನಮ್ಮ ಪ್ರಕಾಶನದಿಂದ ಶ್ರೀ ಬಿ. ವಿ. ಅನಂತರಾಮ್‌ರವರ ಹೊಸ ಕೃತಿಗಳನ್ನು ಪ್ರಕಟಿಸಲು ಅನುಮತಿ ನೀಡಿದ ಲೇಖಕರಿಗೆ ವಂದನೆಗಳು.

ಇವರ ಇನ್ನು ಹಲವು ಕೃತಿಗಳು ನಮ್ಮಲ್ಲಿ ಪ್ರಕಟ ಗೊಳ್ಳುವ ನಿರೀಕ್ಷೆ ಇದೆ.

ಈ ಕೃತಿಯನ್ನು ಅಚ್ಚುಕಟ್ಟಾಗಿ ಮುದ್ರಿಸಿದ ಸಾಧನಾ ಮುದ್ರಣಾಲಯದವರಿಗೂ ಮುಖಪುಟ ಕಲಾವಿದರಿಗೂ ನಮ್ಮ ಪ್ರಕಾಶದ ಪರವಾಗಿ ವಂದನೆಗಳು.

ಬೆಂಗಳೂರು–53

—ಎಸ್. ವಸಂತ
ವಸಂತ ಪ್ರಕಾಶನದ ಪರವಾಗಿ

# 1

ಮೂವರು ಕಸ್ಟಂಸ್ ಅಧಿಕಾರಿಗಳು, ಇನ್ನೊಬ್ಬ ಏರ್‌ಪೋರ್ಟ್ ಸೆಕ್ಯೂರಿಟಿ ಆಫೀಸರ್. ಪ್ರಯಾಣಿಕರು ಹಾಗೂ ಅವರ ಸಾಮಾನುಗಳನ್ನು ಕೂಲಂಕುಷವಾಗಿ ಚೆಕ್ ಮಾಡುತ್ತಿದ್ದರು.

ದೇಸಾಯ್ ತನ್ನ ಬ್ರೀಫ್‌ಕೇಸ್ ಬೀಗ ತೆರೆದು ಟೇಬಲ್ ಮೇಲಿಟ್ಟ. ಎರಡು ಷರ್ಟ್, ಪ್ಯಾಂಟ್, ಅಂಡರ್‌ವೇರ್, ಬನಿಯನ್ಸ್, ಷೇವಿಂಗ್ ಕಿಟ್, ಟೂತ್ ಬ್ರಷ್, ಪೇಸ್ಟ್, ಇಪ್ಪತ್ತು ಕಾಗದಗಳು, ಟೈಪ್ ಮಾಡಿರುವ ಪೇಪರ್ಸ್ ಇರುವ ಫೈಲ್, ಬ್ರೀಫ್‌ಕೇಸ್ ಲೈನಿಂಗ್ಸ್, ತಳ ಭಾಗವನ್ನೆಲ್ಲಾ ಎಚ್ಚರಿಕೆಯೊಡನೆ ಚೆಕ್ ಮಾಡಿ ನಂತರ ಕ್ಲೋಸ್ ಮಾಡಿದರು.

"ಕ್ಯಾಮೆರಾ ಪ್ಲೀಸ್ !"

ತೆಗೆದುಕೊಟ್ಟ. ಮಿನೋಲ್ಟಾ ಎ ಫೈವ್. ಬೆಲೆಬಾಳುವ ಪ್ರೊಫೆಷನಲ್ ಎಕ್ವಿಪ್‌ಮೆಂಟ್.

"ಈಸಿಟ್ ಲೋಡೆಡ್ ?" ಕೇಳಿದ ಸೆಕ್ಯುರಿಟಿ ಆಫೀಸರ್.

"ಇಲ್ಲ. ಖಾಲಿಯಾಗಿದೆ" ಅಂದ ದೇಸಾಯ್ ನಗುತ್ತಾ.

ಕ್ಯಾಮೆರಾ ಓಪನ್ ಮಾಡಿ ಒಳಗೆಲ್ಲಾ ಒಮ್ಮೆ ಪರಿಶೀಲಿಸಿ ಮತ್ತೆ ಮುಚ್ಚಿ ಟೇಬಲ್ ಮೇಲಿಟ್ಟರು.

"ಪ್ಲೀಸ್ ಸ್ಟೆಪ್ ಆನ್ ದಿಸ್ ಮೆಷಿನ್ ಪ್ಲೀಸ್ !" ಅಂದ ಒಬ್ಬ ಕಸ್ಟಂಸ್ ಅಧಿಕಾರಿ.

ಆ ಯಂತ್ರವನ್ನೊಮ್ಮೆ ಅಬ್ಸರ್ವ್ ಮಾಡಿದ ದೇಸಾಯ್.

ತೂಕ ನೋಡುವ ಯಂತ್ರದಂತೆಯೇ ಇತ್ತು. ಅತ್ತ ಇತ್ತ ಎರಡು ಮೆಟಲ್ ಬಾರ್ಸ್ ಇದ್ದವು. ಎಲೆಕ್ಟ್ರಾನಿಕ್ ಚೆಕಿಂಗ್ ಡಿವೈಸ್ ! ವೈಮೇಲೆ

ಯಾವ ತರಹದ ಲೋಹವಿದ್ದರೂ ತಕ್ಷಣ ಅಲಾರಂ ಮೊಳಗಿಸುತ್ತಿತ್ತು ಅದು. ಪಿಸ್ತೂಲು, ಚೂರಿ, ಚಿನ್ನ ಎಂತಹುದೇ ಲೋಹವಾದರೂ ಎಷ್ಟೇ ಚಿಕ್ಕ ಗಾತ್ರದಲ್ಲಿದ್ದರೂ ಇಮ್ಮೀಡಿಯಟ್ ಆಗಿ ಫೈಂಡ್‌ಔಟ್ ಮಾಡುವುದೇ ಆ ಮೆಟಲ್ ಡಿಟೆಕ್ಟರ್‌ನ ಸ್ಪೆಷಾಲಿಟಿ !

"ಇಲ್ಲಿಯವರೆಗೆ ಇಷ್ಟೊಂದು ಸಿವಿಯರ್ ಚೆಕಿಂಗ್ ಮಾಡೇ ಇರಲಿಲ್ಲ......" ಅಂದ ದೇಸಾಯ್ ಮೆಟಲ್ ಬಾರ್‌ಗಳ ನಡುವೆ ನಿಲ್ಲುತ್ತಾ.

"ಹೌದು. ಇತ್ತೀಚೆಗೆ ವಿಪರೀತವಾಗಿರುವ ಹೈಜಾಕಿಂಗ್ಸ್‌ನಿಂದಾಗಿ ಸೆಕ್ಯೂರಿಟಿ ತೀವ್ರಗೊಳಿಸಲಾಗಿದೆ" ಹೇಳಿದ ಒಬ್ಬ ಅಧಿಕಾರಿ.

ತಕ್ಷಣ ಬಿರ್ಝ್‌ರ್ಝ್......ಎಂದು ಒಂದೇ ಸಮ ಮೊಳಗಲು ಶುರು ವಾಯಿತು ಅಲಾರಂ. ಸೆಕ್ಯುರಿಟಿ ಆಫೀಸರ್ ಸ್ವಿಚಾಫ್ ಮಾಡಿದ.

"ಕೈ ಗಡಿಯಾರ, ಫೌಂಟೆನ್ ಪೆನ್. ಕೀ ಬಂಚ್. ಚಿಲ್ಲರೆ ಹಣ ಹೊರಗಿಡಿ" ಅಂದ ಅರ್ಥಮಾಡಿಕೊಂಡವನಂತೆ.

ಮಿನೂದೇಸಾಯ್ ಅವನ ಕಡೆಗೆ ಅಸಹನೆಯೊಡನೆ ನೋಡಿದ.

"ಸಾರಿ ! ಇನ್ಸ್‌ಟ್ರಿಕ್ಷನ್ಸ್ ! ಪ್ಲೀಸ್ ಕೋ ಆಪರೇಟ್ ವಿತ್ ಅಸ್ !" ಅಂದ ಅವನು ಅಪಾಲಜೆಟಿಕ್ಕಾಗಿ.

ಭುಜ ಎಗರಿಸಿದ ದೇಸಾಯ್, "ಆಲ್‌ರೈಟ್ !" ಅಂದ. ಗಡಿಯಾರ ಇತ್ಯಾದಿಗಳನ್ನೆಲ್ಲಾ ತೆಗೆದು ಟೇಬಲ್ ಮೇಲಿರಿಸಿದ. ಸೆಕ್ಯುರಿಟಿ ಆಫೀಸರ್ ಮತ್ತೆ ಸ್ವಿಚ್ ಹಾಕಿದ.

ಈ ಸಲ ಯಾವುದೇ ಸೌಂಡ್ ಬರಲಿಲ್ಲ.

ಕಿರು ನಗೆಯೊಡನೆ ತನ್ನ ವಸ್ತುಗಳನ್ನೆಲ್ಲಾ ಎತ್ತಿಕೊಂಡು ವಿಮಾನದ ಕಡೆಗೆ ನಡೆದ ದೇಸಾಯ್.

ಫಾಕರ್ ಫ್ರೆಂಡ್‌ಷಿಪ್ ವಿಮಾನ ಅದು. ಟೈಲ್ ಮೇಲೆ ಇಂಡಿಯನ್ ಏರ್‌ಲೈನ್ಸ್ ಕಲರ್ಸ್ ಮಿಂಚಿಸುತ್ತಾ ಮೆಜೆಸ್ಟಿಕ್ಕಾಗಿ ರನ್‌ವೇ ಮೇಲೆ ನಿಂತಿತ್ತು. 'ಇಂಡಿಯನ್ ಆಯಿಲ್' ಲೋಗೋ ಇರುವ ಟ್ರಕ್ಕೊಂದು ಇಂಧನವನ್ನು ತುಂಬುತಿತ್ತು.

ವಿಮಾನದ ಕಡೆಗೆ ನಡೆಯುತ್ತಾ ತಲೆ ತಿರುಗಿಸಿ ಕಸ್ಟಂಸ್ ಬ್ಯಾರಿಯರ್ ಕಡೆಗೊಮ್ಮೆ ನೋಡಿದ ದೇಸಾಯ್.

ತನ್ನ ಸ್ನೇಹಿತ ಜೈಸ್ವಾಲ್ ಸಹ ತಾನು ಮಾಡಿದ ಡ್ರಿಲ್ ಮುಂದುವರಿಸುತ್ತಲಿದ್ದಾನೆ !

ಮೆಟ್ಟಿಲು ಹತ್ತಿ ವಿಮಾನದೊಳಕ್ಕೆ ಹೋದ. ಆಪಲ್‌ನ ಅಪರಾವತಾರದಂತಿದ್ದ ಏರ್ ಹೋಸ್ಟೆಸ್ ಮುಗುಳ್ನಗೆ ಹೊರ ಚೆಲ್ಲುತ್ತಾ ಸ್ವಾಗತ ಕೋರಿದಳು. ಕೈನಲ್ಲಿದ್ದ ಬ್ರೀಫ್‌ಕೇಸ್ ಸ್ಟೂವರ್ಡ್‌ಗೆ ಕೊಟ್ಟು ಮುಂದಕ್ಕೆ ನಡೆದ.

ಮುಂದಿನ ಸಾಲಿನಲ್ಲಿ ಕಿಟಕಿ ಪಕ್ಕದಲ್ಲಿದ್ದ ಸೀಟ್‌ನಲ್ಲಿ ಆಸೀನನಾದ.

ಜೈಸ್ವಾಲ್ ಸಹ ಆಗಲೇ ಒಳ ಬಂದು ಕೊನೆಯ ಸಾಲಿನಲ್ಲಿ ಕುಳಿತ.

ಹಿಂದಕ್ಕೆ ವಾಲಿ ಸಿಗರೇಟೊಂದು ಹಚ್ಚಿಕೊಂಡ ದೇಸಾಯಿ. ಸೀಟ್ ಕಂಪಾರ್ಟ್‌ಮೆಂಟ್‌ನೊಳಗಿನ ರ್‍ಯಾಕ್‌ನಿಂದ 'ಇಂಡಿಯಾ ಟು ಡೇ' ಮ್ಯಾಗಜೈನ್ ಎತ್ತಿಕೊಂಡು ಪುಟಗಳನ್ನು ತಿರುಗಿಸತೊಡಗಿದ.

ಏಳೂ ಐವಾಯಿತು.

ಏರ್ ಹೋಸ್ಟೆಸ್ ಮುಂದಿನ ಸಾಲಿನ ಬಳಿಗೆ ಬಂದು ಪಬ್ಲಿಕ್ ಅಡ್ರೆಸ್ ಸಿಸ್ಟಂ ಆನ್ ಮಾಡಿದಳು. ಕೈನಲ್ಲಿ ಸ್ಪೀಕರ್ ಹಿಡಿದು ಎಲ್ಲರ ಕಡೆಗೂ ಒಮ್ಮೆ ಮಂದಸ್ಮಿತದೊಡನೆ ನೋಡಿದಳು.

"ಲೇಡೀಸ್ ಅಂಡ್ ಜೆಂಟಲ್‌ಮನ್ ! ವೆಲ್‌ಕಂ ಅಬ್ರಾಡ್ ಇಂಡಿಯನ್ ಏರ್‌ಲೈನ್ಸ್ ಫಾಕರ್ ಫ್ರೆಂಡ್‌ಷಿಪ್ ! ವಿ ಆರ್ ಗೋಯಿಂಗ್ ಟು ಟೇಕಾಫ್ ಇನ್ ಎಫ್ಯೂಮಿನಿಟ್ಸ್ ಮೀನ್ ವೈಲ್ ಐ ವಿಲ್ ಎಕ್ಸ್‌ಪ್ಲೈನ್......"

ಏರ್ ಹೋಸ್ಟೆಸ್ ಧ್ವನಿ ಮಧುರವಾಗಿ ಎಮರ್ಜೆನ್ಸಿಯಲ್ಲಿ ಆಕ್ಸಿಜನ್ ಮಾಸ್ಕ್ ಹೇಗೆ ಉಪಯೋಗಿಸಬೇಕೆಂದು ವಿವರಿಸತೊಡಗಿತು.

ದೇಸಾಯಿಗಿದೇನೂ ಹೊಸದಲ್ಲ ಸೀಟ್ ಬೆಲ್ಟ್ ಬಕಲ್ ಮಾಡಿಕೊಂಡು ಸಿಗರೇಟ್ ಆರಿಸಿ ಹೊರಗೆ ನೋಡುತ್ತಾ ಕುಳಿತ.

ರನ್‌ವೇ ಬಿಟ್ಟು ಆಕಾಶದತ್ತ ನೆಗೆಯತೊಡಗಿತು ವಿಮಾನ. ಎಂಜಿನ್ ಸಪ್ಪಳದಲ್ಲಿನ ವಿಚಿತ್ರ ಬದಲಾವಣೆಗಳನ್ನಾಲಿಸುತ್ತಾ ವಿಮಾನ ಲೆವೆಲ್ಲಾಗಿ ಹಾರಲು ಶುರು ಮಾಡಿದಾಗ ಸೀಟ್ ಬೆಲ್ಟ್ ಬಿಚ್ಚಿ ಸಿಗರೇಟ್ ಹತ್ತಿಸಿಕೊಂಡ.

ಪಬ್ಲಿಕ್ ಅಡ್ರೆಸ್ ಸಿಸ್ಟಂ ಗರಗರವೆಂದಿತು. ಮೈಕ್‌ನಲ್ಲಿ ಫ್ಲೈಟ್ ಕ್ಯಾಪ್ಟನ್ ಧ್ವನಿ ಕೇಳಿಸಿತು.

"ಗುಡೀವಿನಿಂಗ್ ಫೋಕ್ಸ್.....ದಿಸೀಸಿವರ್ ಕ್ಯಾಪ್ಟನ್ ಮಾನ್‌ಸಿಂಗ್ ಸ್ಪೀಕಿಂಗ್ ! ಭೂಮಿಯಿಂದ ಸುಮಾರು ಹದಿನೆಂಟು ಸಾವಿರ ಅಡಿಗಳೆತ್ತರದಲ್ಲಿ ಗಂಟೆಗೆ ಇನ್ನೂರ ಎಪ್ಪತ್ತೈದು ಮೈಲಿಗಳ ವೇಗದಲ್ಲಿ ನಾವು ಪ್ರಯಾಣಿಸು ತ್ತಿದ್ದೇವೆ. ವಾತಾವರಣ ಚೆನ್ನಾಗಿದೆ ಎಂದು ವೆದರ್ ರಿಪೋರ್ಟ್ಸ್ ಇಂಡಿ ಕೇಟ್ ಮಾಡುತ್ತಿವೆ. ಬಹುಶಃ ಒಂಬತ್ತೂ ಕಾಲರ ವೇಳೆಗೆ ನಾವು ಬಾಂಬೆ ಸಾಂತಾಕ್ರುಜ್ ಇಂಟರ್‌ನ್ಯಾಷನಲ್ ಏರ್‌ಪೋರ್ಟ್‌ನಲ್ಲಿ ಲ್ಯಾಂಡ್ ಆಗು ತ್ತೇವೆ. ಎಂಜಾಯ್ ದಿ ಫ್ಲೈಟ್ ಅಂಡ್ ಥ್ಯಾಂಕ್ಯೂ !"

ಮೈಕ್‌ನಲ್ಲಿ ಕ್ಯಾಪ್ಟನ್ ಧ್ವನಿ ನಿಂತೊಡನೆ ಟೈಂ ನೋಡಿಕೊಂಡ ದೇಸಾಯ್. ಏಳೂ ಇಪ್ಪತ್ತಾಗಿತ್ತು. ಎದ್ದು ನಿಂತು ಟಾಯ್ಲೆಟ್ ಕಡೆಗೆ ಹೆಜ್ಜೆ ಹಾಕಿದ.

ಒಳಕ್ಕೆ ಹೋದೊಡನೆ ಬಾಗಿಲು ಮುಚ್ಚಿ ಬೋಲ್ಟ್ ಹಾಕಿದ ಪ್ಯಾಂಟ್ ಫೋಲ್ಡ್‌ನೊಳಗಿಂದ ಸಣ್ಣ ಪಾಲಿಥಿನ್ ಕವರ್ ಹೊರತೆಗೆದ. ಅದರೊಳಗೆ ಮೂರು ಕೆಂಪು ಕ್ಯಾಪ್ಸೂಲ್‌ಗಳು, ಒಂದು ಹಸಿರು ಕ್ಯಾಪ್ಸೂಲ್ ಇದ್ದವು.

ಕವರ್ ಓಪನ್ ಮಾಡಿ ನಾಲ್ಕನ್ನೂ ಅಂಗೈಗೆ ಹಾಕಿಕೊಂಡು ಅವುಗಳ ತ್ತಲೇ ಎರಡು ಕ್ಷಣ ತದೇಕವಾಗಿ ನೋಡುತ್ತಿದ್ದು ಬಿಟ್ಟ.

ಕೆಂಪು ಕ್ಯಾಪ್ಸೂಲ್ಸ್ ಡ್ಲಿತೋಕ್ಲೋರೋಸೈಕ್ಲಿನ್. ಲೇಟೆಸ್ಟ್ ಇನ್ ವೆನ್ಷನ್. ಆ ಕ್ಯಾಪ್ಸೂಲ್‌ನೊಳಗಿನ ಪೌಡರ್ ಸೇರಿದ ಗಾಳಿಯನ್ನು ಉಸಿ ರಾಡಿದವರು ಕ್ಷಣಗಳಲ್ಲಿ ಸ್ಮೃತಿ ಕಳೆದುಕೊಳ್ಳುತ್ತಾರೆ ರೈಲ್ವೆ ಕಂಪಾರ್ಟ್ ಮೆಂಟ್‌ನಷ್ಟು ಏರಿಯಾ ಕಲುಷಿತಗೊಳಿಸಲು ಒಂದು ಟ್ಯಾಬ್ಲೆಟ್ ಸಾಕು !

ಹಸಿರು ಕ್ಯಾಪ್ಸೂಲ್ ಅದಕ್ಕೆ ಆಂಟಿ ಮೆಡಿಸಿನ್.

ಹಸಿರು ಕ್ಯಾಪ್ಸೂಲ್ ಕರ್ಚೀಫ್ ಮಧ್ಯದಲ್ಲಿರಿಸಿ ಕೇರ್‌ಫುಲ್ಲಾಗಿ ಮಡ ಚಿದ. ರೆಡ್ ಕ್ಯಾಪ್ಸೂಲ್ಸ್ ಮೇಲಿನ ಜೇಬಲ್ಲಿರಿಸಿಕೊಂಡು ಇನ್ನೊಂದು ಜೇಬಿನಿಂದ ನೀಲಿ ಲಿಟ್ಮಸ್ ಪೇಪರ್ ತೆಗೆದು ಕೈ ಗಡಿಯಾರದ ಚೈನ್ ನಡುವೆ ಸಿಗಿಸಿಕೊಂಡ.

ಹಿಂತಿರುಗಿ ತನ್ನ ಸೀಟ್‌ನಲ್ಲಿ ಕುಳಿತ.

ಏರ್ ಹೋಸ್ಟೆಸ್ ಎಲ್ಲರಿಗೂ ಡಿನ್ನರ್ ಸರ್ವ್ ಮಾಡುತ್ತಿದ್ದಳು. ಆಮ್ಲೆಟ್ ಅಂಡ್ ಟೋಸ್ಟ್, ವಿಸ್ಕಿ ಆನ್ ರಾಕ್ಸ್ ತರುವಂತೆ ಆದೇಶಿಸಿದ

ಈ ಫ್ಲೈಟ್‌ನಲ್ಲಿ ಕಡಿಮೆ ಪ್ರಯಾಣಿಕರಿರುವಂತಿದ್ದರು. ಅಷ್ಟು ರಿಸ್ಕ್ ಕಡಿಮೆಯಾಯಿತೆಂದುಕೊಂಡ ದೇಸಾಯ್. ಎಲ್ಲರೂ ಡಿನ್ನರ್ ಮುಗಿಸಲು ಸುಮಾರು ಇಪ್ಪತ್ತು ನಿಮಿಷಗಳಾಗಿದ್ದವು.

ಟೈಂ ಎಂಟೂ ಐದರ ಸಮೀಪಕ್ಕೆ ಬಂದಿತ್ತು. ರೀಡಿಂಗ್ ಲ್ಯಾಂಪ್ಸ್ ಬಿಟ್ಟರೆ ಟಾಪ್ ಲೈಟ್ ಬೆಳಗುತ್ತಿಲ್ಲ.

ಮೇಲೆದ್ದು ನಿಂತ ದೇಸಾಯ್.

ಸೀಟಿನ ಮೇಲ್ಭಾಗದಿಂದ ಎಲ್ಲವೂ ಕತ್ತಲಮಯ ಯಾರಿಗೂ ಮುಖ ಗುರುತಿಸುವ ಅವಕಾಶವಿಲ್ಲ.

ಕರ್ಚೀಫ್ ಹೊರ ತೆಗೆದು ಹಸಿರು ಕ್ಯಾಪ್ಸೂಲ್ ಪ್ರೆಸ್ ಮಾಡಿ ಮೂಗಿನ ಬಳಿ ಹಿಡಿದು ರೆಡ್ ಕ್ಯಾಪ್ಸೂಲ್ ಇನ್ನೊಂದು ಕೈ ಬೆರಳುಗಳಿಂದ ಜೋರಾಗಿ ಪ್ರೆಸ್ ಮಾಡಿ ಕ್ಯಾಪ್ಸೂಲ್ ಬ್ರೇಕ್ ಆದೊಡನೆ 'ಉಫ್' ಎಂದು ಗಾಳಿಯಲ್ಲಿ ಪೌಡರ್ ಉರುಬಿದ.

ಮೇಲೆ ತಿರುಗುತ್ತಿದ್ದ ಬ್ಲೋಯಿಂಗ್ ಫ್ಯಾನ್ ಕಾರಣದಿಂದಾಗಿ ಆ ಜೋರಿಗೆ ಪೌಡರ್ ಕ್ಷಣಗಳಲ್ಲಿ ವಿಮಾನದಲ್ಲೆಡೆ ವ್ಯಾಪಿಸುತ್ತದೆಂದು ಗೊತ್ತವನಿಗೆ.

ಕರ್ಚೀಫ್ ಮೂಗಿನಡ್ಡವಿರಿಸಿ ವಾಚ್ ಚೈನ್ ಕೆಳಗಿರುವ ಲಿಟ್ಮಸ್ ಬಣ್ಣ ಕ್ಷಣಗಳಲ್ಲಿ ಕೆಂಪಾಯಿತು !

'ಗುಡ್ ! ವೆರಿ ಎಫೆಕ್ಟಿವ್ !' ಅಂದುಕೊಂಡ ಸಂತಸದೊಡನೆ.

ಕಣ್ಣುಗಳು ಉರಿಯುತ್ತಿದ್ದವು. ಮೂಗಿನಲ್ಲಿ ತಡೆಯಲಾಗದ ಕಮಟು ವಾಸನೆ. ಆದರೂ ಎರಡು ನಿಮಿಷ ಕರ್ಚೀಫ್‌ನೊಳಗೇ ಮೂಗು ಹುದುಗಿಸಿ ಪೌಡರ್ ವಾಸನೆ ಆಘ್ರಾಣಿಸುತ್ತಾ ಸುತ್ತಲೂ ನೋಡಿದ.

ಜೈಸ್ವಾಲ್ ನಗುತ್ತಾ ಅವನ ಬಳಿಗೆ ನಡೆದು ಬಂದ.

"ಎವ್ವೆರಿಥಿಂಗ್ ಈಸ್ ಓ ಕೆ. ! ಏರ್ ಹೋಸ್ಟೆಸ್ ಮತ್ತು ಪ್ರಯಾಣಿಕರೆಲ್ಲಾ ಮೂರ್ಛೆ ಹೋಗಿ ಬಿದ್ದಿದ್ದಾರೆ" ಅಂದ ಕಣ್ಣಿನಿಂದ ಸುರಿಯುತ್ತಿರುವ ನೀರನ್ನು ಒರೆಸಿಕೊಳ್ಳುತ್ತಾ.

ತಲೆದೂಗಿದ ದೇಸಾಯ್,"ಪ್ರೆಟಿ ಗುಡ್ ಸ್ಟಫ್ ! ಲೆಟಸ್ ಮೂವ್ ಅಂದ ಪೈಲಟ್ ಕ್ಯಾಬಿನ್ ಕಡೆಗೆ ತಿರುಗಿ.

ಕ್ಯಾಬಿನ್ ಬಾಗಿಲು ತೆರೆದು ಒಳಕ್ಕೆ ಕಾಲಿಟ್ಟ ಜೈಸ್ವಾಲ್. ಅವನ ಹಿಂದೆಯೇ ಒಳ ಬಂದ ದೇಸಾಯ್.

"ವಾಟ್ ದ ಹೆಲ್......!" ಅಷ್ಟೇ! ತಲೆಯೊದರಿ ಹಾಗೆಯೇ ಕಂಟ್ರೋಲ್ ಸ್ಟಿಕ್ ಮೇಲೆ ಒರಗಿ ಬಿಟ್ಟ ಪೈಲಟ್.

ಕೋ ಪೈಲಟ್‌ದೂ ಅದೇ ಸ್ಥಿತಿಯೇ!

ನಿಯಂತ್ರಣವಿಲ್ಲದ ವಿಮಾನ ಡೈವಿಂಗ್ ಪೊಜಿಷನ್‌ಗೆ ಬಂತು.

ವಿಮಾನ ಅತ್ತಿತ್ತ ಹೊಯ್ದಾಡುತ್ತಾ ಪ್ರಯಾಣಿಸುತ್ತಿತ್ತು. ಪೈಲಟ್‌ನನ್ನು ಪಕ್ಕಕ್ಕೆಳೆದ ದೇಸಾಯ್. ಸೀಟ್‌ನಲ್ಲಿ ಕುಳಿತು ಕಂಟ್ರೋಲ್ ಸ್ಟಿಕ್ ಕೈಗೆ ತೆಗೆದುಕೊಂಡ.

# 2

ತಟಕ್ಕನೆ ಎಚ್ಚರವಾಗಿತ್ತು ನನಗೆ ಅದೇಕೆ ? ಕ್ಷಣ ಕಣ್ಣು ತೆರೆದು ನೋಡಿದೆ.

ಜುಂಯ್ ........ ಎಂದು ಎಲ್ಲೋ ದೂರದಲ್ಲಿ ಎಂಜಿನ ಸಬ್ದ ಕೇಳಿಸುತ್ತಿತ್ತು.

ಆ ಶಬ್ದ ಕ್ರಮೇಣ ಹತ್ತಿರವಾಗುತ್ತಿತ್ತು. ಕಿವಿಗಡಚಿಕ್ಕುವಂತೆ ಕೇಳಿ ಬರತೊಡಗಿತು.

ಮೈಗಾಡ್..... ಏರೋಪ್ಲೇನ್ !

ಜೋಧ್‌ಪುರ್‌ನಿಂದ ಬರಬೇಕಾಗಿದ್ದ ಸಪ್ಲೈಸ್ ವಾರ ತಡವಾಗಿತ್ತು. ಮರು-ಭೂಮಿಯಲ್ಲಿನ ಸುಂಟರ ಗಾಳಿಯು ಕಾರಣ. ಆ ಸ್ಯಾಂಡ್‌ವೇವ್‌ಗೆ ಸಿಕ್ಕ ಏನೊಂದೂ ಸರ್ವೈವ್ ಆಗದು.

ಮಂಚದಿಂದಿಳಿದು ನೈಟ್ ಡ್ರೆಸ್‌ನಲ್ಲೇ ಸರಸರನೆ ಓವರಾಲ್ ಹಾಕಿಕೊಂಡೆ. ಗ್ಲೌಸ್ ತೊಟ್ಟು ಅಂಕಲ್ ಷೂಸ್ ಕಾಲಲ್ಲಿ ಮೆಟ್ಟಿ ಟಾರ್ಚ್ ತೆಗೆದುಕೊಂಡು ಹೊರಗಿನ ಕಾರಿಡಾರ್‌ಗೆ ಬಂದೆ.

ಕಾಂಡಾರ್ ಕೊನೆಯಲ್ಲಿ ಪ್ರೊಜೆಕ್ಷನ್ ಬಳಿ ನಿಂತು ಆಕಾಶದತ್ತಲೇ ನೋಡುತ್ತಿದ್ದ ಷೇರ್‌ಖಾನ್.

ಜೋರಾಗಿ ಬೀಸುತ್ತಿರುವ ಗಾಳಿಯ ಜೊತೆಗೆ ಮರಳ ಕಣಗಳು ರಾಕೆಟ್‌ಗಳೋಪಾದಿಯಲ್ಲಿ ನುಗ್ಗಿ ಬರುತ್ತಿದ್ದವು. ಜೇಬಿನಲ್ಲಿದ್ದ ವಿಂಡ್‌ಚೀಟರ್ ಗಾಗಲ್ಸ್ ಕಣ್ಣಿಗೆ ಹಾಕಿಕೊಳ್ಳುತ್ತ ಅವನ ಕಡೆಗೆ ನಡೆದೆ.

ಗಾಗಲ್ಸ್, ಓವರಾಲ್..... ಇವೆರಡೂ ಇಲ್ಲದೆ ಈ ಮರು-ಭೂಮಿಯ ಮರಳಲ್ಲಿ ಬದುಕುವುದು ಕಷ್ಟ.

ನಿಶ್ಶಬ್ದವಾಗಿ ಹೋಗಿ ಷೇರ್‌ಖಾನ್ ಪಕ್ಕದಲ್ಲಿ ನಿಂತೆ. " ವಿಮಾನ ಹತ್ತಿ

ರದಲ್ಲೇ ಎಲ್ಲೋ ಹಾರುತ್ತಿರುವ ಶಬ್ದ ಕೇಳಿಸುತ್ತಿತ್ತು. ಎಷ್ಟು ದೂರ ವಿದೆಯೋ ಆ ಮರಳಲ್ಲಿ ಕಾಣಿಸುತ್ತಿಲ್ಲ.

ಈ ಸ್ಯಾಂಡ್ ಸ್ವಾರ್ಮ್ ನಡುವೆ ಸಪ್ಲೈ ಡ್ರಾಪ್ ಮಾಡಲು ಪರ್ಮಿಷನ್ ಯಾರು ಕೊಟ್ಟರೆಂಬುದೇ ಅರ್ಥವಾಗಲಿಲ್ಲ.

ಮೋಡದಂತಿದ್ದ ಮರಳೊಳಗಿಂದ ಕೆಂಪು, ಹಸಿರು ರಂಗಿನ ಲೈಟ್ಸ್ ರೊಟೇಟ್ ಆಗುತ್ತಿರುವುದು ಕಾಣಿಸಿತು. ಗಾಳಿಯ ಹೋರು ವಿಮಾನದ ಶಬ್ದದೊಡನೆ ಮೇಳೈಸಿತ್ತು.

"ಮೈಗಾಡ್......ಹಿ ಈಸ್ ಗೋಯಿಂಗ್ ಟು ಲ್ಯಾಂಡ್!" ಉದ್ಗರಿಸಿದೆ. ಎಸ್ ! ಆ ರೊಟೇಟಿಂಗ್ ಲ್ಯಾಂಡಿಂಗ್ ಲೈಟ್ಸ್ ಅರ್ಥ ಅದೇ !

"ಹೌದು......ಆದರದು ನಮ್ಮ ಸಪ್ಲೈಸ್ ವಿಮಾನವಲ್ಲ. ಈ ಸ್ವಾರ್ಮ್ ನಲ್ಲಿ ದಾರಿ ತಪ್ಪಿರುವ ಯಾವುದೋ ಕಮರ್ಷಿಯಲ್ ಏರ್‌ಲೈನರ್ ಇರಬೇಕು" ಅಂದ ಷೇರ್‌ಖಾನ್.

ವಿಮಾನ ಬ್ಯಾರಕ್ಸ್ ಮೇಲಿಂದ, ನಮ್ಮ ತಲೆಗಳ ಮೇಲಿಂದ ಹಾರಿ ಹೋದಂತೆನಿಸಿತು. ಕ್ರಮೇಣ ಅದರ ಶಬ್ದ ದೂರವಾಗತೊಡಗಿತು.

"ಕ್ರಾಷ್ ಲ್ಯಾಂಡಿಂಗ್ ಮಾಡಲು ಸರಿಯಾದ ಜಾಗ ಹುಡುಕುತ್ತಿರುವಂತೆ ಕಾಣುತ್ತಾನೆ ಪೈಲಟ್......ಈ ಸ್ಯಾಂಡ್ ಸ್ವಾರ್ಮ್‌ನಲ್ಲಿ ಪೈಲಟ್‌ಗೆ ಏನು ತಾನೇ ಕಾಣುತ್ತದೆ......?" ನನಗೆ ಓವರಾಲ್‌ನೊಳಗೆ ಕೈಗಳಲ್ಲಿ ಬೆವರುದಯಿಸಿತ್ತು.

ಎತ್ತ ನೋಡಿದರೂ ಮರಳು ಗುಡ್ಡಗಳು. ಸಮತಲವೆಂದು ಕರೆಸಿಕೊಳ್ಳುವ ಪ್ರದೇಶವೇ ಕಾಣಿಸದು. ಆ ವೇಗದಲ್ಲಿ ಎಷ್ಟೇ ಕೇರ್‌ಫುಲ್ಲಾಗಿ ಲ್ಯಾಂಡ್ ಮಾಡಿದರೂ ಅಪಾಯ ಕಟ್ಟಿಟ್ಟ ಬುತ್ತಿ.

ಆಗ ನೆನಪಾಗಿತ್ತು ನನ್ನ ರೆಸ್ಪಾನ್ಸಿಬಿಲಿಟಿ. ಸಹ ಮಾನವನಾಗಿ ನನ್ನ ಕರ್ತವ್ಯ.

"ಷೇರ್‌ಖಾನ್ ! ತಕ್ಷಣ ಡಾಕ್ಟರ್ ಹೇಮಂತ್‌ನನ್ನೆಬ್ಬಿಸು. ಫಸ್ಟ್ ಏಡ್ ಕಿಟ್, ಕೈಗೆ ಸಿಕ್ಕಷ್ಟು ಓವರಾಲ್ಸ್ ತೆಗೆದುಕೊಂಡು ಬಾ......ನೋಡುತ್ತಿದ್ದರೆ ಇಲ್ಲೇ ಹತ್ತಿರದಲ್ಲೆಲ್ಲೋ ಲ್ಯಾಂಡಿಂಗ್ ಮಾಡಿದಂತಿದ್ದಾರೆ......" ಅಂದೆ.

ನನ್ನ ಧ್ವನಿಯಲ್ಲಿನ ಆತುರ ಷೇರ್‌ಖಾನ್ ಅರ್ಥ ಮಾಡಿಕೊಂಡವನಂತೆ "ಎಸ್ ಸರ್ !" ಎಂದು ಹೇಳಿ ಕ್ವಾರ್ಟರ್ಸ್‌ನೊಳಕ್ಕೆ ಓಡಿದ

ವಿಮಾನದ ಶಬ್ದ ಮತ್ತೆ ಹತ್ತಿರವಾಯಿತು.

ರೆಡ್, ಗ್ರೀನ್ ರೊಟೇಟಿಂಗ್ ಲ್ಯಾಂಡಿಂಗ್ ಲೈಟ್ಸ್ ಸ್ಪಷ್ಟವಾಗಿ ಕಾಣಿಸತೊಡಗಿದವು. ಅವುಗಳ ಜೊತೆಗೆ ಪ್ರಖರ ಕಾಂತಿ ಚಿಮ್ಮುವ ಹೆಡ್ ಲೈಟ್ಸ್ ಸಹ ಆನ್ ಮಾಡಿದ ಪೈಲಟ್.

ಆ ಬೆಳಕಿನ ಮೂಲಕ ಭೂಮಿಯಿಂದ ಸುಮಾರು ನೂರು ಅಡಿಗಳಷ್ಟು ಮೇಲಿದೆ ವಿಮಾನ ಎಂದು ಗ್ರಹಿಸಬಹುದಿತ್ತು.......... ಹೆಡ್ ಲೈಟ್ಸ್ ಬೆಳಕಲ್ಲಿ ಮಂಜಿನ ತೆರೆಯಂತೆ ಕಾಣುತ್ತಿತ್ತು ಗಾಳಿಯ ಬೀಸುವಿಕೆಗೆ ಎಗರುತ್ತಿದ್ದ ಮರಳು. ಬಹಳ ಹೊತ್ತು ಹಾಗೆಯೇ ಫ್ಲೈ ಮಾಡುತ್ತಿರಲಾಗದು ವಿಮಾನ. ಈ ಮರಳೆಲ್ಲಾ ಎಂಜಿನ್‌ನೊಳಕ್ಕೆ ನುಗ್ಗಿ ಈಗಾಗಲೇ ಎಂಜಿನ್ ನಿಷ್ಕ್ರಿಯ ಗೊಂಡಿದ್ದರೂ ಆಶ್ಚರ್ಯವಿಲ್ಲ.

ಲ್ಯಾಂಡಿಂಗ್ ವೀಲ್ಸ್ ಇನ್ನು ಹೊರಕ್ಕೆ ಬಂದಿಲ್ಲ.....ಚಕ್ರಗಳ ಮೇಲೆ ಈ ಮರಳಲ್ಲಿ ವಿಮಾನವನ್ನು ಇಳಿಸಲೋಗುವುದು ಅವಿವೇಕದ ಪರಮಾವಧಿ.......... ಪೈಲಟ್ ಬಹಳ ಬುದ್ಧಿವಂತ ಮತ್ತು ಎದೆಗಾರಿಕೆಯುವನಿದ್ದರೆ ಒಳಿತು.......... "ಬೆಲ್ಲಿ ಲ್ಯಾಂಡಿಂಗ್" ಮಾಡಲು ಪ್ರಯತ್ನಿಸಬಹುದು.

ಎಸ್.....ಈ ಪರಿಸ್ಥಿತಿಯಲ್ಲಿ ಚಕ್ರಗಳಿಲ್ಲದೇನೇ ವಿಮಾನವನ್ನು ಲ್ಯಾಂಡ್ ಮಾಡುವುದೊಳ್ಳೆಯದು. ಮರಳಿನ ಕಾರಣ ಕೆಳಗಿರುವ ಪೆಟ್ರೋಲ್ ಟ್ಯಾಂಕ್ ಒಡೆದು ಬೆಂಕಿ ಹತ್ತಿಕೊಳ್ಳುವ ಅಪಾಯವಿಲ್ಲ.

ಇದ್ದಕ್ಕಿದ್ದಂತೆ ವಿಮಾನದ ಶಬ್ದವೇ ಕೇಳಿಸದಂತಾಯಿತು.

ನಾವು ಮೂವರೂ ವಿಮಾನ ಬಿದ್ದು ಹೋದ ಸ್ಪಾಟ್ ಕಡೆಗೆ ವೇಗ ವಾಗಿ ಜಾಗ್ ಮಾಡಲು ಶುರು ಮಾಡಿದೆವು.

# 3

ರಾಜಾಸ್ತಾನ್ ಮರುಭೂಮಿ !

ದಿಗ್ರೇಟ್ ಇಂಡಿಯನ್ ಡೆಸರ್ಟ್ ಎಂದು ಹೆಸರಿಸಿದ್ದಾರದಕ್ಕೆ ಪರಿಣಿತರು. ಇಂಡಿಯನ್ ಸಹರಾ ಎಂದು ಕರೆಯುವುದುಂಟು.

ಆ ಮರಳು ಗಾಡಿನ ನಡುವೆ ಜೀವಾಣುಗಳ ಅಭಿವೃದ್ಧಿ ಪಡಿಸುವ ಸಂಶೋಧನೆ, ಭೂಗರ್ಭ ಸಂಶೋಧನೆ ನಡೆಸಲು ಭಾರತ ಸರ್ಕಾರದ ವತಿಯಿಂದ ಇಲ್ಲಿ ವಾಸ್ತವ್ಯ ಹೂಡಿದ್ದೇವೆ ಹತ್ತು ಜನ ಭೂಗರ್ಭ ವಿಜ್ಞಾನಿಗಳು.

ಈ ಪ್ರದೇಶವೆಲ್ಲಾ ಮರಳ ಸಾಮ್ರಾಜ್ಯ. ಕಾಲ್ದಾಗಳಾಗಲಿ. ಹೆದ್ದಾರಿಗಳಾಗಲಿ ಏರ್ ರೂಟ್ಸ್ ಆಗಲಿ ಈ ಪ್ರಾಂತ್ಯದ ಸಮೀಪಕ್ಕಿಲ್ಲವೇ ಇಲ್ಲವೆನ್ನಬಹುದು.

ಪ್ರತಿ ಬುಧವಾರ ಜೋಧ್‌ಪುರ್ ಮಿಲಿಟರಿ ಏರೋಡ್ರೋಂನಿಂದ ಒಂದು ವಿಮಾನ ಬಂದು ನಮಗೆ ವಾರಕ್ಕೆ ಸಾಕಾಗಿ ಮಿಗುವಷ್ಟು ಆಹಾರ ಪದಾರ್ಥಗಳನ್ನು ಪ್ಯಾರಾಚೂಟ್ಸ್ ಮೂಲಕ ಕೆಳಗಿಳಿಸಿ ಹೊರಟು ಹೋಗುತ್ತಿತ್ತು.

ಬಿಸಿಲು ಗಾಲದಲ್ಲಿ ಮ್ಯಾಕ್ಸಿಮಮ್ ಟೆಂಪರೇಚರ್, ಚಳಿಗಾಲದಲ್ಲಿ ತಳಮಟ್ಟದ ಟೆಂಪರೇಚರ್ ಈ ಪ್ರದೇಶದ ಶೀತೋಷ್ಣ ಸ್ಥಿತಿಯ ಸೂಚಕ !

ಸಮ್ಮರ್ ಶುರುವಾದೊಡನೆ ಭಯಂಕರ ಗಾಳಿಯೊಡಗೂಡಿದ ಸ್ಯಾಂಡ್ ಸ್ಟಾರ್ಮ್ ಇಲ್ಲ ಮಾಮೂಲು. ಆ ಮರಳು ಬಿರುಗಾಳಿಯ ಮಜಾ ಅನುಭವಿಸಿದವರಿಗೇ ಗೊತ್ತು !

ಏಪ್ರಿಲ್ ತಿಂಗಳಲ್ಲಂತೂ ಈ ಪ್ರದೇಶದ ಮೂಲಕ ಅಪ್ಪಿತಪ್ಪಿಯೂ ಯಾವುದೇ ವಿಮಾನ ಹಾದು ಹೋಗದು.

ವಿಮಾನ ಬಿದ್ದ ಕಡೆಗೆ ಹತ್ತು ಗಜಗಳಷ್ಟು ಓಡಿದವನು ತಟಕ್ಕನೆ ನಿಂತು

ಬಿಟ್ಟೆ. "ಸ್ಟಾಪ್ ಎವ್ರಿಬಡಿ !" ಎಂದು ಕೂಗಿಕೊಂಡೆ ಮಿದುಳಲ್ಲೇನೋ ಹೊಸ ಯೋಚನೆ ಸ್ಫುರಿಸಿ.

ಷೇರ್‌ಖಾನ್, ಡಾಕ್ಟರ್ ಹೇಮಂತನನ್ನ ಹಿಂದೆಯೇ ನಿಂತು ಬಿಟ್ಟರು.

ನಾನು ಹಿಂದೆ ತಿರುಗಿ ಬ್ಯಾರಕ್ಸ್ ಕಡೆಗೆ ಓಟಕಿತ್ತೆ. ಸ್ಟೋರ್ ರೂಂನೊಳಗಿಂದ ನೈಲಾನ್ ಹಗ್ಗದ ನಾಲ್ಕು ಸುತ್ತುಗಳನ್ನ ತೆಗೆದುಕೊಂಡು ಹೊರ ಬಂದೆ.

ಒಂದು ಹಗ್ಗದ ಕೊನೆಯನ್ನು ಬ್ಯಾರಕ್ಸ್ ವರಾಂಡ ಪಿಲ್ಲರ್‌ಗೆ ಬಿಗಿದು ಕಟ್ಟಿದೆ. ಮಿಕ್ಕವನ್ನು ಕೈನಲ್ಲಿಡಿದು ಅವರಿಬ್ಬರ ಬಳಿಗೆ ಬಂದೆ.

ಈ ಮರು ಭೂಮಿಯ ನಿಗೂಢ ಗರ್ಭದಲ್ಲಿ ಒಮ್ಮೆ ದಾರಿ ತಪ್ಪಿದರೆ ಕಾಂಪಾಸ್ ಸಹಾಯವಿಲ್ಲದೆ ರಾತ್ರಿಯ ವೇಳೆಯಲ್ಲಿ ದಾರಿ ಕಂಡು ಹಿಡಿಯಲು ಸಾಧ್ಯವೇ ಇಲ್ಲ. ವಿಮಾನ ಹುಡುಕುವ ಉತ್ಸಾಹದಲ್ಲಿ ನಾವು ದಾರಿ ತಪ್ಪಿದರೆ ಮರುಳು ಗುಡ್ಡಗಳ ತೆಕ್ಕೆಗೆ ನಾವು ಶಾಶ್ವತವಾಗಿ ಸೇರಿ ಬಿಡುವುದು ಗ್ಯಾರಂಟಿ !

ಅದ್ದರಿಂದಲೇ ಪರ್ವತಾರೋಹಿಗಳ ಪದ್ಧತಿಯಲ್ಲೇ ಹಗ್ಗದ ಸಹಾಯದಿಂದ ಮುಂದುವರೆಯುವ ನಿರ್ಧಾರಕ್ಕೆ ಬಂದದ್ದು ನಾನು.

ನಡೆಯುತ್ತಿದ್ದರೆ ಮರಳಲ್ಲಿ ಕಾಲುಗಳು ಹೂತು ಹೋಗುತ್ತಿದ್ದವು.

ಹಗ್ಗ ಒಂದೊಂದೇ ಸುತ್ತು ಸಡಲಿಸುತ್ತಾ ವಿಮಾನದ ಕಡೆಗೆ ಆದಷ್ಟು ವೇಗವಾಗಿ ನಡೆಯುತ್ತಿದ್ದೆವು. ಒಂದು ಹಗ್ಗ ಮುಗಿದೊಡನೆ ಅದರ ಕೊನೆಗೆ ಇನ್ನೊಂದನ್ನು ಗಂಟು ಹಾಕಿ ಮುನ್ನಡೆಯತೊಡಗಿದೆ.

ಒಂದೊಂದು ರೋಪ್ ಕಾಯಿಲ್ ಉದ್ದ ನೂರು ಗಜಗಳು. ಬ್ಯಾರೆಕ್ಸ್‌ನಿಂದ ಸುಮಾರು ನೂರು ಗಜಗಳಷ್ಟು ಮುಂದೆ ಬಂದಂತಿದ್ದೆವು.

ಷೇರ್‌ಖಾನ್ ಹೆಜ್ಜೆ ಹಾಕುತ್ತಾ ಕೈನಲ್ಲಿದ್ದ ಫ್ಲಾಷ್‌ಲೈಟ್ ಅರ್ಧ ಚಂದ್ರಾಕಾರದಲ್ಲಿ ತಿರುಗಿಸುತ್ತಿದ್ದ.

ಮೂರನೇ ರೋಪ್ ಕಾಯಿಲ್ ಸಹ ಗಂಟು ಹಾಕಿದೆವು, ಸ್ವಲ್ಪ ಮುಂದೆ ಬಂದೊಡನೆ ಗಾಳಿಯಲ್ಲಿ ವಿಚಿತ್ರ ಶಬ್ದವೊಂದು ಸೇರ್ಪಡೆಯಾಯಿತು. ವಿಮಾನದ ಅಲ್ಯೂಮಿನಿಯಂ ಷೀಟ್ ಮೇಲೆ ಮರಳು ಬೀಳುತ್ತಿರುವ ಶಬ್ದ !

ಮೂವರೂ ಒಂದು ಕ್ಷಣ ಪ್ರತಿಮೆಗಳಂತೆ ನಿಂತೆವು.

ಫ್ಲ್ಯಾಷ್‌ಲೈಟ್ ಬೆಳಕಲ್ಲಿ ವಿಮಾನದ ಟೈಲ್ ಎಂಡ್ ಕಾಣಿಸಿತು.

ಭಾರತದ ತ್ರಿವರ್ಣ ಧ್ವಜ, ಅದರ ಕೆಳಗೆ 'ಐ ಎ' ಎಂದು ಪೈಂಟ್ ಮಾಡಿರುವ ಕೆಂಪು ಅಕ್ಷರಗಳು ಕಾಣಿಸುತ್ತಿದ್ದವು.

ವಿಮಾನದ ಸುತ್ತಲೂ ಆಗಲೇ ಗಾಳಿ ಮರಳ ದಿಬ್ಬಗಳನ್ನು ಸೃಷ್ಟಿಸಲು ಶುರು ಮಾಡಿ ಬಿಟ್ಟಿತ್ತು.

ಫ್ಲ್ಯಾಷ್ ಲೈಟ್ ಬೆಳಕು ತುಸು ಪಕ್ಕಕ್ಕೆ ತಿರುಗಿಸಿದ ಷೇರ್‌ಖಾನ್. ವಿಮಾನದ ಕಿಟಕಿಗಳು, ಒಂದು ವಿಂಗ್ ಕಾಣಿಸಿದವು.

ವಿಂಡೋ ಗ್ಲಾಸಸ್ ಒಳಗಿಂದ ಸಣ್ಣ ಬೆಳಕು ತುಸುವಾದರೂ ಮೂವ್‌ಮೆಂಟ್ ಇರುವಂತೆ ಕಾಣುತ್ತಿರಲಿಲ್ಲ ಒಳಗೆ.

ಸರಸರನೆ ವಿಮಾನದ ಸುತ್ತಲೂ ಒಂದು ಪ್ರದಕ್ಷಿಣೆ ಹಾಕಿ ಬಂದ ಷೇರ್‌ಖಾನ್.

"ಕ್ಯಾಬಿನ್‌ನಲ್ಲಿ ಯಾರೋ ಕದಲಿದಂತಿತ್ತು ಸಾರ್ !" ಅಂದ.

ಬಹುಶಃ ವಿಮಾನದಲ್ಲಿ ಪೈಲಟ್, ಕ್ರ್ಯೂ ಬಿಟ್ಟರೆ ಬೇರ್‍ಯಾರೂ ಇಲ್ಲವೇನೋ ? ಆದ್ದರಿಂದಲೇ ಒಳಗೆ ಯಾವುದೇ ಶಬ್ದವಿರುವಂತಿಲ್ಲ ಅಂದುಕೊಂಡೆ,

ಅಂತಹ ಅತಿಕ್ಲಿಷ್ಟ ಪರಿಸ್ಥಿತಿಯಲ್ಲೂ ವಿಮಾನಕ್ಕೆ ಯಾವುದೇ ಅಪಾಯವಾಗದಂತೆ ಬೆಲ್ಲಿ ಲ್ಯಾಂಡಿಂಗ್ ಮಾಡಿದ ಪೈಲಟ್ ಎಬಿಲಿಟಿಯನ್ನು ಮನಸ್ಸಿನಲ್ಲೇ ಅಭಿನಂದಿಸದೇ ಇರಲಾಗಲಿಲ್ಲ.

ಮೂವರೂ ವಿಮಾನದ ಮುಂಭಾಗಕ್ಕೆ ಬಂದೆವು.

ಕಾಕ್‌ಪಿಟ್‌ನಲ್ಲಿ ಮೂವ್‌ಮೆಂಟ್ ಇಲ್ಲ. ಜೋರಾಗಿ ಬೀಸುತ್ತಿರುವ ಗಾಳಿಯಿಂದಾಗಿ ಮರಳು ವಿಂಡ್‌ಷೀಲ್ಡ್ ಗ್ಲಾಸಸ್ ಮೇಲೆ ಬಾಂಬ್‌ಗಳಿಂದ ಸುರಿವಿದಂತೆ ದಟ್ಟವಾಗಿ ಬೀಳುತ್ತಿತ್ತು.

ಫ್ಲ್ಯಾಷ್ ಲೈಟ್ ಬೆಳಕು ಗ್ಲಾಸಸ್ ಮೇಲೆ ಫೋಕಸ್ ಮಾಡಿದ ಷೇರ್‌ಖಾನ್.

ಕ್ಯಾಬಿನ್‌ನೊಳಗೆ ಯಾರದೋ ತಲೆ ಮಾತ್ರ ಕಾಣಿಸುತ್ತಿತ್ತು. ಪೈಲಟ್ ಇರಬಹುದೇ ?

ಲೈಟ್ ಆರಿಸಿ ಮತ್ತೆ ಹತ್ತಿಸಿದ. ಹಾಗೆಯೇ ನಾಲ್ಕೈದು ಸಲ ಗಾಜಿನ

ಮೇಲೆ ಬೆಳಕು ಪ್ರಸರಿಸುವಂತೆ ಮಾಡಿದ. ಒಳಗಿರುವವರಿಗೆ ಅದರಿಂದ ಹೊರಗೆ ಜನರಿದ್ದಾರೆಂದು ತಿಳಿಯಲೆಂಬ ಪ್ರಯತ್ನ ಅದು.

ಒಳಗೆ ಕಿಂಚಿತ್ತಾದರೂ ಚಲನೆಯಿಲ್ಲ. ನಾನು ಷೇರ್‌ಖಾನ್ ಕಡೆಗೆ ನೋಡಿದೆ. ಷೇರ್‌ಖಾನ್ ಮತ್ತೊಮ್ಮೆ ಲೈಟ್ ಹತ್ತಿಸಿ ಆರಿಸಿ ಲೊಚ ಗುಟ್ಟುತ್ತಾ ತಲೆಯಾಡಿಸಿದ.

"ಸ್ವಲ್ಪ ಹೊತ್ತಿಗೆ ಮೊದಲು ನಾನು ನೋಡಿದಾಗ ಕ್ಯಾಬಿನ್‌ನಲ್ಲಿ ಯಾರೋ ಓಡಾಡುತ್ತಿರುವಂತೆ ಈ ಕಿಟಕಿಯಲ್ಲೇ ಕಾಣಿಸಿತು !" ಅಂದ.

"ಬಹುಶಃ ಸ್ಟ್ರೈನ್‌ನಿಂದಾಗಿ ಮೂರ್ಛೆ ಹೋಗಿರಬೇಕೆನ್ನಿಸುತ್ತದೆ. ಬಾಗಿಲು ತೆರೆಯುವ ಪ್ರಯತ್ನ ನಾವೇ ಮಾಡುವುದೊಳ್ಳೆಯದು" ಅಂದೆ ವಿಮಾನದ ಪಕ್ಕಕ್ಕೆ ನಡೆಯುತ್ತಾ.

ವಿಮಾನದ ಪ್ರವೇಶ ದ್ವಾರ ವಿಮಾನದೊಂದು ಭಾಗದಲ್ಲಿ ವಿಲೀನ ಗೊಂಡು ಬಾಡಿಯಲ್ಲೇ ಸೇರಿ ಹೋಗಿತ್ತು. ಹೊರಗಿನಿಂದ ಹೇಗೆ ತೆಗೆಯುವು ದೆಂದೇ ಅರ್ಥವಾಗಲಿಲ್ಲ.

ಷೇರ್‌ಖಾನ್ ಒಂದು ಸಲ ಡೋರ್ ಸುತ್ತಲೂ ನೋಡಿ ನಿರಾಸೆಯಿಂದ ಏನೂ ಮಾಡಲಾಗದೆಂಬಂತೆ ತಲೆ ಅಲ್ಲಾಡಿಸಿದ.

"ಕಿಟಕಿ ಗಾಜುಗಳನ್ನು ಒಡೆದು ಹಾಕಿದರಾಗದೇ ?" ಅಂದ ಡಾಕ್ಟರ್ ಹೇಮಂತ್.

ಷೇರ್‌ಖಾನ್ ಕೈನಲ್ಲಿದ್ದ ಪಿಕ್ ಏಕ್ಸ್‌ನಿಂದ ಗಾಜಿನ ಮೇಲೆ ಬಲವಾಗಿ ಎರಡು ಸಲ ಹೊಡೆದ. ಆ ಏಟುಗಳಿಂದೇನೂ ಪ್ರಯೋಜನವಾಗಲಿಲ್ಲ. ಸಣ್ಣ ಕ್ರ್ಯಾಕ್ ಸಹ ಬೀಳಲಿಲ್ಲ.

"ನೋ.....ಅದರಿಂದೇನೂ ಪ್ರಯೋಜನವಿಲ್ಲ. ವಿಮಾನ ಪ್ರೆಷರ್ ಪ್ರೂಫ್ ! ಎಷ್ಟೋ ಸಾವಿರ ಪೌಂಡ್‌ಗಳ ಏರ್ ಪ್ರೆಷರ್ ಭರಿಸುವ ಶಕ್ತಿಯಿರುವ ಗಾಜುಗಳವು. ಸಾಮಾನ್ಯ ಪರಿಕರಗಳಿಂದ ಆ ಗಾಜುಗಳನ್ನೊಡೆಯುವುದೆ ಅಸಾಧ್ಯ !" ಅಂದ ಬೇಸತ್ತು.

ಡಾಕ್ಟರ್ ಹೇಮಂತ್ ತಟಕ್ಕನೆ ನನ್ನ ಕೈ ಒತ್ತಿದ. "ಶಿವಾ ! ಸೀ ದಟ್.....!" ಅಂದ ಒಂದು ಕಿಟಕಿಯ ಕಡೆಗೆ ಕೈ ತೋರಿಸಿ.

ಕಿಟಕಿಯ ಪಕ್ಕದ ಸೀಟ್‌ನಲ್ಲಿ ಯಾರೋ ಎದ್ದು ನಿಂತಿದ್ದರು. ಮುಖ ಸರಿಯಾಗಿ ಕಾಣುತ್ತಿರಲಿಲ್ಲ.

ಷೇರ್‌ಖಾನ್ ಪಿಕ್ ಏಕ್ಸ್‌ನಿಂದ ಕಿಟಕಿಯ ಮೇಲೆ ತಟ್ಟಿದ. ಆ ವ್ಯಕ್ತಿ ಕಿಟಕಿಯ ಹೊರಗಡೆಗೆ ನೋಡಿದ. ಹೊರಗೆ ಕತ್ತಲಾವರಿಸಿರುವ ಕಾರಣ ನಾದವನಿಗೆ ಕಾಣಿಸವು. ಆದ್ದರಿಂದಲೇ ಷೇರ್‌ಖಾನ್ ಮೇಲೆ ಬೀಳುವಂತೆ ಟಾರ್ಚ್ ಬೆಳಕು ಫೋಕಸ್ ಮಾಡಿದೆ ನಾನು.

ಅವನು ಅಲ್ಲಾಡುವ ಗೋಜಿಗೇ ಹೋಗದೆ ಕಿಟಕಿಯ ಮೂಲಕ ನಮ್ಮನ್ನೇ ನೋಡುತ್ತಿದ್ದು ಬಿಟ್ಟ.

"ಮೈಗಾಡ್ ! ಒಳಗೆ ಬಹಳ ಜನರಿರುವಂತಿದ್ದಾರೆ......" ಕೂಗಿಕೊಂಡ ಡಾಕ್ಟರ್ ಹೇಮಂತ್.

ಕಿಟಕಿಯ ಮೂಲಕ ಒಳಗೆ ಅನೇಕರಿರುವಂತೆ ನೆರಳುಗಳು ಕಾಣಿಸುತ್ತಿದ್ದವು.

"ವಿಮಾನ ಕ್ರಾಷ್ ಆದಾಗಿನ ಒತ್ತಡಕ್ಕೆ ಅವರೆಲ್ಲಾ ಮೂರ್ಛೆ ಹೋಗಿರಬೇಕು" ಅಂದೆ.

ಕಿಟಕಿಯಿಂದ ಷೇರ್‌ಖಾನ್ ಕಡೆಗೆ ನೋಡುತ್ತಿದ್ದವನು ಬಾಗಿಲ ಕಡೆಗೆ ಸನ್ನೆ ಮಾಡಿದ.

ಒಳಗೆ ಹಲವರ ಆತಂಕದ ಓಡಾಟ ನೆರಳುಗಳ ಮುಖೇನ ನಮಗೆ ತಿಳಿಯುತ್ತಿತ್ತು. ಅವರ ಆಂದೋಳನೆ ನನಗರ್ಥವಾಗುತ್ತಿತ್ತು. ಕೆಲ ಕ್ಷಣಗಳಲ್ಲೇ ಸಾಯಲಿದ್ದೇವೆಂದು ತಿಳಿದು, ಮಾನಸಿಕವಾಗಿ ಆ ಆಲೋಚನೆಗೆ ಅಡಾಪ್ಟ್ ಆಗುವ ಮೊದಲೇ ಮೂರ್ಛೆ ಹೋಗಿ, ಎಚ್ಚರಾದಾಗ ಇನ್ನು ಬದುಕೇ ಇದ್ದೇವೆಂಬ ಕಟು ಸತ್ಯ ಮನವರಿಕೆಯಾದಾಗ ಕೆಲ ಕ್ಷಣ ಮೈಂಡ್ ಬ್ಲಾಂಕಾಗಿ ಬಿಡುವುದು ಸಹಜ. ವಿಚಕ್ಷಣಾ ಜ್ಞಾನ ಇನ್ನೆಲ್ಲಿದ್ದೀತು ಆಗ !

ಮೂವರೂ ವಿಮಾನದ ಬಾಗಿಲ ಬಳಿಗೆ ಓಡಿದೆವು.

ಒಳಗೆ ಬೋಲ್ಟ್ ತೆಗೆದರೂ ಜೋರಾಗಿ ಬೀಸುತ್ತಿರುವ ಗಾಳಿಯ ಕಾರಣ ಬಾಗಿಲು ತೆರೆಯಲು ಬಹಳ ಕಷ್ಟವಾಗಿತ್ತು. ಬಾಗಿಲು ತೆರೆದೊಡನೆ ಒಳಗಿನ ಬೆಳಕು ನಮ್ಮ ಮೇಲೆ ಬಿದ್ದಿತ್ತು. ಬಾಗಿಲು ತೆಗೆದಾತ ಗಾಳಿಯ ಹೋರಿಗೆ ಕ್ಷಣ ಹಿಂದಕ್ಕೆ ವಾಲಿದ.

ಸರಸರನೆ ವಿಮಾನದೊಳಕ್ಕೆ ಹತ್ತಿದೆವು.

ತೆರೆದ ಬಾಗಿಲಿಂದ ಮರಳು ಮಳೆ ಹನಿಗಳೋಪಾದಿಯಲ್ಲಿ ಒಳಕ್ಕೆ ಚಿಮ್ಮಿ ಬರುತ್ತಿತ್ತು. ನಾವು ಒಳಕ್ಕೆ ಹತ್ತಿದೊಡನೆ ಒಂದು ಕ್ಷಣ ಪಿನ್ ಡ್ರಾಪ್ ಸೈಲೆನ್ಸ್ ಆವರಿಸಿತಲ್ಲಿ.

"ಈ ಫ್ರೆಂಡ್ಸ್.....ಟೇಕಿಟ್ ಈಸಿ....." ಅಂದೆ ಎಲ್ಲರ ಕಡೆ ನೋಡುತ್ತಾ.

ಡಾಕ್ಟರ್ ಹೇಮಂತ್, ಷೇರ್‌ಖಾನ್ ನನ್ನ ಹಿಂದೆಯೇ ತಮ್ಮೊಡನೆ ತಂದ ಸಾಮಾಗ್ರಿಗಳೊಡನೆ ನಿಂತಿದ್ದರು. ನಮ್ಮ ಮರುಭೂಮಿಯ ಯಾವ ಫಾರ್ಮ್‌ನಲ್ಲಿ ಕಂಡವರ್‍ಯಾರೇ ಆದರೂ ಎರಡು ಕ್ಷಣ ಅವಾಕ್ಕಾಗಿ ನಿಲ್ಲುವುದು ಸಹಜವೇ. ಕಣ್ಣುಗಳ ರಕ್ಷಣೆಗೆಂದಿರಿಸಿಕೊಂಡಿದ್ದ ಗಾಗಲ್ಸ್ ತೆಗೆದು ಪ್ಲೆಸೆಂಟಾಗಿ ಸ್ಮೈಲ್ ಮಾಡಿದೆ.

"ಹೂ ದ ಹೆಲ್ ಆರ್ ಯೂ ?" ಅಂದನೊಬ್ಬ ವೃದ್ಧ ವ್ಯಕ್ತಿ ಸೀಟುಗಳ ಮಧ್ಯದಿಂದ ಮೇಲೆದ್ದು ನಿಲ್ಲುತ್ತಾ.

"ಇದು ಯಾವ ಏರ್‌ಪೋರ್ಟ್ ? ಬಾಂಬೆಗೆ ಹೋಗಲು ಇನ್ನೂ ಎಷ್ಟು ಸಮಯ ಹಿಡಿಯುತ್ತದೆ ?" ಆತುರದೊಡನೆ ಕೇಳುತ್ತಿದ್ದ ಮುಂದಿನ ಸೀಟಿನಲ್ಲಿದ್ದ ಇನ್ನೊಬ್ಬ.

"ಮೈಗುಡ್ ನೆಸ್ ! ಇವರ್‍ಯಾರೋ ಡಕಾಯಿತರಂತಿದ್ದಾರೆ....." ಅರಚಿದಳೊಬ್ಬಳು ಹೆಣ್ಣು ಕೀರಲು ಧ್ವನಿಯಲ್ಲಿ.

"ಸ್ಟಾಪಿಟ್.....ಫೂಲ್ಸ್!" ಕೂಗಿಕೊಂಡೆ ಕೋಪದಿಂದ. "ನೀವೆಂತಹ ಅಪಾಯದಲ್ಲಿ ಸಿಕ್ಕಿ ಬಿದ್ದಿರುವಿರೆಂದು ನಿಮಗಿನ್ನೂ ಅರ್ಥವಾದಂತೆ ಕಾಣಿಸುತ್ತಿಲ್ಲ. ನೀವು ಈಗಿರುವುದು ರಾಜಾಸ್ಥಾನ್ ಮರುಭೂಮಿಯ ಮಧ್ಯಭಾಗದಲ್ಲಿ. ನಿಮ್ಮ ವಿಮಾನ ಇಲ್ಲಿ ಕ್ರಾಷ್ ಆಗಿದೆ. ಇನ್ನರ್ಧ ಗಂಟೆ ನೀವಿಲ್ಲೇ ಹೀಗೆಯೇ ಇದ್ದರೆ ಸ್ಯಾಂಡ್ ಸ್ಟಾರ್ಮ್‌ಗೆ ಸಿಕ್ಕಿ ಮರಳ ಗುಡ್ಡದೊಳಗೆ ಶಾಶ್ವತ ಸಮಾಧಿಯಾಗಿ ಬಿಡುವಿರಿ !"

ಎಲ್ಲರೂ ಏಕ್‌ದಂ ಬೆದರಿ ಬಿಟ್ಟರು. ನಾನು ಹೇಳಿದ್ದನ್ನು ನಂಬದವರಂತೆ ನನ್ನನ್ನೇ ಕಣ್ಣರಳಿಸಿ ನೋಡುತ್ತಿದ್ದು ಬಿಟ್ಟರು.

"ವೆಲ್.....ನಿಮ್ಮ ಪೈಲಟ್ ಎಲ್ಲಿ ?" ಕೇಳಿದೆ ಅವರೆಲ್ಲರ ಕಡೆ ನೋಡುತ್ತಾ.

"ಏರ್ ಹೋಸ್ಟೆಸ್ ಸಹ ಕಾಣಿಸುತ್ತಿಲ್ಲ" ಅಂದ ಡಾಕ್ಟರ್ ಹೇಮಂತ್.

ಅವರೆಲ್ಲರನ್ನೂ ನಮ್ಮ ಸ್ಥಾವರಕ್ಕೆ ಕರೆದೊಯ್ಯಲು ರೆಡಿ ಮಾಡುವಂತೆ ಸೂಚಿಸಿ ನಾನು ಪೈಲಟ್ ಕ್ಯಾಬಿನ್‌ನೊಳಕ್ಕೆ ನಡೆದೆ. ಬಾಗಿಲು ತಳ್ಳಿಕೊಂಡು ಒಳಕ್ಕೆ ಹೋದೆ

ಫ್ಲೈಟ್ ಕ್ಯಾಪ್ಟನ್ ಕಂಟ್ರೋಲ್ ಸ್ಟಿಕ್ ಮೇಲೆ ತಲೆಯೊರಗಿಸಿ ಮುಂದಕ್ಕೆ ವಾಲಿದ್ದ. ಅವನು ಸತ್ತಿದ್ದಾನೆಂದು ದೇಹವಿದ್ದ ವಿಚಿತ್ರ ಕೋನ ದಿಂದಲೇ ತಿಳಿಯಬಹುದಿತ್ತು. ಕೋ ಪೈಲಟ್‌ದೂ ಅದೇ ಸ್ಥಿತಿಯೇ.

ವಿಮಾನ ಬೆಲ್ಲಿ ಲ್ಯಾಂಡಿಂಗ್ ಮಾಡುವಾಗ ಸಂಪೂರ್ಣ ಒತ್ತಡ ಬೀಳು ವುದು ವಿಮಾನದ ಮುಂಭಾಗದ ಮೇಲೆಯೇ.

ಆ ಪ್ರೆಷರ್‌ನಿಂದಾಗಿ ಸಾವಪ್ಪಿರಬೇಕು.

ಕ್ಯಾಬಿನ್‌ನಲ್ಲಿರುವ ವಸ್ತುಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಎಲ್ಲ ಕಡೆಗೆ ಹರಡಿಕೊಂಡಿದ್ದವು.

ಕೋ ಪೈಲಟ್ ಕೈ ಹಿಡಿದು ನೋಡಿದೆ. ಪ್ರಾಣವಿಲ್ಲವೆಂದು ತಿಳಿಯು ತ್ತಲೇ ಇತ್ತು. ಹಿಂದೆ ತಿರುಗಿ ಹೋಗಲೋದವನು ಥಟಕ್ಕನೆ ನಿಂತೆ. ಹೂಗೆ ಏನೋ ಜಿಗುಟಾಗಿ ಸೆಲ್ಲೋ ಟೇಪ್‌ನಂತೆ ಅಂಟಿಕೊಂಡಂತಾಗಿತ್ತು. ಕೆಳಕ್ಕೆ ಬಗ್ಗಿ ಪರೀಕ್ಷಿಸಿದೆ. ಸಮ್ ಸಾರ್ಟ್ ಆಫ್ ಬ್ಲಾಕ್ ಆಯಿಲ್......ಒಂದು ಕಡೆ ಮಡುಗಟ್ಟಿರುವಂತೆ ಕಾಣಿಸಿತು.

ಟಾರ್ಚ್ ಆನ್ ಮಾಡಿದೆ.

ರಕ್ತ......ಕಣ್ಣಿಗೆ ರಾಚುತ್ತಿರುವ ರೆಡ್ ಬ್ಲಡ್ !

ಕ್ರಾಷ್ ಲ್ಯಾಂಡಿಂಗ್‌ನಲ್ಲಿ ಯಾವುದೋ ಕಂಬಿಯೋ, ಗೇರೋ ಪೈಲಟ್ ದೇಹಕ್ಕೆ ಚುಚ್ಚಿಕೊಂಡಿರಬೇಕು. ಗ್ಲಾಸ್ ಮೇಲೆ ಮರಳು ಮಳೆ ಹನಿಗಳಂತೆ ಬೀಳುತ್ತಾ ವಿಚಿತ್ರ ಶಬ್ದವನ್ನು ಸೃಷ್ಟಿಸಿತ್ತು. ಒಂದು ಕ್ಷಣ ಬೆನ್ನು ಹುರಿಗೆ ಲೋಹ ಸ್ಪರ್ಶವಾದಂತಾಯಿತು ನನಗೆ.

ಥಟಕ್ಕನೆ ಬಾಗಿಲು ತೆರೆದುಕೊಂಡು ಹೊರಬಿದ್ದೆ.

ಅಷ್ಟೊತ್ತಿಗೆ ಪ್ರಯಾಣಿಕರನ್ನೆಲ್ಲಾ ಡಾಕ್ಟರ್ ಹೇಮಂತ್ ಜೊತೆಗೆ ಬ್ಯಾರಕ್ಸ್‌ಗೆ ಕಳಿಸಿ ವಿಮಾನವನ್ನೆಲ್ಲಾ ರೌಂಡ್ ಹೊಡೆಯುತ್ತಿದ್ದ ಶೇಖ್

ಖಾನ್. ನನ್ನನ್ನು ನೋಡಿದೊಡನೆ ತನ್ನ ಹಿಂದೆ ಬರುವಂತೆ ಸನ್ನೆ ಮಾಡಿ ವಿಮಾನದ ಕೊನೆಗೆ ನಡೆದ.

ಕೊನೆಯ ಸಾಲಿನ ಸೀಟುಗಳ ನಡುವೆ ಏರ್ ಹೋಸ್ಟೆಸ್ ಬಿದ್ದಿದ್ದಳು.

ತೀರಾ ಅಸಹಜವಾಗಿ ಯಾರೋ ಬಲವಂತವಾಗಿ ಅಲ್ಲಿ ಸೆದು ಹೋಗಿರುವಂತೆ ಆಲ್‌ಮೋಸ್ಟ್ ಸೀಟುಗಳ ಮಧ್ಯದಲ್ಲಿ ತುರುಕಿರುವಂತೆ ಕಾಣಿಸುತ್ತಿತ್ತು.

"ಡೆಡ್ !" ಅಂದೆ ವಿಷಾದದೊಡನೆ ಆ ಸುಂದರ ಮುಖವನ್ನೇ ದಿಟ್ಟಿಸುತ್ತಾ.

ಅಡ್ಡಡ್ಡ ತಲೆಯಾಡಿಸಿದ ಷೇರ್‌ಖಾನ್, ಕುತ್ತಿಗೆಯ ಕಡೆಗೆ ತೋರಿಸುತ್ತಾ. ಅಗ ನೋಡಿದೆ ಕೆಂಪಗೆ, ಉಬ್ಬಿ ಯಾರೋ ಕೈಗಳನ್ನೂರಿ ಹಿಸುಕಿರುವ ಸ್ಪಷ್ಟ ಗುರುತು !

"ಮೈಗಾಡ್..... ಮರ್ಡರ್ !"

ಸರ್ರನೆದ್ದು ಹಿಂದಕ್ಕೆ ತಿರುಗಿ ಕ್ಯಾಬಿನ್‌ನೊಳಕ್ಕೆ ಓಡಿದೆ. ಷೇರ್‌ಖಾನ್ ಸಹ ಹಿಂಬಾಲಿಸಿದ.

ಕೋ ಪೈಲಟ್‌ನನ್ನು ಸೀಟ್‌ನಿಂದ ಕೆಳಗಿಳಿಸಿದೆ. ಅಂಗಾಂತಾಗಿ ಮಲಗಿಸಿದೊಡನೆ ಹಣೆಯ ಕೆಳಗೆ, ಎರಡು ಹುಬ್ಬುಗಳು ಸೇರುವ ಜಾಗದಲ್ಲಿ ಸುತ್ತಲೂ ಕಪ್ಪಗಾರುವ ಕೆಂಪು ರಂಧ್ರ ! ಪಿಸ್ತೂಲೊಂದರ ಗುಂಡು ಮಾಡಿರುವ ರಂಧ್ರ !

ಕ್ಷಣ ನಿಂತ ಹೃದಯ ವೇಗವಾಗಿ ಜಾಡಿತ್ತಲು ಶುರುವಾಯಿತು.

ವಿಮಾನದ ಕ್ಯಾಪ್ಟನ್ ಸಹ ಸತ್ತಿರುವುದು ಅದೇ ರೀತಿಯಲ್ಲೇ !

ತ್ರೀ ಕೋಲ್ಡ್ ಬ್ಲಡೆಡ್ ಮರ್ಡರ್ಸ್ !

# 4

ಕೊಲೆ ! ಮೂರು ಕೊಲೆಗಳು !!

ವಿಮಾನ ಕ್ರ್ಯಾಷ್ ಆದಾಗ ಡೆಡ್ ಬಾಡಿಗಳನ್ನು ನೋಡುವ ಪರಿಸ್ಥಿತಿ ಉದ್ಭವಿಸುತ್ತದೆ ಎಂದು ಮನಸ್ಸು ಕಲ್ಲು ಮಾಡಿಕೊಂಡೇ ಬಂದಿದ್ದ ನನಗೆ..... ಕೊಲೆಯಾದ ದೇಹಗಳನ್ನು ನೋಡುವ ಊಹೆ ತೃಣ ಮಾತ್ರವೂ ಇರಲಿಲ್ಲ ಡೆಲ್ಲಿ–ಟು–ಬಾಂಬೆ ಫ್ಲೈಟ್ ಅದು ಎಂಬ ಡೀಟೈಲ್ ಆಗಲೇ ಸಂಗ್ರಹಿಸಿದ್ದ ಷೇರ್‌ಖಾನ್.

ಆ ಫ್ಲೈಟ್ ಪ್ರಯಾಣಿಸುವ ರೂಟ್ ಈ ವಿಮಾನ ಬಿದ್ದ ಜಾಗದಿಂದ ನಾಲ್ಕು ಹಂದಾರಿಗಳಷ್ಟು ದೂರ !

ಯಾರಾದರೂ ವಿಮಾನವನ್ನು ಬಲವಂತವಾಗಿ ಇತ್ತ ಕಡೆಗೆ ತಿರುಗಿಸಿದರೇ ? ಯಾರವರು ? ಪ್ರಯಾಣಿಕರು ಯಾರೂ ಸತ್ತಿಲ್ಲ ಪ್ರಯಾಣಿಸಿದ ಹದಿಮೂರು ಜನರೂ ಸುರಕ್ಷಿತವಾಗಿದ್ದಾರೆ.

ವಿಮಾನ ಹೊರಟ ಸ್ವಲ್ಪ ಹೊತ್ತಿಗೆ ಎಲ್ಲರೂ ನಿದ್ರೆ ಹೋದಂತೆ ಯಾರಿಗೂ ಏನೂ ಗೊತ್ತಿಲ್ಲದಂತೆ ಕಾಣಿಸುತ್ತಲಿದೆ. ಅದು ಹೇಗೆ ಸಾಧ್ಯ ? ಅಥವ ಹದಿಮೂರು ಜನರೂ ಈ ಅಪರಾಧದಲ್ಲಿ ಪಾಲುದಾರರೇ ? ವಿಮಾನವನ್ನು ಈ ರೀತಿ ಹೈಜಾಕ್ ಮಾಡಿದ ಕಾರಣವಾದರೂ ಏನು ? ಏನಿರಬಹುದು ಇದರ ಹಿನ್ನೆಲೆ ?

ವಿಮಾನದ ಪೈಲಟ್ಸ್, ಏರ್‌ಹೋಸ್ಟೆಸ್ ಬದುಕಿದ್ದರೆ ತಮ್ಮನ್ನು ಗುರುತಿಸುವರೆಂದು ಕೊಂದು ಬಿಟ್ಟರೇ ? ಗುಡ್ ಗಾಡ್ ! ಹಾಗೇ ಆಗಿರಬೇಕು... ವಿಮಾನವನ್ನು ಬಹಳ ಕೇರ್‌ಫುಲ್ಲಾಗಿ ಈ ಮರುಭೂಮಿಯ ನಡುವೆ ಬೆಲ್ಲಿ ಲ್ಯಾಂಡಿಂಗ್ ಮಾಡಿದೊಡನೆ ತಮ್ಮ ರಹಸ್ಯ ಕಾಪಾಡಿಕೊಳ್ಳಲು ಈ ದಾರುಣ ಕೃತ್ಯವೆಸಗಿರಬೇಕು.

ಬಾಸ್ಟರ್ಡ್ಸ್..... ಕೋಲ್ಡ್ ಬ್ಲಡೆಡ್ ಮರ್ಡರರ್ಸ್ ! ಹೈಜಾಕರ್ಸ್ ಯಾರೇ ಆಗಿರಲಿ.....ಅವರು ಕೊಲ್ಲಲು ರೆಡಿಯಾಗಿಯೇ ಈ ಕೆಲಸ ಮಾಡಿದ್ದಾರೆ !

ಮತ್ತೆ ನೈಲಾನ್ ರೋಪ್ ಹೆಲ್ಪ್ನೊಡನೆಯೇ ಸ್ಥಾವರಕ್ಕೆ ಹಿಂತಿರುಗುವಾಗ ಆ ಕಂಗೆಡಿಸುವ ಯೋಚನೆಗಳೇ ಮನದಲ್ಲಿ. ನಾವು ರಕ್ಷಿಸಿರುವ ಹದಿಮೂರು ಜನರಲ್ಲೇ ಕೊಲೆಗಾರರಿದ್ದಾರೆಂದು ಯೋಚಿಸಿದರೇನೇ ಮೈ ಜಲದರಿಸುತ್ತಿತ್ತು.

ಸ್ಥಾವರದಲ್ಲಿ ಲೆಕ್ಕಕ್ಕೆ ನಾವು ಹತ್ತು ಜನರಿದ್ದರೂ ಏಳು ಜನ ನಾರ್ತ್ ವೆಸ್ಟ್ ಡೈರೆಕ್ಷನ್‌ನಲ್ಲಿ ಇಂಟೆಂಸಿವ್ ರಿಸರ್ಚ್‌ಗೆಂದು ಎರಡು ದಿನಗಳ ಹಿಂದೆಯೇ ಹೊರಟು ಹೋಗಿದ್ದರು ಮತ್ತೆ ಅವರ ಹಿಂದಿರುಗುವುದು ಹತ್ತು ದಿನಗಳ ನಂತರವೇ.

ಡಾಕ್ಟರ್ ಹೇಮಂತ್, ಷೇರ್‌ಖಾನ್, ನಾನು.....ಮೂವರಷ್ಟೇ ಈಗಿರುವುದು. ನಾವೇ ಇವರನ್ನು ಹ್ಯಾಂಡಲ್ ಮಾಡಬೇಕು. ಅದರಲ್ಲೂ ಮಾರಕಾಸ್ತ್ರಗಳ ಹೊಂದಿರುವ ಅತಿ ಕ್ರೂರ ಹಂತಕರಿವರು.

ಸ್ಥಾವರವನ್ನು ಸೇರಿಕೊಂಡೊಡನೆ ವೈರ್‌ಲೆಸ್ ಟ್ರಾನ್ಸ್‌ಮಿಟರ್ ಮೂಲಕ ಜೋದ್‌ಪುರ್ ಬೇಸ್ ಕಾಂಟಾಕ್ಟ್ ಮಾಡಿ ವಿಷಯ ತಿಳಿಸಿ ತಕ್ಷಣ ಸಹಾಯ ಕೇಳುವುದೊಳಿತು ಎಂಬ ನಿರ್ಧಾರಕ್ಕೆ ಬಂದೆ.

ವಿಮಾನದ ಸಿಬ್ಬಂದಿ ಕೊಲೆಯಾಗಿರುವ ಸಂಗತಿ ನಮಗೆ ತಿಳಿದಿದೆಯೆಂಬ ರಹಸ್ಯ ಕೊಲೆಗಾರರಿಗೆ ತಿಳಿಯದಿರುವುದೇ ಒಳ್ಳೆಯದು. ನಮಗೇನೂ ಗೊತ್ತಿಲ್ಲವೆಂದು ಅವರಂದುಕೊಂಡಷ್ಟು ಹೊತ್ತು ನಮ್ಮ ಆರೋಗ್ಯಕ್ಕೇನೂ ಕುಂದುಂಟಾಗದು.

ಈ ವಿಷಯದ ಬಗ್ಗೆ ಯಾರ ಬಳಿಯೂ ಮಾತಾಡಬೇಡವೆಂದು ಷೇರ್‌ಖಾನ್‌ಗೂ ಎಚ್ಚರಿಸಿದೆ.

ಬ್ಯಾರಕ್ಸ್‌ನ ಸೆಂಟ್ರಲ್ ಚೆಂಬರ್‌ನಲ್ಲಿ ಎಲ್ಲರೂ ಕುಳಿತು ಡಾಕ್ಟರ್ ಹೇಮಂತ್ ಜೊತೆಗೆ ಮಾತಾಡುತ್ತಿದ್ದರು.

ನಾನು ಒಳಕ್ಕೆ ಬಂದೊಡನೆ ಎಲ್ಲರ ಕಡೆ ಒಂದು ಕ್ಷಣ ಪರಿಶೀಲನೆಯ ನೋಟ ಬೀರಿದೆ. ಎಲ್ಲರ ಮುಖಗಳಲ್ಲೂ ಭಯ, ಗಾಬರಿ.

ಎಲ್ಲರೂ ಅಪಾಯಕರಂತೆ ಆಪತ್ತಿನಲ್ಲಿ ಸಿಕ್ಕಿಬಿದ್ದ ಅಸಹಾಯಕರಂತೆ ಮಾಮೂಲಿ ವಿಮಾನ ಪ್ರಯಾಣಿಕರಂತೆಯೇ ತೋರಿ ಬರುತ್ತಿದ್ದರು.

ಒಟ್ಟು ಹದಿಮೂರು ಪ್ರಯಾಣಿಕರು ಹನ್ನೊಂದು ಗಂಡಸರು...... ...... ಇಬ್ಬರು ಹೆಂಗಸರು.

ಗಾಗಲ್ಸ್ ತೆಗೆದು ನನ್ನ ಭಾವನೆಗಳನ್ನು ಮನಸ್ಸಿನಲ್ಲೇ ಅಡಗಿಸಿಕೊಂಡು ಎಲ್ಲರ ಕಡೆಗೆ ನಗುತ್ತಾ ನೋಡಿದೆ

"ವಿಮಾನ ಹೇಗೆ ಕ್ರಾಷ್ ಆಯಿತೆಂದು ಯಾರಿಗಾದರೂ ನೆನಪಿದೆಯಾ" ಕೇಳಿದೆ.

"ನೋ ! ವಿಮಾನ ಹತ್ತಿದ ಒಂದು ಗಂಟೆಯೊಳಗೆ ಎಲ್ಲರೂ ಮೈ ಮರೆಯುವಷ್ಟು ನಿದ್ರೆ ಹೋದರಂತೆ ಎಚ್ಚರವಾಗುವ ವೇಳೆಗೆ ವಿಮಾನ ಲ್ಯಾಂಡ್ ಆಗಿತ್ತು. ನಾವು ಕಣ್ಣಿಗೆ ಬಿದ್ದೆವು......" ಅಂದ ಡಾಕ್ಟರ್ ಹೇಮಂತ್.

ಅವನಾಗಲೇ ಎಲ್ಲಾ ವಿವರಗಳನ್ನು ಅವರಿಂದ ಪಡೆದಂತೆ ಕಾಣುತ್ತಿದ್ದ. ಸದ್ಯಕ್ಕೆ ಆ ವಿಷಯ ಬಿಡಲು ತಿಳಿಸಿದೆ.

"ವೆಲ್ ವೆಲ್ ಡಿಯರ್ ಫ್ರೆಂಡ್ಸ್ ! ವೆಲ್‌ಕಂ ಟು ಗವರ್ನ್‌ಮೆಂಟ್ ಜಿಯಾಲಜಿಕಲ್ ಇನ್‌ವೆಸ್ಟಿಗೇಷನ್ ಸೆಂಟರ್. ನಮ್ಮನ್ನು ನಾವು ಪರಿಚಯ ಮಾಡಿಕೊಳ್ಳುವುದು ಈಗ ಅತ್ಯವಶ್ಯಕ" ಅಂದ ಕೈನಿಂದ ಗ್ಲಾಸ್ ತೆಗೆಯುತ್ತಾ.

ಎಲ್ಲರೂ ನಮ್ಮನ್ನೇ ನಿಶ್ಶಬ್ದವಾಗಿ ನೋಡತೊಡಗಿದರು.

"ವೆಲ್ ! ನನ್ನ ಹೆಸರು ಶಿವಪ್ರಸಾದ್. ಟೆಂಪೋರರಿ ಇನ್‌ಚಾರ್ಜ್ ಟು ದಿ ಸೆಂಟರ್. ನಿಮ್ಮೊಡನೆ ಇದುವರೆಗೆ ಮಾತಾಡುತ್ತಿದ್ದವರು ಡಾಕ್ಟರ್ ಹೇಮಂತ್. ನನ್ನ ಹಿಂದೆ ಇರುವಾತ ಷೇರ್‌ಖಾನ್. ನೌ......ನಿಮ್ಮ ಬಗ್ಗೆ ಹೇಳಿ......" ಅಂದೆ ಅವರ ಕಡೆ ನೋಡುತ್ತಾ.

ಎಲ್ಲರೂ ಮುಜುಗರಗೊಂಡವರಂತೆ ಒಬ್ಬರ ಮುಖವನ್ನೊಬ್ಬರು ನೋಡಿಕೊಳ್ಳುತ್ತಾ. ಒಂದು ಕ್ಷಣ ಮೌನದೊಡನಿದ್ದು ಬಿಟ್ಟರು ಸಫಾರಿ ಸೂಟ್ ನಲ್ಲಿದ್ದ ಸ್ಥೂಲ ಕಾಯದವನೊಬ್ಬ ಭುಜ ಎಗರಿಸಿ ಒಂದೆಜ್ಜೆ ಮುಂದೆ ಬಂದ.

"ಐಯಾಮ್ ಪಪಟ್‌ಲಾಲ್. ಬೊಂಬಾಯಲ್ಲಿ ನನ್ನ ಬಿಜಿನೆಸ್ ಇದೆ. ದೆಹಲಿಯಲ್ಲಿ ನನ್ನ ಭಾವ ಮೈದುನ್‌ನ ಮದುವೆ ಮುಗಿಸಿಕೊಂಡು

ಹಿಂದಿರುಗುತ್ತಿದ್ದೇನೆ ನನ್ನ ಹೆಂಡತಿಯೊಡನೆ" ಅಂತ ಪಕ್ಕದಲ್ಲೇ ಇದ್ದ ಹೆಣ್ಣೊಬ್ಬಳ ಹೆಗಲ ಮೇಲೆ ಕೈ ಹಾಕಿ

ಮಿಸೆಸ್ ಲಾಲ್‌ಳನ್ನು ನೋಡಿದಾಗ ಎದೆ ಕ್ಷಣ ಕಳಕ್ಕೆಂದಿತ್ತು. ಆಕೆ ಪೂರ್ಣ ಗರ್ಭವತಿಯೆಂದು ನೋಡಿದೊಡನೆ ಅರ್ಥವಾಗುತ್ತಿತ್ತು.

ಆಮೇಲೆ ಉಳಿದವರ ವಿವರಗಳನ್ನು ಪಡೆಯಲು ಬಹಳ ಹೊತ್ತೇನೂ ಹಿಡಿಯಲಿಲ್ಲ ಉಳಿದವರ ವಿವರಗಳು ಕೆಳಕಂಡಂತೆ.

ಮಿಸ್ ಕಾಮಿನಿ ಸರ್ಕಾರ್ : ಕೇಂದ್ರ ಸರ್ಕಾರದ ವಾಣಿಜ್ಯ ಇಲಾಖೆಯ ಕಾರ್ಯದರ್ಶಿ ಮಗಳು. ಬಾಂಬೆಯಲ್ಲಿರುವ ನೆಂಟರ ಮನೆಗೆ ಹೊರಟಿದ್ದಾಳೆ. ವಯಸ್ಸು ಇಪ್ಪತ್ತೆರಡರೊಳಗೇ.

ಚಕ್ರವರ್ತಿ : ಟೆಕ್ಸ್‌ಟೈಲ್ ಡಿಸೈನರ್, ಬಾಂಬೆಯಲ್ಲೇ ಅವನ ವಾಸ. ಐವತ್ತೈದಿರಬಹುದು ವಯಸ್ಸು.

ಚಂಚಲ್‌ಬೋಸ್ : ಬಂಗಾಳದ ರಣಜಿ ಕ್ರಿಕೆಟ್ ಆಟಗಾರ ವಯಸ್ಸು ಇಪ್ಪತ್ತಾರು.

ಗೋಪಾಲ್‌ಸಂಧು : ರೆಡಿಮೇಡ್ ಬಟ್ಟೆಗಳ ವ್ಯಾಪಾರಿ. ವಯಸ್ಸು ನಲವತ್ತು.

ಚಾರ್ಲ್ಸ್‌ಫೇಲಾ : ಸೋಪ್ ಕಂಪೆನಿ ಸೇಲ್ಸ್ ಮ್ಯಾನೇಜರ್ ವಯಸ್ಸು ಮುವ್ವತ್ತೈದು.

ಬಲವಂತ್‌ಮೆಹ್ರಾ : ರಿಟೈರ್ಡ್ ಕಾಲೇಜ್ ಪ್ರೊಫೆಸರ್ ವಯಸ್ಸು ಅರವತ್ತು.

ಸಿ ಎಸ್. ರಾವ್ : ತಹಸೀಲ್ದಾರ್ ವಯಸ್ಸು ಇಪ್ಪತ್ತೇಳು.

ಚಾಂದ್‌ಸಿಂಗ್ : ಇಂಪೋರ್ಟ್ ಎಕ್ಸ್‌ಪೋರ್ಟ್ ಬಿಜಿನೆಸ್ ವಯಸ್ಸು ಮುವ್ವತ್ತು.

ಸುನಿಲ್‌ಕುಮಾರ್ : ಸಿನಿಮಾನಟ ವಯಸ್ಸು ಮುವ್ವತ್ತೈದು.

ರವಿರಾಜಾ : ಸಿನಿಮಾ ಡೈರೆಕ್ಟರ್, ವಯಸ್ಸು ನಲವತ್ತು.

ಅಬ್ದುಲ್‌ಗಫೂರ್ : ಅಡ್ವೊಕೇಟ್ ವಯಸ್ಸು ಐವತ್ತು.

ಎಲ್ಲರೂ ತಮ್ಮನ್ನು ತಾವು ಪರಿಚಯಿಸಿಕೊಂಡ ಮೇಲೆ ಕೋಠಡಿಯಲ್ಲಿ ಸ್ವಲ್ಪ ಟೆನ್ಷನ್ ತಗ್ಗಿದಂತೆ ಭಾಸವಾಯಿತು.

"ಮಿಸ್ಟರ್ ಶಿವಪ್ರಸಾದ್ ! ವಿಮಾನ ಕ್ರ್ಯಾಷ್ ಆಯಿತೆಂಬ ಭೀತಿಯಿಂದಾಗಿ ಮೊದಲು ಯೋಚಿಸಲಾಗಲಿಲ್ಲ. ಈಗ ನೆನಪಾಗುತ್ತಿದೆ. ವಿಮಾನದ ಸಿಬ್ಬಂದಿ ಏನಾದರು ?" ಕೇಳಿದ ಸಿ. ಎಸ್. ರಾವ್.

ಅವನು ಮಾತಾಡಿದೊಡನೆ ಹಠಾತ್ತನೆ ಕೊಠಡಿಯ ವಾತಾವರಣದಲ್ಲಿ ಮತ್ತೆ ಬದಲಾವಣೆ ಕಾಣಿಸಿಕೊಂಡಿತು.

ನಾನೊಂದು ಕ್ಷಣ ರಾವ್ ಅನ್ನೇ ತದೇಕವಾಗಿ ನೋಡಿದೆ. ಒಳ್ಳೇ ಪರ್ಸನಾಲಿಟಿ, ಬುದ್ಧಿವಂತಿಕೆ ಸೂಸುವ ಕಣ್ಣುಗಳು. ಸರ್ಕಾರದ ಅಧಿಕಾರಿಗಿರಬೇಕಾದ ಗತ್ತು, ಠೀವಿ ಸ್ಪಷ್ಟವಾಗಿ ಕಾಣುತ್ತಿತ್ತು.

"ಡೆಡ್... ಸತ್ತು ಹೋದರು ! ಬಹುಶಃ ಲ್ಯಾಂಡಿಂಗ್ ಷಾಕ್‌ನಿಂದಾಗಿ ಎಂದುಕೊಳ್ಳುತ್ತೇನೆ" ಅಂದೆ ಆದಷ್ಟು ಸಹಜ ಧ್ವನಿಯಲ್ಲಿ.

ಎರಡೋ, ನಾಲ್ಕೋ ಕಣ್ಣುಗಳು ನನ್ನನ್ನೇ ಸೂಕ್ಷ್ಮವಾಗಿ ಗಮನಿಸುತ್ತಿರುತ್ತವೆ ಎಂದು ಗೊತ್ತು ನನಗೆ !

"ಆರ್ ಯೂ ಷ್ಯೂರ್ ಮಿಸ್ಟರ್ ಶಿವಾ ! ಬೈಚಾನ್ಸ್ ಅವರು ಬದುಕಿದ್ದರೆ....." ಬಲವಂತ್ ಮೆಹ್ರಾ ಧ್ವನಿಯಲ್ಲಿ ಕಂಪನವಿತ್ತು.

"ಎಸ್ ! ಐಯಾಮ್ ಪಾಸಿಟಿವ್ ಎಬೌಟಿಟ್ ! ಅವರನ್ನು ಹೊರಗೆ ತೆಗೆದುಕೊಂಡು ಪರೀಕ್ಷಿಸಲಿಲ್ಲವಾದರೂ ಯಾರ ಹೃದಯಗಳೂ ಪಂಪ್ ಮಾಡುತ್ತಿಲ್ಲ. ವಿಮಾನ ಬಿಟ್ಟು ಬರುವ ಮೊದಲು ನಾನದನ್ನು ಖಚಿತ ಪಡಿಸಿಕೊಂಡೆ....." ಅಂದೆ. ಆ ಮಾತುಗಳನ್ನು ಹೇಳುತ್ತಿರುವಾಗ ನನ್ನ ಮೈ ಒಮ್ಮೆ ಜಲದರಿಸಿತು.

ಕೊಠಡಿಯಲ್ಲಿ ಒಂದು ಕ್ಷಣ ಮೌನವಾವರಿಸಿತು.

"ಈ ಮರುಭೂಮಿಯಿಂದ ಹೊರ ಬೀಳುವುದು ಹೇಗೆ ? ಈ ಅಪಘಾತದ ಬಗ್ಗೆ ಅಧಿಕಾರಿಗಳಿಗೆ ಹೇಗೆ ತಿಳಿಯುತ್ತದೆ ?"

ಎಲ್ಲರ ನೋಟಗಳೂ ಅತ್ತ ತಿರುಗಿದವು ಚಲ್ಸ್‌ಫೇರೀಲಾ ಮುಖದಲ್ಲಿ ಭೀತಿ ತಾಂಡವವಾಡುತ್ತಿತ್ತು. ಎಲ್ಲರ ಮನಸ್ಸನ್ನು ಹಿಂಡಿ ಹಾಕುತ್ತಿದ್ದ ಪ್ರಶ್ನೆಯನ್ನು ಕೇಳಿದ್ದ ಅವನು.

ಎಲ್ಲರೂ ನಾನೇನು ಹೇಳುವೇನೋ ಎಂದು ಉಸಿರು ಬಿಗಿ ಹಿಡಿದು ಕುಳಿತಿದ್ದರು.

"ಈ ಸ್ಪಾಟ್‌ಗೆ ಐವತ್ತು ಮೈಲಿ ಸುತ್ತಳತೆಯಲ್ಲಿ ಯಾವುದೇ ಸಿಟಿಯಾಗಲಿ, ಹಳ್ಳಿಯಾಗಲಿ ಇಲ್ಲ. ವಾರಕ್ಕೊಮ್ಮೆ ಮಾತ್ರ ಜೋಧ್‌ಪುರ್‌ನಿಂದ ಒಂದು ವಿಮಾನ ಬಂದು ನಮಗೆ ಬೇಕಾದ ಸಪ್ಲೈಸ್ ಡ್ರಾಪ್ ಮಾಡಿ ಹೋಗುತ್ತದೆ. ಇಲ್ಲಿಗೆ ಸಮೀಪದಲ್ಲಿರುವ ಊರೆಂದರೆ ಶ್ರೀ ಮೋಹನ್‌ಘರ್ ಎಂಬ ಕುಗ್ರಾಮ" ಉತ್ತರಿಸಿದೆ. ಅಲ್ಲಿನ ಪಂಸರ ನೆನಪು ಮಾಡಿಕೊಂಡು, "ಆ ಕುಗ್ರಾಮ ಈ ಸ್ಥಾವರದಿಂದ ಅರವತ್ತು ಮೈಲಿಗಳ ದೂರವಿದೆ!"

"ಹಾಗಿದ್ದರೆ ಇಲ್ಲಿಂದ ಶ್ರೀಮೋಹನ್‌ಘರ್ ತಲುಪುವುದು ಹೇಗೆ?" ಕೇಳಿದ ಗೋಪಾಸಂಧು.

"ಕಾಲ್ನಡಿಗೆಯ ಮೂಲಕ ಈ ಮರಳುಗಾಡನ್ನು ಕ್ರಮಿಸುವುದು ಅಸಾಧ್ಯ. ಹಗಲಲ್ಲಿ ಚರ್ಮ ಸುಟ್ಟು ಕರಕಾಗಿಸುವ ಬಿಸಿ, ರಾತ್ರಿ ಮೂಳೆ ಕೊರೆಯುವ ಚಳಿ ಇಲ್ಲಿನ ವಾತಾವರಣ. ಎನಿಹೌ ಇನ್ನು ಮುಪ್ಪತ್ತಾರೂ ಗಂಟೆಗಳ ಕಾಲ ಇರುವ ಈ ಸ್ಯಾಂಡ್ ಸ್ವಾರ್ಮ್‌ನಲ್ಲಿ ಹೊರಕ್ಕೆ ಕಾಲಿಡುವಂತೆಯೇ ಇಲ್ಲ!" ಅಂದೆ.

ಎಲ್ಲರೂ ಪ್ರಾಣ ಭಯದೊಡನೆ ನನ್ನನ್ನೇ ನೋಡತೊಡಗಿದರು.

"ಅಂದರೆ ಈ ಸುಂಟರ ಗಾಳಿ ಅಡಗದ ಹೊರತು ನಾವಿಲ್ಲಿಂದ ಕದಲುವಂತೆಯೇ ಇಲ್ಲವೇ?" ಚಾಂದ್‌ಸಿಂಗ್ ಧ್ವನಿಯು ಕಂಪನ ಸ್ಪಷ್ಟವಾಗಿ ಕಾಣಬಹುದಿತ್ತು.

"ನೋ! ಇಟೀಸ್ ಹೈಲಿ ಇಂಪಾಸಿಬಲ್! ಸ್ವಾರ್ಮ್ ಕಡಿಮೆಯಾಗುವವರೆಗೆ ಹೊರಡುವುದು ಕನಸು. ಆಮೇಲೂ ನಡೆದು ಹೋಗುವುದಂತೂ ಅಸಂಭವ!"

"ಹಾಗಾದರೆ ಕತೆಯೇನು?" ಮೊದಲ ಬಾರಿಗೆ ಬಾಯಿ ಬಿಟ್ಟ ಅಬ್ದುಲ್ ಗಫೂರ್.

"ಸುಂಟರ ಗಾಳಿ ಕಡಿಮೆಯಾಗಲಿ ಮೊದಲು. ಆಮೇಲೆ ಯೋಚಿಸೋಣ" ಅಂದೆ ಸಮಾಧಾನದ ಧ್ವನಿಯಲ್ಲಿ.

ಅಲ್ಲಿಯವರೆಗೆ ಟೂವೇ ರೇಡಿಯೋ ಟ್ರಾನ್ಸ್‌ಮೀಟರ್ ಮೂಲಕ ಜೋಧ್‌ಪುರ್ ಬೇಸ್ ರೈಸ್ ಮಾಡಲು ಪ್ರಯತ್ನಿಸಿ ಪ್ರಯೋಜನವಾಗದೆ ಸ್ವಿಚ್ ಆಫ್ ಮಾಡಿ ಸಿಗರೇಟ್ ಹತ್ತಿಸಿಕೊಂಡ ಷೇರ್‌ಖಾನ್.

"ನೋ ಚಾನ್ಸ್ ಆಫ್ ಕಾಂಟಾಕ್ಟ್ ! ಈ ಸ್ವಾರ್ಮ್ ಕಡಿಮೆಯಾಗುವವರೆಗೆ ಟ್ರಾನ್ಸ್ ಮಿಟರ್‌ನಿಂದೇನೂ ಉಪಯೋಗವಾಗದು ! ಅಂದ ಡಾಕ್ಟರ್ ಹೇಮಂತ್.

ಟ್ರಾನ್ಸ್‌ಮಿಟರ್ ರಿಪ್ಲೈ ಸಿಗ್ನಲ್‌ಗಾಗಿ ಕಿವಿ ನಿಮಿರಿಸಿ ಕೇಳುತ್ತಿದ್ದ ಎಲ್ಲರೂ ನಿರಾಸೆಯ ನಿಟ್ಟುಸಿರು ಹೊರ ಚೆಲ್ಲಿದರು.

ಷೇರ್‌ಖಾನ್ ಎಲ್ಲರಿಗೂ ಬಿಸ್ಕೆಟ್ಸ್, ಬಿಸಿ ಬಿಸಿ ಟೀ ಸಪ್ಲೈ ಮಾಡಿದ. ಎಲ್ಲರೂ ಕೃತಜ್ಞತೆಯೊಡನೆ ಸ್ವೀಕರಿಸಿದರು.

ನಾನು ಮಾತ್ರ ನನ್ನ ಮೇಲೆ ಹೆಚ್ಚಾಗುತ್ತಿರುವ ಹೊಣೆಗಾರಿಕೆಯ ಯೋಚನೆ ಮಾತ್ರಕ್ಕೇ ದಿಗಿಲು ಬಿದ್ದೆ.

ಜೋದ್‌ಪುರ್‌ನಿಂದ ಬರಬೇಕಾದ ದಿನ ಸಪ್ಲೈಸ್ ಬಂದಿರಲಿಲ್ಲ. ಆದ್ದರಿಂದ ನಮ್ಮ ಬಳಿಯಿದ್ದ ರಿಸರ್ವ್‌ರೇಷನ್ಸ್ ಉಪಯೋಗಿಸುತ್ತಿದ್ದೆವು.

ಟೀ ಪುಡಿ, ಸಕ್ಕರೆ ತಿಂಗಳಿಗೆ ಸಾಕಾಗುವಷ್ಟಿದ್ದರೂ ಆಹಾರ ಪದಾರ್ಥಗಳು ಮಾತ್ರ ಇಷ್ಟು ಜನರಿಗೆ ಒಂದು ದಿನಕ್ಕಾಗುವಷ್ಟು ಇರಲಿಲ್ಲ. ಅವು ಆಗಿ ಹೋಗಿ, ಸ್ಯಾಂಟರ ಗಾಳಿಯೂ ತಗ್ಗದಿದ್ದರೆ ಎಲ್ಲರೂ ಹಸಿವಿನಿಂದ ಸಾಯಬೇಕಾದ ಕಠಿಣ ಪರಿಸ್ಥಿತಿ !

ಜೊತೆಗೆ ವಿಮಾನ ಸಿಬ್ಬಂದಿಯ ಸಾವಿನ ಮಿಸ್ಟರಿ ಬೇರೆ ತಲೆ ತಿನ್ನುತ್ತಿತ್ತು. ವಿಮಾನ ತಪ್ಪು ದಾರಿಯನ್ನಿಡಿದು ಇಲ್ಲಿಗೆ ಏಕೆ ಬಂತು ? ಯಾರು ಡೈರೆಕ್ಷನ್ ಚೇಂಜ್ ಮಾಡಿದವರು ? ಏಕೆ ಮಾಡಿದರು ?

ಇವರಲ್ಲಿ ಕೊಲೆಗಾರರ್‍ಯಾರು ?

ಜೋಧ್‌ಪುರ್ ಬೇಸ್‌ಗೆ ಎಷ್ಟು ಬೇಗ ಕನೆಕ್ಷನ್ ಸಿಗುವುದೋ ಅಷ್ಟು ಒಳ್ಳೆಯದು. ಹೊರ ಪ್ರಪಂಚದೊಡನೆ ಸಂಪರ್ಕ ಕಿಂಚಿತ್ತಾದರೂ ಧೈರ್ಯ ತರುತ್ತದೆ.

ಸೇರಬೇಕಾದ ಟೈಂಗೆ ವಿಮಾನ ನಿಗದಿತ ಟಾರ್ಗೆಟ್ ತಲುಪದೆ, ಪ್ರಯಾಣಿಸಬೇಕಾದ ರೂಟ್‌ನಲ್ಲಿ ಪ್ರಯಾಣಿಸದಿದ್ದರೆ ಏರ್ ಟ್ರಾಫಿಕ್ ಕಂಟ್ರೋಲ್ ಸ್ಟಾಫ್ ಇಷ್ಟೊತ್ತಿಗೆ ಪ್ಯಾನಿಕ್ ಬಟನ್ ಪ್ರೆಸ್ ಮಾಡಿರುವ ಸಾಧ್ಯತೆಯೂ ಇಲ್ಲದಿಲ್ಲ.

ಕಲೆಯೊಂದರಿ ಒಂದು ಸಲ ಕೊಠಡಿಯ ಸುತ್ತಲೂ ನೋಡಿದೆ. ಷೇರ್

ಖಾನ್ ಒದಗಿಸಿದ ಲೈಟ್ ರಿಫ್ರೆಷ್‌ಮೆಂಟ್‌ನಿಂದಾಗಿ ಎಷ್ಟೋ ಹಾಯೆನಿಸಿ ಕೆಲವರಾಗಲೇ ನಿದ್ರೆಗುಪಕ್ರಮಿಸಿದ್ದರು. ಇನ್ನು ಕೆಲವರು ತೂಕಡಿಸುತ್ತಿದ್ದರು.

ಷೇರ್‌ಖಾನ್ ಕೊಠಡಿಯ ಹೊರಗೆ ಸ್ಟೂಲ್ ಮೇಲೆ ಕುಳಿತು ಸೆಂಟ್ರಿ ಡ್ಯೂಟಿ ಮಾಡುತ್ತಿದ್ದ. ಬೆಳಗಿನ ಜಾವ ನಾನವನಿಗೆ ರಿಲೀಫ್ ಕೊಡಬೇಕು.

ಆಯಾಸದಿಂದ ಅದ್ಯಾವಾಗಲೋ ನನ್ನ ಕಣ್ಣುಗಳು ಅವಶ್ಯಕ್ನವೇ ಮುಚ್ಚಿಕೊಂಡಿದ್ದವು.

# 5

ತಟಕ್ಕನೆ ಎಚ್ಚರವಾಯಿತು ಷೇರ್‌ಖಾನ್ ಭುಜ ಹಿಡಿದು ಅಲ್ಲಾಡಿಸುತ್ತಿದ್ದ.

ಮತ್ತೊಡನೆ ಕಣ್ಣು ತೆರೆದು ನೋಡಿದೆ.

ಕೊಠಡಿಯಲ್ಲಿ ಲೈಟ್ ಪ್ರಕಾಶಮಾನವಾಗಿ ಬೆಳಗುತ್ತಿತ್ತು. ಮುಗಿದ್ದವರೆಲ್ಲಾ ಎದ್ದು ಒಂದು ಮೂಲೆಯಲ್ಲಿ ಗುಂಪುಗೂಡಿದ್ದರು. ತಲೆಯೊದರುತ್ತಾ ಎದ್ದು ನಿಂತೆ.

"ಏನಾಯಿತು ಖಾನ್ ?" ಕೇಳುತ್ತಾ ಗುಂಪಿನ ಬಳಿಗೆ ನಡೆದೆ.

ಮಾತಾಡಲಿಲ್ಲ ಷೇರ್‌ಖಾನ್. ನನ್ನ ಹಿಂದೆಯೇ ನಡೆದು ಬಂದ.

ಅಲ್ಲಿನ ದೃಶ್ಯ ನೋಡಿದಾಗ ನನಗೇಕೋ ನನ್ನ ಕಣ್ಣುಗಳನ್ನೇ ನಂಬಲಾಗಲಿಲ್ಲ. ಕೋಪ, ಅಸಹಾಯಕತೆ ಒಟ್ಟಿಗೆ ನನ್ನ ಮೇಲೆ ದಾಳಿಯೆಸಗಿದವು.

ಕೊಠಡಿಯ ಮೂಲೆಯಲ್ಲಿ ಟೇಬಲ್ ಮೇಲಿದ್ದ ರೇಡಿಯೋ ಟ್ರಾನ್ಸ್‌ಮಿಟರ್ ಪೀಸ್ ಪೀಸಾಗಿ ಬಿದ್ದಿತ್ತು.

ನಮಗಿದ್ದ ಒಂದೇ ಒಂದು ಆಶಾಕಿರಣ.......... ಈ ಮರುಭೂಮಿಯ ಪ್ರಪಂಚದಿಂದ ಮಾನವ ಲೋಕಕ್ಕೆ ಸಂಪರ್ಕ ಕಲ್ಪಿಸುವ ಏಕೈಕ ಸಾಧನ.......... ಚೂರು ಚೂರಾಗಿ ಯಾವುದಕ್ಕೂ ಪ್ರಯೋಜನಕ್ಕೆ ಬಾರದ ಷೇಪ್‌ನಲ್ಲಿ ಬಿದ್ದಿತ್ತು !

ಪ್ಲಾಸ್ಟಿಕ್ ಕ್ಯಾಬಿನೆಟ್, ಒಳಗಿನ ಗ್ಲಾಸ್ ವಾಲ್ವ್‌ಗಳು ಪುಡಿ ಪುಡಿಯಾಗಿ ನನ್ನನ್ನೇ ಅಣಕಿಸುತ್ತಿರುವಂತೆ ಆ ದೀಪದ ಬೆಳಕಲ್ಲಿ ಮಿನುಗುತ್ತಿದ್ದವು.

ಒಂದು ಕ್ಷಣ ಎಲ್ಲರನ್ನೂ ಕಿಡಿಗಾರುವ ಕಂಗಳೊಡನೆ ನೋಡಿದೆ.

"ಡ್ಯಾಮ್ ಯು ! ಯಾರು ಮಾಡಿದರೀ ಕೆಲಸ ?" ಹುಚ್ಚು ಹಿಡಿದವನಂತೆ ಕಿರುಚಿಕೊಂಡೆ.

ಹೊರಗಿನ ಬಿರುಗಾಳಿಯ ಶಬ್ದವೂ ಕ್ಷಣ ಕೇಳಿಸದಷ್ಟು ಘೋರವಾಗಿತ್ತು ನನ್ನ ಧ್ವನಿ. ಎಲ್ಲರೂ ಬಿಳಿಚಿಕೊಂಡ ವದನಗಳೊಡನೆ ಕಣ್ಣರಳಿಸಿ ನನ್ನನ್ನೇ ನೋಡತೊಡಗಿದರು.

"ಆನ್ಸರ್ ಮಿ .....ಹೂ ಡಿಡ್ ದಿಸ್ ಬ್ಲಡಿ ಥಿಂಗ್ ?" ಮತ್ತೆ ಗರ್ಜಿಸಿದೆ.

ಎಲ್ಲರೂ ಮೂಕರಾದಂತೆ ನಿಂತು ಬಿಟ್ಟಿದ್ದರು. ಒಂದು ನಿಮಿಷ ಎಲ್ಲರ ಮುಖಗಳನ್ನೂ ಗಮನಿಸುತ್ತಾ ನಿಂತೆ. ನಿಧಾನವಾಗಿ ಆವೇಶ ತಗ್ಗಿ ವಾಸ್ತವ ಮಿದುಳಿನೊಳಕ್ಕೆ ಪ್ರವೇಶಿಸಿತು.

"ಷೇರ್‌ಖಾನ್ ! ಹೇಗಾಯಿತಿದು ?" ಅಂದೆ ಶಾಂತ ಧ್ವನಿಯಲ್ಲಿ.

"ಎಲ್ಲರೂ ಮಲಗಿದ ಮೇಲೆ ಲೈಟ್ ಆಫ್ ಮಾಡಿದೆ ಸಾರ್ ! ಆಮೇಲೆ ನಾನು ಹೊರಗೆ ಕುಳಿತ ಹತ್ತು ನಿಮಿಷಗಳ ನಂತರ ಖಳ್ಳೆಂಬ ಶಬ್ದ ಕೇಳಿಸಿತು. ತಕ್ಷಣ ಲೈಟ್ ಹಾಕಿದೆ. ಆ ಸೌಂಡ್‌ಗೆ ಎಲ್ಲರೂ ನಿದ್ರೆಯಿಂದೆದ್ದು ಕುಳಿತಿದ್ದರು. ಟ್ರಾನ್ಸ್‌ಮೀಟರ್ ಕೆಳಗೆ ಬಿದ್ದು ಚಪ್ಪಾಂ ಚೂರಾಗಿತ್ತು" ಅಂದ ಷೇರ್‌ಖಾನ್ ನಿಸ್ಸತ್ವ ಧ್ವನಿಯಲ್ಲಿ.

ತಲೆ ಕುಣಿಸುತ್ತಾ ಎಲ್ಲರ ಕಡೆಗೆ ಒಂದು ಸಲ ನೋಡಿದೆ. ಬೇಕೆಂದೇ ಯಾರೋ ಮಾಡಿದ ಕೆಲಸವಿದೆಂದು ನನಗೆ ಸ್ಪಷ್ಟವಾಗಿತ್ತು. ಟ್ರಾನ್ಸ್‌ಮೀಟರ್ ಮೂಲಕ ಬೇಸ್ ಸಂಪರ್ಕ ಪಡೆದರೆ ತಮ್ಮ ಆಟಕ್ಕೆ ಉಳಿಗಾಲವಿಲ್ಲವೆಂದು ಹಂತಕರಲ್ಲೊಬ್ಬರು ಈ ಕೆಲಸ ಮಾಡಿರಬೇಕು.

"ಆಲ್‌ರೈಟ್ ! ಟ್ರಾನ್ಸ್‌ಮೀಟರ್‌ಗೆ ಹತ್ತಿರದಲ್ಲಿ ಮಲಗಿದ್ದವರ್ಯಾರು?" ಕೇಳಿದೆ.

ರವಿರಾಜ್ ಭೀತಿಯೊಡನೆ ನನ್ನ ಕಡೆ ನೋಡಿದ, "ನಾನು !" ಅಂದ.

"ನಿದ್ರೆಯಲ್ಲಿ ಆಕಸ್ಮಾತ್ತೇನಾದರೂ ನಿಮ್ಮ ಕಾಲು ಟೇಬಲ್‌ಗೆ ತಗುಲಿತೆ" ಕೇಳಿದೆ.

ಸಿಲ್ಲಿ ಪ್ರಶ್ನೆಯೆಂದು ನನಗೂ ಗೊತ್ತು. ಬೈಚಾನ್ಸ್ ಕಾಲು ತಗುಲಿ ಟೇಬಲ್ ಅಲ್ಲಾಡಿದ ಮಾತ್ರಕ್ಕೇ ಅಷ್ಟು ತೂಕ ಅಗಲಗಳ ಟ್ರಾನ್ಸ್‌ಮೀಟರ್ ಕೆಳಗೆ ಬೀಳದು.

"ಇಲ್ಲ......ನೆನಪಿಲ್ಲ !" ಅಂದ ಮೆಲ್ಲನೆ.

ಅವನನ್ನೇ ತೀಕ್ಷ್ಣವಾಗಿ ನೋಡಿದೆ. "ಮಿಸ್ಟರ್ ರವಿರಾಜ್ ! ದಯವಿಟ್ಟು ನೆನಪು ಮಾಡಿಕೊಳ್ಳಿ. ಸುಮಾರು ಮುವ್ವತ್ತು ಕೆ.ಜಿ. ತೂಕದ ಟ್ರಾನ್ಸ್‌ಮೀಟರ್ ಅದಷ್ಟಕ್ಕದೇ ಕುಪ್ಪಳಿಸಿ ಕೆಳಗೆ ಬೀಳುವುದಿಲ್ಲ" ಅಂದೆ.

ರವಿರಾಜ್ ನನ್ನನ್ನೇ ಆಕ್ಷೇಪಿಸುವಂತೆ ನೋಡಿದ, "ಐಕೆನ್ ಅಂಡರ್ ಸ್ಟ್ಯಾಂಡ್ ದಟ್ ಮಿಸ್ಟರ್ ಶಿವಾ ! ನಿಜವಾಗಿಯೂ ನನಗೇನೂ ಗೊತ್ತಿಲ್ಲ. ನಿದ್ರೆಯಲ್ಲಿ ನನ್ನ ಕಾಲು ಟೇಬಲ್‌ಗೆ ತಗುಲುವ ಸಾಧ್ಯತೆ ಕಡಿಮೆ. ಟೇಬಲ್‌ಗೆ ಹತ್ತಿರದಲ್ಲಿದ್ದೆನೆಂಬುದೇನೋ ನಿಜ. ಅದರ ಮೇಲೆ ಬೀಳುವಷ್ಟಲ್ಲ !" ಅಂದ.

"ಡಾಮಿಟ್ ! ನಮಗೆ ಈ ಎಮರ್ಜೆನ್ಸಿಯಲ್ಲಿ ಬಹಳ ಉಪಯುಕ್ತವಾಗಿದ್ದ ಸಾಧನ ಇದೊಂದೇ. ಈಗ ಆ ಅವಕಾಶವೂ ಇಲ್ಲ. ಹೊರ ಪ್ರಪಂಚವನ್ನು ಸಂಪರ್ಕಿಸುವಂತೆಯೇ ಇಲ್ಲ. ಈ ಡೆಸರ್ಟ್‌ನಲ್ಲಿ, ಈ ಸ್ವಾರ್ಮ್‌ನಿಂದ ನಮ್ಮನ್ನು ಕಾಪಾಡಲು ಇನ್ನು ಆ ದೇವರೇ ಧರೆಗಿಳಿದು ಬರಬೇಕಷ್ಟೇ !" ಅಂದೆ ನಿಟ್ಟುಸಿರು ಹೊರ ಚೆಲ್ಲುತ್ತಾ.

ಎಲ್ಲರ ಮುಖಗಳೂ ಒಮ್ಮೆಲೇ ಕಳಾವಿಹೀನಗೊಂಡವಾಗ.

# 6

ಮಾರನೇ ದಿನ ಇಡೀ ಹಗಲು ಬಿರುಗಾಳಿ ತುಸುವಾದರೂ ಕಡಿಮೆ ಯಾಗಲಿಲ್ಲ.

ರಾತ್ರಿ ವೇಳೆ ಕತ್ತಲಲ್ಲಿ ಶಬ್ದದ ವಿನಹ ಬೇರೇನೂ ಅರಿವಾಗದ ಕಾರಣ...... ಹಗಲಲ್ಲಿ ಗಾಳಿಯಲ್ಲಿ ಸಮುದ್ರ ತರಂಗಗಳಂತೆ ಕೆಲುತ್ತಾ ಬರುವ ಆ ಮರಳ ತೆರೆಗಳನ್ನು ನೋಡುತ್ತಿದ್ದರೆ ಎಂತಹ ಧೈರ್ಯವಂತನ ಗುಂಡಿಗೆಯೂ ಗುಭಿಲ್ ಎನ್ನದಿರದು.

ನಾನು ಒಂದು ಕಡೆ ಕುಳಿತು ನಡೆದ ಘಟನೆಗಳ ಒಂದು ಸಲ ಮೆಲುಕು ಹಾಕಿದೆ.

ಇಂದು ರಾತ್ರಿಗೆ ಸ್ಟಾಕಿರುವ ಎಲ್ಲ ಆಹಾರ ಪದಾರ್ಥಗಳೂ ಮುಗಿದು ಹೋಗುತ್ತವೆ. ಆಮೇಲೆ ಇಲ್ಲಿರುವ ಹದಿನೈದು ಜನರಿಗೆ ಬಿರುಗಾಳಿಯ ಜೊತೆಗೆ ಊಟದ್ದೂ ಒಂದು ದೊಡ್ಡ ಸಮಸ್ಯೆಯಾಗಿ ಬಿಡುತ್ತದೆ.

ಅದೃಷ್ಟ ಚೆನ್ನಾಗಿದ್ದರೆ ಬಹುಶಃ ನಾಳೆ ಬೆಳಿಗ್ಗೆಯ ವೇಳೆಗೆ ಈ ಮರಳ ಬಿರುಗಾಳಿ ಕಡಿಮೆಯಾಗಬಹುದು. ಹಾಗಾದರೆ ಮಾತ್ರ ಇಲ್ಲಿಂದ ಶ್ರೀಮೋಹನ್ ಘರ್‌ಗೆ ಹೋಗುವ ಪ್ರಯತ್ನ ಮಾಡಬೇಕು.

ರಾತ್ರಿಯ ಟ್ರಾನ್ಸ್‌ಮೀಟರ್ ನಾಶ ಕಾಕತಾಳೀಯವಲ್ಲ ಎಂದು ನಾವು ಮೂವರೂ ನಿರ್ಧರಿಸಿಕೊಂಡಿದ್ದೆವು. ಹೊರಗಿನ ಪ್ರಪಂಚದೊಡನೆ ಸಧ್ಯಕ್ಕಾದರೂ ಯಾವುದೇ ಸಂಬಂಧ ಹೊಂದುವ ಇಚ್ಛೆಯಿಲ್ಲ ಹಂತಕರಿಗೆ.

ಅದೇಕಿರಬಹುದು ?

ಮರುಭೂಮಿಯ ನಾಲೆಡ್ಜ್ ಇರುವವರು ಅವರು. ನಲವತ್ತೆಂಟು ಗಂಟೆಗಳೊಳಗೆ ಹೊರಗಿನಿಂದ ಹೆಲ್ಪ್ ಬರದಿದ್ದರೆ ನಾವ್ಯಾರೂ ಜೀವಂತವಾಗಿ ಉಳಿಯೆವು. ಹಾಗಿರುವಾಗ ನಾಗರೀಕ ಪ್ರಪಂಚ ಸೇರುವ ಅವಕಾಶವನ್ನು

ಏಕೆ ಹಾಳುಗೆಡವಿಕೊಂಡರು ? ಈ ಗುಂಪಿನಲ್ಲಿರುವ ಜನರಲ್ಲಿ ಯಾರನ್ನು ಹಂತಕರೆಂದು ಐಡೆಂಟಿಫೈ ಮಾಡುವುದು ?

"ಎಲ್ಲರನ್ನೂ ಬೆದರಿಸಿ ಅವರ ಲಗ್ಗೇಜ್ ಹುಡುಕಿದರೆ ನಮಗೆ ಕೊಲೆಗಾರ ರ್‍ಯಾರೆಂದು ತಿಳಿಯಬಹುದು. ವಿಮಾನದ ಸಿಬ್ಬಂದಿಯನ್ನು ಕೊಲ್ಲಲು ಉಪ ಯೋಗಿಸಿದ ಪಿಸ್ತೂಲುಗಳು ಇನ್ನೂ ಅವರ ಬಳಿಯೇ ಇರಬಹುದು...." ಸಲಹೆ ಕೊಟ್ಟ ಡಾಕ್ಟರ್ ಹೇಮಂತ್.

"ನೋ.... ಐ ಡೋಂಟ್ ಥಿಂಕ್ ಸೋ ! ಆ ಪಿಸ್ತೂಲುಗಳು ಇನ್ನೂ ಅವರ ಬಳಿಯೇ ಇದೆಯೆನ್ನುವುದು ಅನುಮಾನಸ್ಪದ ಒಂದು ವೇಳೆ ಅವಿಲ್ಲ ವಾದರೆ ಎಲ್ಲರ ಮನಗಳಲ್ಲೂ ಅನುಮಾನ ಸೃಷ್ಟಿಸಿ ಭೀತಿಯ ಭೂತಕ್ಕೆ ನಾವೇ ದಾರಿ ಮಾಡಿಕೊಟ್ಟಂತಾಗುತ್ತದೆ. ಹಾಗೂ ಪಿಸ್ತೂಲುಗಳು ಸಿಕ್ಕರೂ ಅವರನ್ನು ಕಂಟ್ರೋಲ್ ಮಾಡುವುದು ಅಸಾಧ್ಯದ ಕೆಲಸ. ತಮ್ಮ ರಹಸ್ಯ ಹೊರ ಬೀಳಲಿದೆ ಎಂದವರಿಗೆ ಅರಿವಾದರೆ ಎಲ್ಲರನ್ನೂ ಕೊಲ್ಲುವ ಮನಸ್ಸತ್ವದ ಜನ ಅವರು ಎಂಬುದನ್ನು ಈಗಾಗಲೇ ನಿರೂಪಿಸಿದ್ದಾರೆ......" ಅಂದೆ ಆ ಸಲಹೆಗೆ ಅಬ್ಜೆಕ್ಷನ್ ಹೇಳುತ್ತಾ.

"ಹಾಗಾದಾಗೀಗ ಮಾಡುವುದಾದರೂ ಏನು ?"

"ಏನೂ ಗೊತ್ತಿಲ್ಲದವರಂತೆಯೇ ನಟಿಸುವುದು ಒಳ್ಳೆಯದು. ಹಂತಕರು ನಮಗೇನೂ ಗೊತ್ತಿಲ್ಲ ಎಂದು ಭಾವಿಸುವವರೆಗೆ ನಮ್ಮ ಪ್ರಾಣಕ್ಕೇನೂ ಅಪಾಯವಿರದು. ನಾಳೆ ಬಿರುಗಾಳಿಯ ಆರ್ಭಟ ತಗ್ಗಿದೊಡನೆ ತಕ್ಷಣ ಶ್ರೀಮೋಹನ್ ಫರ್‌ಗೆ ಹೊರಟು ಬಿಡೋಣ. ಅಲ್ಲಿಯವರೆಗೆ ಎಲ್ಲರೂ ಎಲ್ಲರ ಮೇಲೂ ಒಂದು ಕಣ್ಣಿಟ್ಟೇ ಇರೋಣ" ಅಂದೆ ನಾನು.

"ಎಲ್ಲರನ್ನೂ ಅನುಮಾನಿಸುವುದು ಅನವಶ್ಯಕ ಅನ್ನಿಸುತ್ತದೆ ನನಗೆ......" ಅಂದ ಷೇರ್‌ಖಾನ್.

ಅವನ ಕಡೆ ಆಶ್ಚರ್ಯದೊಡನೆ ನೋಡಿದೆ ನಾನು.

ಹೌದೆನ್ನುವಂತೆ ತಲೆ ಕುಣಿಸಿದ ಅವನು, "ಪಪಟ್‌ಲಾಲ್‌ನ್ನು ಅನು ಮಾನಿಸುವ ಅವಶ್ಯಕತೆಯಿಲ್ಲ. ಅಂತೆಯೇ ಚಂಚಲ್‌ಬೋಸ್ ಅವನ ಫೋಟೋ ಸಾಕಷ್ಟು ಸಲ ಪೇಪರ್‌ನಲ್ಲಿ ಎಲ್ಲರೂ ನೋಡಿದ್ದೇವೆ ಬಲವಂತ್ ಮೆಹ್ತಾ, ಚಕ್ರವರ್ತಿ ಇವರನ್ನೂ ಸಹ ಲಿಸ್ಟ್‌ನಿಂದ ತೆಗೆದು ಬಿಡಬಹುದು.

ದುಂಡಾವರ್ತಿ ಮಾಡುವ ವಯಸ್ಸಲ್ಲೂ ಅವರದು. ಉಳಿದ ಎಂಟು ಜನರನ್ನು ಕೇರ್‌ಫುಲ್ಲಾಗಿ ಅಬ್ಸರ್ವ್ ಮಾಡಿದರೆ ಸಾಕು."

"ಹೌ ಎಬೌಟ್ ಕಾಮಿನಿ ಸರ್ಕಾರ್ ? ಹೆಣ್ಣು ಅಷ್ಟು ಭೀಭತ್ಸ ಕೊಲೆ ಗಳೆಸಗಬಲ್ಲಳೇ ?" ಕೇಳಿದೆ.

ಭುಜ ಎಗರಿಸಿದ ಷೇರ್‌ಖಾನ್, "ಹೇಗೆ ಹೇಳಲು ಸಾಧ್ಯ ?" ಅಂದ.

ಮನಸ್ಸಿನಲ್ಲೇ ಅವನ ತರ್ಕಬದ್ಧ ವಿವರಣೆಗೆ ವಂದನೆಗಳನ್ನರ್ಪಿಸಿದೆ. ಹದಿಮೂರು ಜನಕ್ಕಿಂತಾ ಎಂಟು ಜನರ ಗಮನಿಸುವುದು ಸುಲಭ.

ನಿಧಾನವಾಗಿ ಕತ್ತಲಾಗತೊಡಗಿತು.

ಕತ್ತಲೊಡನೆ ಗಾಳಿಯ ವೇಗವೂ ಹೆಚ್ಚಾಯಿತು. ಒಂದೊಂದು ಸಲವೂ ಗಾಳಿಯ ಆರ್ಭಟ ಹೆಚ್ಚಿದಾಗ ಬ್ಯಾರೆಕ್ಸ್ ಛಾವಣಿ ಎಗರಿ ಹೋಗುವುದೇನೋ ಎಂದೆನಿಸುತ್ತಿತ್ತು.

ಎಲ್ಲರೂ ಬಿಸಿ-ಬಿಸಿ ಚಾಕೊಲೆಟ್ ಟೀ ಕುಡಿದು ಕುಳಿತರು. ಎಲ್ಲರ ಮುಖಗಳಲ್ಲೂ ಅಳಲು ಭವಿಷ್ಯದ ಬಗ್ಗೆ, ಇಲ್ಲಿಂದ ಪ್ರಾಣದೊಡನೆ ಹೊರ ಪ್ರಪಂಚ ತಲುಪುವುದರ ಬಗ್ಗೆ ಆತಂಕ. ತಮ್ಮ ಆಪ್ತೇಷ್ಟರನ್ನು ಮತ್ತೆ ಕಾಣು ವೆವೇ ಎಂಬ ಆಂದೋಳನೆ.

ಆಗ ನೆನಪಾಗಿತ್ತು ನನಗೆ, ನಾನು ಮಾಡಿದ್ದ ಬ್ಲಂಡರ್ !

ಈ ವಿಷಯ ಇಪ್ಪತ್ನಾಲ್ಕು ಗಂಟೆಗಳ ಹಿಂದೆಯೇ ನೆನಪಾಗಿದ್ದರೆ ಇಷ್ಟೊ ತ್ತಿಗೆ ನಾವೆಲ್ಲಾ ಸುರಕ್ಷಿತವಾಗಿರಲು ಏರ್ಪಾಟುಗಳು ಜರುಗಿ ಹೋಗುತ್ತಿ ದ್ದವು.

ಒಂದು ಕ್ಷಣ ನನ್ನನ್ನು ನಾನೇ ಬೈದುಕೊಂಡು ಷೇರ್‌ಖಾನ್‌ಗೆ ಸನ್ನೆ ಮಾಡಿದೆ. ನಾವಿಬ್ಬರೂ ವರಾಂಡದಲ್ಲಿ ಗುಂಪಿನಿಂದ ದೂರವಾಗಿ ನಿಂತೆವು.

ವರಾಂಡ ತುಂಬಾ ಮರಳ ರಾಶಿಯೇ ಆವರಿಸಿತ್ತು. ಬಿರುಗಾಳಿ ಕಡಿಮೆ ಯಾಗುವ ಮೊದಲಿನ ಜೋರು. ಈ ಜೋರು ತಗ್ಗಿದೊಡನೆ ಬಿರುಗಾಳಿ ನಿಲ್ಲುತ್ತದೆಂದು ಗೊತ್ತು.

ಏನೆನ್ನುವಂತೆ ನೋಡಿದ ಷೇರ್‌ಖಾನ್.

"ವಿಮಾನದಲ್ಲಿ ರೇಡಿಯೋ ಟ್ರಾನ್ಸ್‌ಮೀಟರ್ ಇರುತ್ತದೆಂಬ ವಿಷಯ ವನ್ನೇ ನಾವು ಮರೆತು ಬಿಟ್ಟಿದ್ದೇವೆ. ನಮ್ಮ ಟ್ರಾನ್ಸ್‌ಮೀಟರ್‌ಗಿಂತಲೂ

ಹೆಚ್ಚು ಪವರ್‌ಫುಲ್ಲಾಗಿರುತ್ತದೆಂದು. ಆದರ ಮೂಲಕ ಕಂಟ್ರೋಲ್ ಸ್ಟೇಷನ್ ಸಂಪರ್ಕ ಪಡೆಯಲು ಸಾಧ್ಯವಾದರೆ ನಮ್ಮ ಕಷ್ಟಗಳು ಅರ್ಧ ಪರಿಹಾರಗೊಂಡಂತೆಯೇ. ವಿಷಯವೇನೆಂದೂ ಸಹ ನಾವು ತಿಳಿದುಕೊಳ್ಳಬಹುದು” ಅಂದೆ.

ನನ್ನ ಕಡೆಗೆ ಆಶ್ಚರ್ಯದೊಡನೆ ನೋಡಿದ ಷೇರ್‌ಖಾನ್. ನಂತರ ಸರಿ ಅನ್ನುವಂತೆ ತಲೆ ಕುಣಿಸಿದ.

“ಹೋಗೋಣವೇ ?” ಅಂದ.

ನಾನು ತಲೆ ಅಡ್ಡಡ್ಡ ಆಡಿಸಿದೆ. ಹೊರಗೆ ಬೀಳುತ್ತಿರುವ ರಾಶಿ-ರಾಶಿ ಹುಳಳನ್ನು ತೋರಿಸಿದೆ, “ನೋ ! ಈಗಲ್ಲ. ವಿಮಾನದ ಬಾಗಿಲರ್ಧದವರೆಗೆ ಮರಳ ರಾಶಿ ಸೇರಿ ಬಿಟ್ಟಿರುತ್ತದೆ. ಬಾಗಿಲು ತೆರೆಯಬೇಕೆಂದರೆ ಸುತ್ತಲೂ ಇರುವ ಮರಳನ್ನು ಪಕ್ಕಕ್ಕೆ ಸರಿಸಬೇಕು. ನಾವು ಹೊರಗೆ ಹೋಗಿ ಬಹಳ ಹೊತ್ತಿದ್ದರೆ ಒಳಗಿರುವವರಿಗೆ ಅನುಮಾನ ಬರಬಹುದು” ಅಂದೆ.

ರಾತ್ರಿ ಎಲ್ಲರೂ ಮಲಗಿದ ಮೇಲೆ ವಿಮಾನದ ಒಳಗೆ ಹೋಗುವುದೆಂದು ನಿರ್ಧರಿಸಿಕೊಂಡೆವು. ನಾವು ಹೊರಗೆ ಹೋದಾಗ ಸೆಂಟ್ರಿ ಕೆಲಸ ಮಾಡಲು ಡಾಕ್ಟರ್ ಹೇಮಂತ್‌ನನ್ನು ನೇಮಿಸಿದೆ.

# 7

ರಾತ್ರಿ ಎಲ್ಲರೂ ಕೋಣೆಯಲ್ಲಿ ಒಂದೊಂದು ಕಡೆ ಮಲಗಿದರೆಂದು ಗ್ಯಾರಂಟಿಯಾದ ಮೇಲೆ ನಾನು, ಷೇರ್‌ಖಾನ್ ಶಬ್ದವಾಗದಂತೆ ಹೊರಗೆ ಬಂದೆವು. ಹೊರಗೆ ಸೆಂಟ್ರಿಯಾಗಿ ಕುಳಿತಿದ್ದ ಡಾಕ್ಟರ್ ಹೇಮಂತ್ 'ಗುಡ್ ಲಕ್' ಅನ್ನುವಂತೆ ಹುಬ್ಬೇರಿಸಿ ಚಿಮ್ಮಿದ.

ರೋಪ್‌ವೇ ಸಹಾಯದೊಡನೆ ನಾನು ಷೇರ್‌ಖಾನ್ ಹತ್ತು ನಿಮಿಷ ಗಳಲ್ಲಿ ವಿಮಾನವನ್ನು ಸೇರಿಕೊಂಡೆವು

ನಾವಂದುಕೊಂಡಿದ್ದಕ್ಕಿಂತಲೂ ಹೆಚ್ಚಾಗೇನೇ ಮರಳು ವಿಮಾನದ ಸುತ್ತಲೂ ಸೇರಿಕೊಂಡಿತ್ತು. ಕಿಟಕಿಗಳ ಎತ್ತರಕ್ಕೆ ಸೇರಿದ್ದ ಮರಳು ರಾಶಿಯ ನಡುವೆ ವಿಮಾನ ಸಮುದ್ರದಲ್ಲಿ ತೇಲುವ ದೊಡ್ಡ ತಿಮಿಂಗಲದಂತೆ ಕಾಣು ತ್ತಿತ್ತು.

ನಮ್ಮೊಡನೆ ತೆಗೆದುಕೊಂಡು ಹೋಗಿದ್ದ ಷೊವೆಲ್ಸ್ ಸಹಾಯದೊಡನೆ ಮರಳನ್ನು ವೇಗವಾಗಿ ಪಕ್ಕಕ್ಕೆತ್ತಿ ಸುರಿಯಲು ಶುರು ಮಾಡಿದೆವು.

ಮನುಷ್ಯನೊಬ್ಬ ಒಳಕ್ಕೆ ಹೋಗಲು ಸಾಧ್ಯವಾಗುವಷ್ಟು ಹಾದಿ ನಿರ್ಮಿ ಸಲು ಸುಮಾರು ಇಪ್ಪತ್ತು ನಿಮಿಷ ಹಿಡಿದಿತ್ತು. ಸಾಮಾನ್ಯ ಸ್ಥಿತಿಯಲ್ಲಿ ಎರಡು ನಿಮಿಷವೂ ಹಿಡಿಯದು ಆ ಕೆಲಸಕ್ಕೆ. ಆದರೆ ತೋಡಿ ಎಸೆದ ಮರಳೇ ಮತ್ತೆ ಕೆಳಕ್ಕೆ ಜಾರಿ ತೋಡಿದ್ದೆಲ್ಲಾ ಮುಚ್ಚಿಕೊಂಡು ಮತ್ತದೇ ಕೆಲಸ ! ಅದ ರೊಡನೆ ಬೆನ್ನ ಮೇಲೆ ಒಂದೇ ಸಮನೆ ಮಳೆಯಂತೆ ಸುರಿಯುತ್ತಿರುವ ಮರಳು !

ವಿಮಾನದೊಳಕ್ಕೆ ಪ್ರವೇಶಿಸಿ ಒಂದು ನಿಮಿಷ ಹರಿಯುತ್ತಿದ್ದ ಬೆವರೊ ರೆಸಿಕೊಳ್ಳಲು, ಉಸಿರು ತೆಗೆದುಕೊಳ್ಳಲು ವ್ಯಯಿಸಿದೆವು.

ಒಳಗೆ ಕೊಳೆತ ಹೆಣಗಳ ವಾಸನೆ, ಎಸ್ ! ಹಗಲಿನ ಉಧೃತ ಟೆಂಪರೇ

ಚರ್‌ನಿಂದಾಗಿ ಹೆಣಗಳು ಬಹಳ ಬೇಗ ಕೊಳೆತು ನಾರುತ್ತವಿಲ್ಲಿ ಮೂಗು ಸಿಂಡರಿಸಿಕೊಂಡೇ ಕಾಕ್‌ಪಿಟ್‌ನೊಳಕ್ಕೆ ಪ್ರವೇಶಿಸಿದೆವು.

ಥಳ-ಥಳನೆ ಹೊಳೆಯುತ್ತಿರುವ ಡಯಲ್ಸ್ ಇರುವ ರೇಡಿಯೋ ಟ್ರಾನ್ಸ್ಮೀಟರ್ ಫ್ಲಾಷ್ ಲೈಟ್ ಬೆಳಕಿನಲ್ಲಿ ಒಂದು ಪಕ್ಕಕ್ಕಿರುವುದು ಕಾಣಿಸಿತು. ಆಫ್ ಪೊಸಿಷನ್‌ನಲ್ಲಿತ್ತು ಈಗದರ ಸ್ವಿಚ್.

"ಬ್ಯಾಟರಿ ವರ್ಕಾಗುತ್ತಿದೆಯೋ ಇಲ್ಲವೋ ನೋಡಬೇಕು" ಅಂದ ಷೇರ್ ಖಾನ್ ಸ್ವಿಚ್ ಆನ್ ಮಾಡುತ್ತಾ

ಕರಕರ ಶಬ್ದ ಕೇಳಿಸಿತು. ಫ್ಲಾಷ್ ಲೈಟ್ ಬೆಳಕಲ್ಲಿ ಷೇರ್‌ಖಾನ್ ಮುಖದ ಮೇಲಿನ ನಗು ಗಮನಿಸಿ ಸಂತೃಪ್ತಿಯ ಉಸಿರು ಹೊರ ಚೆಲ್ಲಿದೆ.

ವೇವ್‌ಲೆಂಗ್ತ್ ಡಿಸ್ಟರ್ಬ್ ಮಾಡಲೋಗದೆ, ಡಯಲ್ ತೋರಿಸುತ್ತಿರುವ ವೇವ್‌ಲೆಂಗ್ ಮೇಲೇ ಸಿಗ್ನಲ್ ಕಳಿಸಲು ಶುರು ಮಾಡಿದ ಷೇರ್‌ಖಾನ್. ವಿಮಾನ ಅದೃಶ್ಯವಾದ ಇಪ್ಪತ್ನಾಲ್ಕು ಗಂಟೆಗಳಾದ ಮೇಲೂ ಕಂಟ್ರೋಲ್ ಸ್ಟೇಷನ್‌ನವರು ಆ ವೇವ್‌ಲೆಂಗ್ತ್ ಮೇಲೆ ನಿಗಾ ಇಟ್ಟಿರುತ್ತಾರೆಂಬುದು ನನಗೇನೋ ಅನುಮಾನವೇ. ಆದರೂ ಬೇರೆ ದಾರಿಯಿಲ್ಲ. ಪ್ರಯತ್ನಿಸಲೇ ಬೇಕು

ಎರಡು ನಿಮಿಷ ಸತತವಾಗಿ ಸಿಗ್ನಲ್ ಕಳಿಸಿದ ಮೇಲೆ ಅಲ್ಲಿಂದ ಬರಬಹುದಾದ ಸಮಾಧಾನಕ್ಕಾಗಿ ಇನ್ನೊಂದು ನಿಮಿಷ ಕಾದೆವು. ರಿಸೆಪ್ಷನ್ ಸಿಗ್ನಲ್ ಬಲ್ಬ್ ಮಾಮೂಲಿನಂತೆಯೇ ಬೆಳಗುತ್ತಿತ್ತು. ಅಂದರೆ ಆತ್ತ ಬದಿಯವ್ಯಾರೂ ಟ್ರಾನ್ಸ್ಮಿಷನ್ ರಿಸೀವ್ ಮಾಡಿಕೊಂಡಿಲ್ಲವೆಂದು ಅರ್ಥ! ತಕ್ಷಣ ಜೋಧ್‌ಪುರ್ ಬೇಸ್ ವೇವ್‌ಲೆಂಗ್ತ್ ಮೇಲೆ ಸಿಗ್ನಲ್ ಕಳಿಸುವಂತೆ ಆದೇಶಿಸಿದೆ.

ಸಾಮಾನ್ಯವಾಗಿ ಪ್ರತಿ ಗುರುವಾರ ಬೆಳಿಗ್ಗೆ ಹತ್ತರಿಂದ ಹನ್ನೊಂದರ ನಡುವೆ ನಮ್ಮ ಟ್ರಾನ್ಸ್ಮಿಷನ್‌ಗಾಗಿ ಕಾಯುತ್ತಾರೆ ಅವರು. ರಿಸೀವಿಂಗ್ ಸೆಟ್‌ನಲ್ಲಿ ಆ ವೇವ್‌ಲೆಂಗ್ತ್ ಮೇಲೆ ಟ್ರಾನ್ಸ್ಮೀಷನ್ ಮಾಡುವ ವೇಳೆಯಲ್ಲಿ ರಿಸೆಪ್ಷನ್ ಇಲ್ಲದಿದ್ದರೆ ಎಷ್ಟು ಸಿಗ್ನಲ್ಸ್ ಕಳಿಸಿದರೂ ವ್ಯರ್ಥವೇ ಐದು ನಿಮಿಷ ಸಿಗ್ನಲ್ ಕಳಿಸಿ ಸೆಟ್ ಆಫ್ ಮಾಡಿದ ಷೇರ್‌ಖಾನ್.

ಒಂದು ಕ್ಷಣ ನಿರಾಸೆಯೊಡನೆ ಟ್ರಾನ್ಸ್ಮೀಟರ್ ಕಡೆಗೆ ನೋಡಿದೆ. ತಟಕ್ಕನೊಂದು ವಿಷಯಸ್ಫುರಿಸಿತು.

"ಜೋಧ್‌ಪುರ್ ರೇಡಿಯೋ ಸ್ಟೇಷನ್ ಆಗಲಿ ಬಿಕ್‌ನೀರ್ ರೇಡಿಯೋ ಸ್ಟೇಷನ್ ಆಗಲಿ ಯಾವ ವೇವ್‌ಲೆಂಗ್ತ್ ಮೇಲೆ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತವೆ ?" ಕೇಳಿದೆ.

"ಜೋಧ್‌ಪುರ್ ಷಾರ್ಟ್ ವೇವ್ 30.1 ಮೇಲೆ ಪ್ರಸಾರ ಮಾಡುತ್ತದೆ" ಅಂದ ಷೇರ್‌ಖಾನ್ ಒಂದು ಕ್ಷಣ ಅರ್ಥವಾಗದವನಂತೆ.

ಸಾಮಾನ್ಯವಾಗಿ ಯಾವಾಗಲಾದರೂ ರೇಡಿಯೋ ಆನ್ ಮಾಡಿ ಸ್ಟೇಷನ್ ಇಂಡಿಕೇಟರ್ ನೀಡಲ್ ತಿರುಗಿಸುತ್ತಿದ್ದರೆ ನಮಗೆ ಅರ್ಥವಾಗದ ಸಂಭಾಷಣೆಗಳು ಕೇಳಿಸುತ್ತಿರುತ್ತವೆ ಆಗಾಗ ಅವು ಏರ್‌ಪೋರ್ಟ್ ಫ್ಲೈಟ್ ಕಂಟ್ರೋಲ್ ರೂಂ ಆಫೀಸರ್ಸ್ ಮಾರ್ಗ ಮಧ್ಯದಲ್ಲಿರುವ ಪ್ಲೈಟ್ ನಾವಿಗೇಟರ್ಸ್ ಜೊತೆಗೆ ನಡೆಸುವ ಸಂಭಾಷಣೆ ಎಂದು ಬಹಳ ಜನಕ್ಕೆ ಗೊತ್ತಿಲ್ಲ.

ಆ ಸೂತ್ರವನ್ನೇ ನಾನೀಗ ಜಾರಿಗೊಳಿಸುವ ಯೋಚನೆ ಮಾಡಿದ್ದದ್ದು. ಯಾರಾದರೂ ಆ ಟೈಂನಲ್ಲಿ ಜೋಧ್‌ಪುರ್ ರೇಡಿಯೋ ಸ್ಟೇಷನ್ ಆನ್ ಮಾಡಿದರೆ ಪ್ರಸಾರವನ್ನು ಕೇಳುವ ಸಾಧ್ಯತೆಯಿತ್ತು. ರಾಜಸ್ಥಾನ್‌ನಲ್ಲಿರುವ ಎಷ್ಟೋ ಲಕ್ಷ ರೇಡಿಯೋ ಸೆಟ್‌ಗಳಲ್ಲಿ ಒಂದಾದರೂ ಆನ್ ಆಗಿರುವುದಿಲ್ಲವೇ ಎಂದು ನಮ್ಮ ದುರಾಸೆ.

ಥರ್ಟಿ ಪಾಯಿಂಟ್ ಒನ್‌ಗೆ ಡಯಲ್ ಸೆಟ್ ಮಾಡಿ ನಾನು ಹೇಳಿದ ಮೆಸ್ಸೇಜ್ ರೇಡಿಯೋ ಅನೌನ್ಸರ್‌ನಂತೆ ಪ್ರಸಾರ ಮಾಡಲು ಶುರು ಮಾಡಿದ ಷೇರ್‌ಖಾನ್.

"ದಿಸೀಸ್ ಇಂಡಿಯನ್ ಗವರ್ನ್‌ಮೆಂಟ್ ಜಿಯಾಲಜಿಕಲ್ ಸೆಂಟರ್ ಕಾಲಿಂಗ್ ಫ್ರಂ ಥಾರ್......ರಿಪೀಟ್......ದಿಸೀಸ್ ಗರ್ವನ್‌ಮೆಂಟ್ ಜಿಯಾಲಜಿಕಲ್ ಸೆಂಟರ್ ಕಾಲಿಂಗ್ ಫ್ರಂ ಥಾರ್ ! ಡೆಲ್ಲಿ ಟು ಬಾಂಬೆ ಫ್ಲೈಟ್ ನೆನ್ನೆ ರಾತ್ರಿ ನಮ್ಮ ಸೆಂಟರ್ ಬಳಿ ಕ್ರಾಷ್ ಆಗಿದೆ. ಪ್ಲೈಟ್ ಸಿಬ್ಬಂದಿಯನ್ನು ಕೊಲೆ ಮಾಡಲಾಗಿದೆ. ಪ್ಲೀಸ್ ಪಾಸ್ ದ ಮೆಸ್ಸೇಜ್ ಟು ಅಥಾರಿಟೀಸ್......ಹತ್ತಿರದಲ್ಲಿರುವ ಅಧಿಕಾರಿಗಳಿಗೆ ಈ ವಿಷಯವನ್ನು ತಕ್ಷಣ ತಿಳಿಸಿ...... ದಿಸೀಸ್ ಟಾಪ್ ಎಮರ್ಜೆನ್ಸಿ......"

ಅದೇ ಮೆಸ್ಸೇಜ್ ಹತ್ತು ಸಲವಾದರೂ ರಿಪೀಟ್ ಮಾಡಲು ಹೇಳಿದೆ ಷೇರ್‌ಖಾನ್‌ಗೆ

# 8

ಏನೋ ಶಬ್ದ !

ಯಾರೋ ವಿಮಾನವನ್ನು ಹಾಮರ್‌ಗಳಿಂದ ಹೊಡೆಯುತ್ತಿರುವಂತೆ ಒಂದೊಂದು ಏಟಿಗೂ ವಿಮಾನದ ಗೋಡೆಗಳೂ ಅಲ್ಲಾಡುತ್ತಿರುವಂತೆ....

ಷೇರ್‌ಖಾನ್‌ಗೆ ಸನ್ನೆ ಮಾಡಿ ಬಾಗಿಲ ಬಳಿಗೆ ಓಡಿದೆ.

ಬಾಗಿಲು ಕ್ಲೋಸ್ ಆಗಿತ್ತು.

ಗುಂಡಿಗೆ ಝಲ್ಲೆಂದಿತ್ತು ಆಗ.

ನಾವು ಒಳಕ್ಕೆ ಬಂದಾಗ ಗಾಳಿಗೆ ಬಾಗಿಲು ಮುಚ್ಚಿಕೊಳ್ಳದಿರಲು ಪಿಕ್ ಏಕ್ಸ್ ಅಡ್ಡವಿರಿಸಿ ಬಂದಿದ್ದೆವು. ಈಗಿಲ್ಲ ಅದು !

ಎರಡೂ ಕೈಗಳಿಂದ ಬಾಗಿಲನ್ನು ಬಲವಾಗಿ ತಳ್ಳಿದೆ. ಎರಡು ಬೆರಳಿಡುವಷ್ಟು ಸಂದಿಯೇರ್ಪಟ್ಟಿತು. ಹೊರಗಿನಿಂದ ಯಾರೋ ಅದುಮಿ ಹಿಡಿದಂತೆ ತೋರುತ್ತಿತ್ತು. ನಾವು ತೋಡಿ ಎಸೆದಿದ್ದ ಮರಳು ಮತ್ತೆ ಬಾಗಿಲ ಸುತ್ತಲೂ ಕೂರಿಕೊಂಡಂತಿತ್ತು.

ಬಾಗಿಲು ಇನ್ನೂ ಬಲವಾಗಿ ತಳ್ಳಿದೆ. ಇನ್ನೊಂದು ಅಂಗುಲದಷ್ಟು ಕದಲಿತು.....ಅಷ್ಟೇ. ಅದಕ್ಕಿಂತಲೂ ಹೆಚ್ಚಿಗೆ ತಳ್ಳಲಾಗಲಿಲ್ಲ ನನ್ನಿಂದ.

ಯಾರೋ ವಿಮಾನದ ತಳ ಭಾಗವನ್ನು ಒಂದೇ ಸಮ ಗಟ್ಟಿಸುತ್ತಲೇ ಇದ್ದರು. ಬಾಗಿಲ ಸಂದಿಯಿಂದ ಹೊರಗೆ ನೋಡಿದೆ ಯಾರೂ ಕಾಣಿಸಲಿಲ್ಲ. ಗಾಳಿಯೊಡನೆ ಬರುವ ಮರಳ ಕಣಗಳು ಗಾಗಲ್ಸ್‌ಗೆ ಬಡಿದು ಸರಿಯಾಗಿ ನೋಡಲಾಗುತ್ತಿರಲಿಲ್ಲ.

ಇದ್ದಕ್ಕಿದ್ದಂತೆ ಗಟ್ಟಿಸುತ್ತಿದ್ದ ಶಬ್ದ ನಿಂತು ಹೋಯಿತು. ಒಂದು ಕ್ಷಣ ಗಾಳಿ, ಮರಳಿನ ಶಬ್ದದ ವಿನಹ ಇನ್ನೇನೂ ಕೇಳಿಸುತ್ತಿಲ್ಲ.

ಆದರೆ...... ಬೆಂಕಿಯು ಕೆಸ್ನಾಲಿಗೆ ದಿಢೀರನೆ ವಿಮಾನದ ಹಿಂಬದಿಯಲ್ಲಿ ಕಾಣಿಸಿಕೊಂಡಿತು !

ಸ್ವೀಟ್ ಜೀಸಸ್ !

ಪೆಟ್ರೋಲ್ ಟ್ಯಾಂಕ್‌ಗೆ ಯಾರೋ ಬೆಂಕಿ ಹತ್ತಿಸಿದಂತೆ ಕಾಣುತ್ತಿದ್ದರು. ತಟಕ್ಕನೆ ಹಿಂದೆ ತಿರುಗಿ ಕ್ಯಾಬಿನ್‌ನೊಳಕ್ಕೆ ಓಡಿ ಬಂದೆ.

ಷೇರ್‌ಖಾನ್ ಮೆಸ್ಸೇಜ್ ಕಳಿಸಿಕೊಂಡೇ ನನ್ನ ಕಡೆ ಪ್ರಶ್ನಾರ್ಥಕವಾಗಿ ನೋಡಿದ

"ಡ್ರಾಪ್ ಇಟ್ ಖಾನ್ ! ವಿ ಆರ್ ಇನ್ ಡೈರ್ ಎಮರ್ಜೆನ್ಸಿ ! ಯಾರೋ ಪೆಟ್ರೋಲ್ ಟ್ಯಾಂಕ್‌ಗೆ ಬೆಂಕಿಯಿಟ್ಟಿದ್ದಾರೆ. ಮೂವ್ ಫಾಸ್ಟ್" ಅಂದೆ ಹಿಂದಕ್ಕೆ ತಿರುಗಿ ಓಡುತ್ತಾ.

ನನ್ನ ಹಿಂದೆಯೇ ಓಡಿ ಬಂದ ಷೇರ್‌ಖಾನ್.

ಇಬ್ಬರೂ ಒಟ್ಟಿಗೂಡಿ ಬಾಗಿಲನ್ನು ಜೋರಾಗಿ ತಳ್ಳಲು ಶುರು ಮಾಡಿದೆವು. ಸುಮಾರು ಅರ್ಧಡಿಯಷ್ಟು ಓಪನ್ ಆಯಿತು. ಯಾರೋ ಬಾಗಿಲು ಮುಚ್ಚಿ ಅದರ ಸುತ್ತಲೂ ಮರಳು ಸುರಿದಂತೆ ಕಾಣುತ್ತಿತ್ತು. ಮರಳು ಸಡಿಲವಾಗಿದ್ದ ಕಾರಣ ಇನ್ನೆರಡು ಅಂಗುಲದಷ್ಟು ಓಪನ್ ಮಾಡಲು ಸಾಧ್ಯವಾಯಿತು. ಸಂದಿಯಿಂದ ಬೆಂಕಿಯ ಆರ್ಭಟ ಕಾಣಬರುತ್ತಿತ್ತು.

ಹೈಲಿ ಪ್ಯೂರಿ ಫೈಡ್ ವೈಟ್ ಪೆಟ್ರೋಲ್ ! ನಾವು ಬಾಗಿಲಿಗಡ್ಡ ವಿಟ್ಟಿದ್ದ ಪಿಕ್ ಏಕ್ಸ್‌ನಿಂದಲೇ ಪೆಟ್ರೋಲ್ ಟ್ಯಾಂಕ್‌ಗೆ ತೂತು ಮಾಡಿರಬೇಕು. ಹೊರಗೆ ಮರಳು ಬೀಳುತ್ತಿದ್ದರೂ ಒಳಗಿನ ಕ್ಯಾವಿಟಿಯಲ್ಲಿ ಏರ್‌ಪ್ರೆಷರ್ ಹೆಚ್ಚಾಗಿ ಟ್ಯಾಂಕ್ಸ್ ಸ್ಫೋಟಿಸುವ ಸಾಧ್ಯತೆಯಿತ್ತು.

ಬಹುಕಷ್ಟದೊಡನೆ ಇಬ್ಬರೂ ಬಾಗಿಲ ಸಂದಿಯಿಂದ ಹೊರಬಿದ್ದೆವು.

ಬುಸ್ಸೆಂದು ಉರಿಯುತ್ತಿರುವ ಬೆಂಕಿಯು ಉರಿ ಕಾಣಿಸುತ್ತಿತ್ತು. ಕೈಚಾಚಿ ನೈಲಾನ್‌ರೋಪ್ ಹಿಡಿಯಲು ಪ್ರಯತ್ನಿಸಿದೆ. ಕೈಗೆಟಕುವ ದೂರದಲ್ಲಿದ್ದ ರೋಪ್ ಕೈಗೆ ಸಿಗಲಿಲ್ಲ !

ಢಢಕ್ಕೆಂದಿತು ಗುಂಡಿಗೆ. ರೋಪ್‌ನ ಸಹಾಯವಿಲ್ಲದೆ ಸ್ಥಾವರವನ್ನು ತಲುಪುವುದು ಒಂದು ರೀತಿ ಅದೃಷ್ಟದ ಮೇಲೆ ಆಧಾರಿತ !

"ಕಮಾನ್ ಸಾರ್ ! ರೋಪ್‌ಗಾಗಿ ಹುಡುಕಿ ಪ್ರಯೋಜನವಿಲ್ಲ. ಸ್ಟ್ರೈಟ್ ಲೈನ್‌ನಲ್ಲಿ ಓಡಿದರೆ ಬ್ಯಾರಕ್ಸ್ ಬಳಿಗೆ ಹೋಗುತ್ತೇವೆ" ಎಂದು

ಧೈರ್ಯ ಕೊಡುತ್ತಾ ಮುಂದಕ್ಕೋಡಿದ ಷೇರ್ ಖಾನ್.

ನಾನೂ ಅವನ ಹಿಂದೆಯೇ ಓಡಲು ಶುರು ಮಾಡಿದೆ. ಟ್ಯಾಂಕ್ ಎಕ್ಸ್‌ಪ್ಲೋಡ್ ಆಗುವ ವೇಳೆಗೆ ಸಮೀಪದಲ್ಲಿರುವುದು ಅಪಾಯಕರ.

"ರೋಗ್ಸ್ ! ಡರ್ಟಿ ಬಾಸ್ಟರ್ಡ್ಸ್ !" ಮನಸಾರೆ ಬೈದೆ ಆ ಕೆಲಸ ಮಾಡಿದವರನ್ನ ಓಡುತ್ತಿರುವಂತೆಯೇ.

ಐವತ್ತು ಗಜಗಳಷ್ಟು ಓಡಿರಬಹುದು. ಓಡುತ್ತಿದ್ದರೆ ಬೂಟುಗಳು ಮರಳಿನೊಳಗೆ ಹೂತು ವೇಗವನ್ನು ಸಂಪೂರ್ಣ ನಿಯಂತ್ರಿಸುತ್ತಿದ್ದವು. ಅಲ್ಲಿಂದ ಹೆಚ್ಚು ದೂರವಾಗುವ ಅವಕಾಶವಾಗಲಿಲ್ಲ.

ಆಗಲೇ ಭಾರೀ ಶಬ್ದವೊಂದು ಕೇಳಿಸಿತು. ಎಗರಿ ಬೋರಲು ಬಿದ್ದ ಷೇರ್ ಖಾನ್. ನಾನವನ ಪಕ್ಕದಲ್ಲೇ ಮುಖ ಕೈಗಳಿಂದ ಮುಚ್ಚಿಕೊಂಡು ನೆಲಕ್ಕುರುಳಿಬಿಟ್ಟೆ.

ತಕ್ಷಣ ಬಾಂಬ್ ಸ್ಫೋಟಗೊಂಡಂತೆ ಎರಡು ಭಯಂಕರ ಶಬ್ದಗಳು ಒಂದರ ಹಿಂದೊಂದರಂತೆ ಕೇಳಿ ಬಂದವು. ಸೌಂಡ್ ಜೊತೆಗೇ ಬ್ರೈಟ್ ಬೆಳಕು. ಸುಮಾರು ಅರ್ಧ ನಿಮಿಷ ಸುತ್ತಲ ಪ್ರದೇಶವನ್ನೆಲ್ಲಾ ತೋಯಿಸಿತು. ನಂತರ ಗಾಢ ಕಾರ್ಗತ್ತಲು.

ಎರಡು ನಿಮಿಷ ಇದ್ದ ಪೊಸಿಷನ್‌ನಲ್ಲೇ ಉಸಿರುಗಟ್ಟಿ ಹಾಗೆಯೇ ಇದ್ದು ಬಿಟ್ಟೆವು. ಅಷ್ಟೊತ್ತಿಗೆ ಮರಳು ನಮ್ಮನ್ನು ಅರ್ಧದವರೆಗೆ ಕವುಚಿ ಬಿಟ್ಟಿತ್ತು. ಐದು ನಿಮಿಷ ಹಾಗೇ ಇದ್ದರೆ ಮರಳ ಸಮಾಧಿ ಪೈಸಾ ಖರ್ಚಿಲ್ಲದೆ ಆಗಿಬಿಡುತ್ತಿತ್ತು !

ಮೇಲನೆದ್ದು ವಿಮಾನದ ಕಡೆಗೆ ನೋಡಿದೆವು. ಅಲ್ಲಲ್ಲಿ ಬೆಂಕಿ ಧಗಧಗನೆ ಉರಿಯುತ್ತಿತ್ತಷ್ಟೇ. ಸ್ವಲ್ಪ ಹೊತ್ತಿಗೆ ಅದೂ ಇರದು. ಈ ಸತತ ಮರಳ ಮಳೆ ಬೆಂಕಿಯನ್ನು ಬಹಳ ಹೊತ್ತು ಉರಿಯಲು ಬಿಡದು.

ವಿಮಾನ ಸಂಪೂರ್ಣ ನಾಶವಾಗಿತ್ತು. ಅಂದರೆ ರೇಡಿಯೋ ಟ್ರಾನ್ಸ್‌ಮಿಟರ್‌ನಿಂದ ಇನ್ನೊಮ್ಮೆ ಮೆಸ್ಸೇಜ್ ಕಳಿಸುವ ಅವಕಾಶವಿಲ್ಲ.

ಯಾರೋ ನಮ್ಮ ಹಿಂದೆಯೇ ಬಂದು ನಾವು ವಿಮಾನದೊಳಕ್ಕೆ ಹೋದೊಡನೆ ಬಾಗಿಲು ಮುಚ್ಚಿ, ತೆಗೆಯಲಾಗದಂತೆ ಮರಳ ಅಡ್ಡಗೋಡೆ ನಿರ್ಮಿಸಿ ಫ್ಯೂಯಲ್ ಟ್ಯಾಂಕ್ಸ್‌ಗೆ ರಂಧ್ರ ಮಾಡಿ ಬೆಂಕಿಯಿಟ್ಟರು. ಯಾರಾ ಪುಣ್ಯಾತ್ಮರು ?

# 9

ಕೊಠಡಿಯೊಳಗೆ ಡಾಕ್ಟರ್ ಹೇಮಂತ್‌ನನ್ನು ನೋಡಿದೊಡನೆ ನಡೆದುದೇನೆಂದು ಯಾರೂ ಹೇಳದೇನೇ ಅರ್ಥವಾಗಿತ್ತು.

ಕೊಠಡಿಯ ನಡ ವೆ ಬಹಳ ಸುಸ್ತಾದವನಂತೆ ಕಣ್ಣು ಮುಚ್ಚಿ ಕುಳಿತಿದ್ದ ಡಾಕ್ಟರ್ ಹೇಮಂತ್. ಚಂಚಲ್ ಬೋಸ್ ಅವನ ತಲೆಯ ಸುತ್ತಲೂ ಬ್ಯಾಂಡೇಜ್ ಮಾಡುತ್ತಿದ್ದ.

ಕೊಠಡಿಯೊಳಕ್ಕೆ ಎಂಟರ್ ಆದೊಡನೆ, "ನಮಗಿಂತ ಮೊದಲು ಕೊಠಡಿಯೊಳಕ್ಕೆ ಯಾರು ಬಂದರು ?" ಕೇಳಿದೆ ಏದುಸಿರುಬಿಡುತ್ತಾ.

ಯಾರೂ ಮಾತಾಡಲಿಲ್ಲ. ಒಬ್ಬರ ಮುಖಗಳನ್ನೊಬ್ಬರು ನೋಡಿಕೊಂಡರು.

ಅಷ್ಟರಲ್ಲಿ ಡಾಕ್ಟರ್ ಹೇಮಂತ್ ನಿಧಾನವಾಗಿ ಕಣ್ಣು ತೆರೆದು ನಮ್ಮ ಕಡೆಗೆ ನೋಡಿದ. ಆತನ ಹಿಂತಲೆಗೆ ಯಾರೋ ಜೋರಾಗಿ ಹೊಡೆದಿದ್ದರು. ನಮ್ಮನ್ನು ನೋಡಿ ನಿಸ್ಸಂಜ ನಗೆಬೀರಿ ಕುಡಿಯಲು ನೀರು ಬೇಕೆಂದು ಸನ್ನೆ ಮಾಡಿದ.

ಅವನು ನೀರು ಕುಡಿದು ಮುಗಿಸಿದೊಡನೆ ಕೇಳಿದೆ, "ಡಾಕ್ಟರ್ ! ಹೇಗಾಯಿತು ಇದು ?"

"ನೀವು ಹೋದ ಎರಡು ಮೂರು ನಿಮಿಷಗಳಿಗೆಲ್ಲಾ ಕೊಠಡಿಯಲ್ಲಿ ಯಾರೋ ಓಡಾಡಿದಂತಾಯಿತು. ಎದ್ದು ಲೈಟ್‌ಸ್ವಿಚ್ ಹಾಕಲು ಹೋದೆ. ಲೈಟ್ ಹತ್ತುವ ಮೊದಲೇ ಯಾರೋ ತಲೆಯ ಮೇಲೆ ಬಲವಾದ ವಸ್ತುವಿನಿಂದ ಹೊಡೆದರು. ತಕ್ಷಣ ಮೂರ್ಛೆ ಹೋದೆನೆಂದು ಕಾಣಿಸುತ್ತದೆ. ಮತ್ತೆ ಎಚ್ಚರವಾದಾಗ ಮಿಸ್ಟರ್ ಬೋಸ್ ಮುಖಕ್ಕೆ ನೀರು ಚಿಂಪಡಿಸುತ್ತಿದ್ದರು.

ಉಳಿದವರೆಲ್ಲಾ ಸುತ್ತಲೂ ಕುಂಟಿಕೊಂಡಿದ್ದರು....." ಅಂದ ಒಂದೊಂದೇ ಶಬ್ದ ಕಷ್ಟಪಟ್ಟು ಉಚ್ಚರಿಸುತ್ತಾ ಡಾಕ್ಟರ್ ಹೇಮಂತ.

ಕಲಿವಾಗುತ್ತಾ ಎಲ್ಲರ ಕಡೆಗೆ ನೋಡಿದೆ. "ಡಾಕ್ಟರ್ ಹೇಮಂತರನ್ನು ಕೊಠಡಿಯೊಳಕ್ಕೆ ಕರೆತಂದವರ್ಯಾರು ?"

ಚಂಚಲ್ ಬೋಸ್ ನನ್ನ ಕಡೆಗೆ ತಿರುಗಿದ. "ಹಠಾತ್ತನೆ ಯಾವುದೋ ಸ್ಫೋಟ ಸಂಭವಿಸಿದಂತೆ ಶಬ್ದವಾಗಿ ನಿದ್ರಿಸುತ್ತಿದ್ದವನು ಎಚ್ಚರಗೊಂಡೆ. ಬಹುಶಃ ಎಲ್ಲರಿಗೂ ಆ ಶಬ್ದ ಕೇಳಿರಬೇಕು.... ಎಚ್ಚರಗೊಂಡ ಪ್ರತಿಯೊಬ್ಬರೂ ಭೀತಿಯಿಂದ ಪಕ್ಕದವರನ್ನು ವಿಚಾರಿಸುತ್ತಿದ್ದರು. ನಾನೆದ್ದು ಲೈಟು ಹಾಕಲೋದೆ. ಆದರೆ ಅಷ್ಟೊತ್ತಿಗೆ ಚಾಂದ್‌ಸಿಂಗ್ ಲೈಟಾನ್ ಮಾಡಿದರು" ಅಂದ.

"ವೈಟ್ ಎ ಸೆಕೆಂಡ್ ! ಕೊಠಡಿಯಲ್ಲಿ ಲೈಟ್ ಹತ್ತಿಕೊಂಡಾಗ ಎಲ್ಲರೂ ಒಳಗೇ ಇದ್ದರೇ ?" ಕೇಳಿದೆ.

ಭುಜ ಎಗರಿಸಿದ ಬೋಸ್. "ಗಮನಿಸಲಿಲ್ಲ ಎಲ್ಲರೂ ಭೀತಿಯಿಂದ ಕೊಠಡಿ, ವರಾಂಡ ಎಲ್ಲ ತಿರುಗಾಡುತ್ತಿದ್ದರು. ನೀವು ಮೂವರೂ ಕಣ್ಣಿಗೆ ಬೀಳಲಿಲ್ಲ. ವರಾಂಡ ಲೈಟ್ ಹಾಕಿದಾಗ ಕೈಕಾಲು ಕಟ್ಟಿ ಬಾಯಿಗೆ ಬಟ್ಟೆ ತುರುಕಿ ಮೂರ್ಛೆ ಹೋಗಿರುವ ಡಾಕ್ಟರ್ ಹೇಮಂತ್ ಕಾಣಿಸಿದರು ತಕ್ಷಣ ಅವರನ್ನು ಒಳಕ್ಕೆತ್ತಿಕೊಂಡು ಬಂದು ಫಸ್ಟ್ ಏಡ್ ಮಾಡಿದೆ" ಅಂದ.

ಡ್ಯಾಮಿಟ್ ಅಂದುಕೊಂಡೆ ಮನದಲ್ಲೇ.

ಪರಿಸ್ಥಿತಿ ನನ್ನ ಕೈ ಮೀರಿ ಹೋಗುತ್ತಿದೆ ಎಂಬುದರಲ್ಲಿ ಸಂಶಯವೇ ಇಲ್ಲ ಅವಶ್ಯಕತೆಯೊದಗಿದರೆ ಟೈಂ ಬಂದರೆ ಹಂತಕರು ನಮ್ಮೆಲ್ಲರನ್ನು ಕೊಂದು ಹೋಗುತ್ತಾರೆನ್ನುವುದರಲ್ಲೂ ಸಂದೇಹವೇ ಬೇಡ ಆದ್ದರಿಂದ ಪ್ರಾಣಾಪಾಯದೊಡನಿರುವ ಉಳಿದೆಲ್ಲರಿಗೂ ತಾವಿರುವ ಪರಿಸ್ಥಿತಿ ಎಂತಹುದು ಎಂದು ತಿಳಿಸಿಬಿಡುವುದು ಒಳ್ಳೆಯದೆನಿಸಿತು.

ಅದರಿಂದ ಸ್ವಲ್ಪ ರಿಸ್ಕ್ ಕಡಿಮೆಯಾಗುತ್ತದೆ ತಮ್ಮೊಡನೆಯೇ ಅಪರಿಚಿತ ಹಂತಕನಿದ್ದಾನೆಂದು ಗೊತ್ತಾದರೆ ಪ್ರತಿಯೊಬ್ಬನೂ ಪಕ್ಕದಲ್ಲಿರುವವನನ್ನು ಕಟ್ಟೆಚ್ಚರದೊಡನೆ ಗಮನಿಸುತ್ತಿರುತ್ತಾನೆ. ಅದರಿಂದಾಗಿ ಹಂತಕರ

ಕೈಕಾಲುಗಳು ಕಟ್ಟಿ ಹಾಕಿದಂತಾಗಿ ಇದುವರೆಗಂತೆ ಫ್ರೀಯಾಗಿ ಮೂವ್ ಆಗಲಾಗದು.

ನಾನು ಷೇರ್‌ಖಾನ್ ಕಡೆಗೆ ತಿರುಗಿ ಗುಂಪಿನ ಹಿಂದೆ ನಿಲ್ಲುವಂತೆ ಸನ್ನೆ ಮಾಡಿ ಗಂಟಲೊಮ್ಮೆ ಸರಿಪಡಿಸಿಕೊಂಡೆ.

"ದಯವಿಟ್ಟು ಎಚ್ಚರಿಕೆಯೊಡನೆ ಕೇಳಿ. ನಾನು ಹೇಳುವ ವಿಷಯದ ಮೇಲೆ ನಮ್ಮೆಲ್ಲರ ಬದುಕು ಆಧಾರಿತ. ನಿಮ್ಮಲ್ಲಿ ಯಾರಿಗಾದರೂ ಈ ಮರುಭೂಮಿಯೊಳಗೆ ವಿಮಾನ ಕ್ರಾಷ್ ಆದದ್ದು ಹೇಗೆಂದು ಗೊತ್ತೆ ?" ಕೇಳಿದೆ.

ಯಾರೂ ಮಾತಾಡಲಿಲ್ಲ. ಕೊಠಡಿಯೊಳಗೆ ಮೌನ.

"ರೈಟ್ ! ಬಹುಶಃ ನಿಮಗ್ಯಾರಿಗೂ ಗೊತ್ತಿಲ್ಲ. ನಿಮ್ಮ ವಿಮಾನ ದಾರಿ ತಪ್ಪಿ ಇತ್ತ ಬಂದು ಕ್ರಾಷ್ ಆಗಲಿಲ್ಲ. ಯಾರೋ ಬಲವಂತವಾಗಿ ವಿಮಾನವನ್ನು ಈ ಡೆಸರ್ಟ್ ನಡುವೆ ಇಳಿಸಿದ್ದಾರೆ. ದಿಸೀಸ್ ಎ ಕ್ಲಿಯರ್ ಕೇಸ್ ಆಫ್ ಹೈಜಾಕ್ ! ಯಾರು ಮಾಡಿದರು, ಏಕೆ ಮಾಡಿದರು ನನಗಂತೂ ಇನ್ನು ಅರ್ಥವಾಗಿಲ್ಲ. ಆದರೆ ಆ ಹೈಜಾಕ್ ಮಾಡಿದ ಜನ ಮಾತ್ರ ನಿಮ್ಮ ನಡುವೆಯೇ ಇದ್ದಾರೆ ! ಅಷ್ಟೇ ಅಲ್ಲ.... ವಿಮಾನದ ಸಿಬ್ಬಂದಿ ನಿಮಗೆ ಈ ಮೊದಲು ತಿಳಿಸಿದಂತೆ ಲ್ಯಾಂಡಿಂಗ್ ಷಾಕ್‌ನಿಂದಾಗಿ ಪ್ರಾಣ ಕಳೆದುಕೊಳ್ಳಲಿಲ್ಲ. ದೇ ವರ್ ಮರ್ಡರ್ಡ್ ಬೈ ಸಮ್ ಒನ್ ! ಬದುಕಿದ್ದರೆ ತಮ್ಮನ್ನು ಗುರುತಿಸಿ ಬಿಡುತ್ತಾರೆಂದು ವಿಮಾನದ ಅಪಹರಣಕಾರರೇ ಅವರನ್ನು ಕೊಂದಿದ್ದಾರೆ. ಮತ್ತೆ ಈ ದಿನ ನಾವು ವಿಮಾನದ ಬಳಿಗೆ ಹೋದೊಡನೆ ನಮ್ಮನ್ನು ಹಿಂಬಾಲಿಸಿ ಬಂದು ಫ್ಯೂಯಲ್ ಟ್ಯಾಂಕ್ಸ್‌ಗೆ ಬೆಂಕಿಯಿಟ್ಟಿದ್ದಾರೆ. ಅವರೇ ನಮ್ಮ ಟ್ರಾನ್ಸ್‌ಮೀಟರ್ ಸಹ ಟೇಬಲ್ ಮೇಲಿಂದ ಕೆಳಕ್ಕುರುಳಿಸಿ ಪುಡಿಗುಟ್ಟಿಸಿದವರು ಎಂಬುದು ಸಂಶಯಾತೀತ.

"ನೌ ಮೈ ಡಿಯರ್ ಫ್ರೆಂಡ್ಸ್ ! ಇವಿಷ್ಟು ನಡೆದ ಘಟನೆಗಳು. ಮೊದಲ ದಿನವೇ ವಿಮಾನದ ಸಿಬ್ಬಂದಿ ಮರ್ಡರ್ ಆದ ಸಂಗತಿ ತಿಳಿದರೂ ನಿಮ್ಮೆಲ್ಲರನ್ನು ಇನ್ನಷ್ಟು ಪ್ಯಾನಿಕ್‌ಗೊಳಿಸುವ ಇಚ್ಛೆಯಿಲ್ಲದೆ ಹೇಗೂ ಹೊರಗಿನಿಂದ ಸಹಾಯ ಬರುತ್ತದೆಂಬ ನಂಬಿಕೆಯೊಡನೆ ಸುಮ್ಮನಾದೆವು. ಆದರೆ ಇಷ್ಟೆಲ್ಲಾ ಆದ ಮೇಲೆ ನಿಮಗೆ ತಿಳಿಸದಿರುವುದು ತಪ್ಪು ಅನ್ನಿಸಿತು. ಸೋ..... ವಾಚ್ ಔಟ್ ! ನಿಮ್ಮ ಹದಿಮೂರು ಜನರೊಳಗೇ ಆ ದುಷ್ಟರಿರುವುದು

ನಿಸ್ಸಂದೇಹ !" ಅಂದೆ ಒಂದೊಂದೇ ಮಾತು ಸ್ಪಷ್ಟವಾಗಿ ಅರ್ಥವಾಗುವಂತೆ ಒತ್ತಿ ಹೇಳುತ್ತಾ.

ಎಲ್ಲರೂ ಭೀತಿ ಭರಿತ ಕಂಗಳೊಡನೆ ಒಬ್ಬರನ್ನೊಬ್ಬರು ನೋಡಲು ಶುರು ಮಾಡಿದರು.

"ಮಿಸ್ಟರ್ ಶಿವಾ ! ದಿಸೀಸ್ ಟೂ ಮಚ್! ಆರ್ ಯು ಸೀರಿಯಸ್?" 'ಗುಂಸಾವ್' ಪಿಕ್ಚರ್‌ನ ವರ್ಷನ್ ಅಲ್ಲ ತಾನೇ ?" ಬಲವಂತ್ ಮೆಹ್ರಾ ಧ್ವನಿ ಸಣ್ಣಗೆ ಕಂಪಿಸುತ್ತಿತ್ತು.

"ಮಿಸ್ಟರ್ ಮೆಹ್ರಾ..... ಐಯಾಂ ಡೆಡ್ ಸೀರಿಯಸ್ ! ಫೈಲಟ್ಸ್‌ಗೆ ತಗುಲಿರುವ ಗುಂಡೇಟುಗಳು, ಸ್ಟ್ರಾಂಗಲ್ ಮಾಡಿ ಸತ್ತಿರುವ ಏರ್ ಹೋಸ್ಟೆಸ್..... ನಾನು ನಿಮ್ಮನ್ನು ವಿಮಾನದಿಂದ ಹೊರಕ್ಕೆ ಕಳಿಸಿದೊಡನೆ ಗಮನಿಸಿದೆ" ಅಂದೆ

"ನನಗೆ ನಂಬಲೇ ಆಗುತ್ತಿಲ್ಲ ..... ಇದು...... ಇದು ... ಕೆಟ್ಟ ಕನಸಲ್ಲ ತಾನೇ" ಅಂದಳು ಕಾಮಿನಿ ಸರ್ಕಾರ್ ಜೀವವೇ ಇಲ್ಲದ ಧ್ವನಿಯಲ್ಲಿ.

ಅಸಹನೆಯೊಡನೆ ನೋಡಿದ ಅವಳಕಡೆಗೆ, "ಹಾಗಂದುಕೊಂಡರೆ ನಿನಗಿಂತಾ ಮೂರ್ಖಳಿಲ್ಲ ಮಿಸ್ ಸರ್ಕಾರ್ ! ಯು ಜಸ್ಟ್ ವಾಚೌಟ್ ! ಈ ಅಪರಾಧ ದಲ್ಲಿ ಪಾಳ್ಗೊಳ್ಳದ ನಿಮ್ಮಲ್ಲಿನ ಪ್ರತಿಯೊಬ್ಬರೂ ಪ್ರಾಣಾಪಾಯದೊಡನಿರುವಿ ರೆಂದು ಚೆನ್ನಾಗಿ ನೆನಪಲ್ಲಿಟ್ಟುಕೊಳ್ಳಿ...... ಅನುಕ್ಷಣ !" ಅಂದೆ ಅವಳ ಕಣ್ಣು ಗಳನ್ನೇ ತದೇಕವಾಗಿ ನೋಡುತ್ತಾ.

"ಬಟ್ ಸರ್...... ನಾವಿಲ್ಲಿಂದ...... ಈ ಚಕ್ರವ್ಯೂಹದಿಂದ ಪಾರಾಗುವುದು ಹೇಗೆ ?" ಕೇಳಿದ ಚಂಚಲ್ ಬೋಸ್.

"ಬೆಳಗ್ಗೆಯುವರೆಗೆ ಸಹನೆಯೊಡನಿರಿ. ಬೆಳಗಾದೊಡನೆ ಶ್ರೀಮೋಹನ್ ಘರ್‌ಗೆ ಪ್ರಯಾಣಿಸುವ ಏರ್ಪಾಟು ಮಾಡುತ್ತೇನೆ" ಅಂದೆ ಸುತ್ತಲೂ ನೋಡುತ್ತಾ.

ಅಪನಂಬಿಕೆಯ ನೋಟ ಎಲ್ಲರದೂ.

"ಹೇಗೆ ? ಈ ಮರುಭೂಮಿಯಲ್ಲಿ ಕಾಲ್ನಡಿಗೆಯ ಪ್ರಯಾಣ ಸಾಧ್ಯವೇ ?" ಕೇಳಿದ ಚಾರ್ಲ್ಸ್‌ಫೆರೀರಾ.

"ನೋಡೋಣ !" ಎಂದಷ್ಟೇ ಕ್ಲುಪ್ತವಾಗಿ ಹೇಳಿ ಸುಮ್ಮನಾದೆ.

ನಾವು ಸೇಫಾಗಿ ನಾಗರೀಕ ಪ್ರಪಂಚ ತಲುಪಲಿರುವ ಕೊನೆಯ ಅವಕಾಶ ಏನೆಂಬುದನ್ನು ಈಗಲೇ ಹೇಳಿ ಅದಕ್ಕೊ ಸಂಚಕಾರ ತಂದುಕೊಳ್ಳುವ ಆಸೆಯಿರಲಿಲ್ಲ ನನಗೆ ! ಅಷ್ಟೊಂದು ಬುದ್ಧಿ ಕಲಿಸಿದ್ದರು ಈ ವೇಳೆಗಾಗಲೇ ಆ ಅನಾಮಧೇಯ ಹಂತಕರು !

ಕೊಠಡಿಯಲ್ಲಿ ತಲಾ ಒಂದೊಂದು ಮೂಲೆಯಲ್ಲಿ ಕುಳಿತು ಒಬ್ಬರನ್ನೊಬ್ಬರು ಕಿರುಗಣ್ಣಿನಲ್ಲೇ ಗುಮನಿಸುತ್ತಿದ್ದರೆಲ್ಲಾ. ಆಗಲೇ ವಾಚ್‌ಡಾಗ್ ಡ್ಯೂಟಿ ಶುರುವಾದಂತಿತ್ತು !

ಅಟ್‌ಲೀಸ್ಟ್, ಈ ಥಡೆಯಿಂದ ಹಂತಕರು ಸಡನ್ನಾಗಿ ಏನೂ ಮಾಡಲಾಗದು ಎಂದು ನನ್ನ ನಂಬಿಕೆ.

# 10

ಬಿರುಗಾಳಿಯ ಆರ್ಭಟ ಬೆಳಗಿನ ಜಾವಕ್ಕೆ ಕಡಿಮೆಯಾಗಿತ್ತು. ಗಾಳಿಯ ವೇಗದ ತೀಕ್ಷ್ಣತೆಯೂ ಬಹಳಷ್ಟು ತಗ್ಗಿತ್ತು. ಆಗಾಗ ಬೀಸಿ ಬರುವ ಗಾಳಿಯಲೆಯ ವಿನಹ ವಾತಾವರಣ ಇರುವುದರಲ್ಲಿ ಪ್ರಶಾಂತವಾಗಿತ್ತು.

ಆರು ಗಂಟೆಗೆಲ್ಲಾ ಸೂರ್ಯ ಪೂರ್ವದಲ್ಲಿ ಕಾಣಿಸಿಕೊಂಡು ತನ್ನ ಕಿರಣಗಳ ಎಲ್ಲೆಡೆ ಹರಡತೊಡಗಿದ್ದ. ದೂರದಲ್ಲಿ ಸುಟ್ಟು ಕರಕಾಗಿರುವ ವಿಮಾನದ ಅವಶೇಷ ಕಾಣಿಸುತ್ತಿತ್ತು.

ಈಗಲೇ ನಮ್ಮ ಪ್ರಯಾಣ ಶುರು ಮಾಡಿದರೆ ಶ್ರೀ ಮೋಹನ್‌ಪುರ್‌ಗೆ ಹನ್ನೆರಡು ಗಂಟೆಗೆಲ್ಲಾ ತಲುಪಬಹುದು.

ನಾನು ಎಲ್ಲರಿಗೂ ಪ್ರಯಾಣಕ್ಕೆ ರೆಡಿಯಾಗಲು ತಿಳಿಸಿ ಬ್ಯಾರಕ್ಸ್ ಪಕ್ಕಕ್ಕೆ ನಡೆದೆ.

ಬ್ಯಾರಕ್ಸ್ ಹಿಂದೆ ಸಣ್ಣ ವೆಹಿಕಲ್ ಶೆಡ್ ಇತ್ತು.

ಮರು ಭೂಮಿಯಲ್ಲಿನ ಓಡಾಟಕ್ಕೆಂದು ನಾವು ಉಪಯೋಗಿಸುವ ವೆಹಿಕಲ್ ಅದು. ಡೆಸರ್ಟ್ ರೋವರ್, ಟ್ರಕ್–ತ್ರೀಟನ್ನರ್. ಮರಳಲ್ಲಿ ಹೂತು ಹೋಗದೆ ಪ್ರಯಾಣಿಸಲು ಯುದ್ಧದಲ್ಲಿ ಉಪಯೋಗಿಸುವ ಟ್ಯಾಂಕ್ ನಂತೆಯೇ ಅದು ಚೈನ್ ಸಹಾಯದಿಂದ ಟ್ರಾವೆಲ್ ಮಾಡುತ್ತದೆ. ಕಾಂಪಸ್ ವಾಟರ್‌ಕೂಲಿಂಗ್ ಮೆಷಿನ್ ಮುಂತಾದ ಸೌಕರ್ಯಗಳನ್ನೆಲ್ಲಾ ಒಳಗೇ ಅಳವಡಿಸಲಾಗಿತ್ತು.

ಮರು ಭೂಮಿಯಲ್ಲಿ ತೂಕದ ವಸ್ತುಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಲು ಸಾಮಾನ್ಯವಾಗಿ ಆ ವೆಹಿಕಲ್ ಉಪಯೋಗಿಸುತ್ತಾರೆ. ಈಗ ನಮ್ಮೆಲ್ಲರ ಅಳಿವು ಉಳಿವು ಅದು ಹೇಗೆ ತನ್ನ ಕೆಲಸ ನಿರ್ವಹಿಸುತ್ತದೆ ಎಂಬುದರ ಮೇಲೆ ಆಧಾರಿತ.

ಇದರ ಬಗ್ಗೆ ಮೊದಲೇ ಗೊತ್ತಾಗಿದ್ದರೆ ಹಂತಕರು ನಮ್ಮನ್ನು ಉಳಿಯಗೊಡುತ್ತಿದ್ದುದು ಸಂಶಯವೇ. ಡ್ರೈವರ್ ಸೀಟ್‌ನಲ್ಲಿ ಕುಳಿತು ಎಂಜಿನ್ ಸ್ಟಾರ್ಟ್ ಮಾಡಿದೆ. ಒಳ್ಳೆಯ ಕಂಡೀಷನ್‌ನಲ್ಲಿದೆಯೆಂದು ಸೌಂಡ್‌ನಿಂದಲೇ ತಿಳಿಯಬಹುದಿತ್ತು.

ಟ್ಯಾಂಕ್ ತುಂಬಾ ಪೆಟ್ರೋಲ್ ತುಂಬಿ ಬ್ಯಾರಕ್ಸ್ ಮುಂದೆ ತಂದು ನಿಲ್ಲಿಸಿದೆ. ಬ್ಯಾನೆಟ್ ತೆರೆದು ಸ್ಟಾರ್ಟರ್ ಪ್ಲಗ್ ಕಿತ್ತು ಜೇಬಿನಲ್ಲಿ ಹಾಕಿಕೊಂಡು ಒಳಕ್ಕೆ ನಡೆದೆ.

ಎಲ್ಲರೂ ಅಲರ್ಟಾಗಿದ್ದರು. ಡಾಕ್ಟರ್ ಹೇಮಂತ್ ದೊಡ್ಡ ಬಾಕ್ಸ್ ತುಂಬಾ ಮೆಡಿಕಲ್ ಇನ್ಸ್‌ಟ್ರುಮೆಂಟ್ಸ್, ಔಷಧಿಗಳು, ಬ್ಯಾಂಡೇಜಸ್ ರೆಡಿ ಮಾಡಿಕೊಂಡ.

ಷೇರ್‌ಖಾನ್ ಚಿಕ್ಕದೊಂದು ಸ್ಟೋವ್, ಟೀಪುಡಿ, ಸಕ್ಕರೆ, ಕಂಡೆನ್ಸ್ಡ್ ಮಿಲ್ಕ್ ತಂದು ಟ್ರಕ್‌ನಲ್ಲಿಟ್ಟ.

ನಾನು ಎಲ್ಲರ ಕಡೆಗೆ ಒಂದು ಸಲ ನೋಡಿ ತೃಪ್ತಿಯೊಡನೆ ತಲೆಯಾಡಿಸಿದೆ.

ಕೊಲೆಗಾರರು ಏನಾದರೂ ಪ್ರಯತ್ನ ಮಾಡಿದರೆ ಈಗ ಮಾಡುತ್ತಾರಷ್ಟೇ. "ನೌ ಫ್ರೆಂಡ್ಸ್! ದಯವಿಟ್ಟು ಎಲ್ಲರೂ ಒಟ್ಟಿಗೆ ಕದಲುವುದಾಗಲಿ ಓಡುವುದಾಗಲಿ ಮಾಡಬೇಡಿ. ಒಬ್ಬರ ಹಿಂದೊಬ್ಬರು ಸಾಲಾಗಿ ಹೋಗಿ ಟ್ರಕ್‌ನಲ್ಲಿ ಕುಳಿತುಕೊಳ್ಳಿ......" ಅಂದೆ ಎಚ್ಚರಿಕೆಯೊಡನೆ ನೋಡುತ್ತಾ.

"ಹೆವಿ ಟ್ರಕ್..... ಮೈಗಾಡ್......ವೇರ್ ದ ಹೆಲ್......" ಅಚ್ಚರಿಯೊಡನೆ ಉದ್ಗರಿಸುತ್ತಿದ್ದ ಸುಶೀಲ್‌ಕುಮಾರ್.

ಹೌದೆನ್ನುವಂತೆ ತಲೆಯಾಡಿಸಿದೆ.

ಒಬ್ಬೊಬ್ಬರೇ ಹೋಗಿ ಟ್ರಕ್ ಹಿಂದೆ ಬಾಡಿಯಲ್ಲಿ ಆಸೀನರಾದರೆಲ್ಲಾ. ಡಾಕ್ಟರ್ ಹೇಮಂತ್ ಸಹ ಹಿಂದೆಯೇ ಕುಳಿತ.

ಷೇರ್‌ಖಾನ್ ಒಂದು ಟಾರ್ಪಲಿನ್‌ನಿಂದ ಮೇಲೆ ಟೆಂಟ್‌ನಂತೆ ಕವರ್ ಮಾಡಿದ.

ಇದೆಲ್ಲಾ ನಡೆಯುತ್ತಿರುವಾಗ ನಾನು ಮಾತ್ರ ಉಸಿರು ಬಿಗಿಹಿಡಿದು

ನೋಡುತ್ತಾ ನಿಂತಿದ್ದೆ. ಯಾವ ಕ್ಷಣದಲ್ಲಿ ಮರ್ಡರರ್ಸ್ ತಮ್ಮ ಕೈಚಳಕ ಪ್ರದರ್ಶಿಸಿಯಾರೆಂದು ಹೇಳಲಾಗದು !

"ಫ್ರೆಂಡ್ಸ್ ! ನೌ ವಿ ಗೋ !" ಅಂದೆ ಕೊನೆಗೊಮ್ಮೆ ಡ್ರೈವಿಂಗ್ ಸೀಟ್‌ನಲ್ಲಿ ಕುಳಿತು ಬಾಗಿಲು ಮುಚ್ಚಿ.

ಯಾರೂ ಕದಲಿದ ಶಬ್ದ ಕೇಳಲಿಲ್ಲ. ಆಗಾಗ ಬೀಸುತ್ತಿರುವ ಗಾಳಿಯ ಶಬ್ದದ ವಿನಹ ಬೇರೆ ಶಬ್ದವಿಲ್ಲ.

ಮೆಲ್ಲಗೆ ಸ್ಟಾರ್ಟರ್ ಪ್ಲಗ್ ಫಿಕ್ಸ್ ಮಾಡಿ, ಎಂಜಿನ್ ಸ್ಟಾರ್ಟ್ ಮಾಡಿದೆ. ಟ್ರಕ್ ಚಲಿಸಿದೊಡನೆ ಷೇರ್‌ಖಾನ್ ಕ್ಯಾಬಿನ್‌ನೊಳಕ್ಕೆ ಹತ್ತಿ ನನ್ನ ಪಕ್ಕದಲ್ಲೇ ಕುಳಿತ.

ಗೇರ್ ಬದಲಾಯಿಸಿ ಟ್ರಕ್ ವೇಗ ಹೆಚ್ಚಿಸಿದೆ.

ಸುಮಾರು ಹನ್ನೆರಡು ಮೈಲಿ ಪ್ರಯಾಣ ಮಾಡಿದೆವು. ಇನ್ನು ನಾಲ್ಕು ಗಂಟೆ ಯಾವ ತೊಂದರೆಯೂ ಎದುರಾಗದೆ ಕಳೆದರೆ ಮರಳ ಪ್ರಪಂಚದಿಂದ ಮಾನವ ಪ್ರಪಂಚಕ್ಕೆ ಸೇರಿಕೊಳ್ಳಬಹುದು.

ಬೆಳಿಗ್ಗೆ ಎಂಟಕ್ಕೇ ಬಿಸಿಲಿನ ತೀಕ್ಷ್ಣತೆ ತಡೆಯಲಾಗದಷ್ಟು. ಆಕಾಶದಲ್ಲಿ ಒಂದೇ ಒಂದು ಮೋಡವಿಲ್ಲದೆ ನಿರ್ಮಲವಾಗಿತ್ತು.

ಡ್ರೈವಿಂಗ್ ಮಾಡಿಕೊಂಡೇ ಆಗಾಗ ಆಕಾಶದ ಕಡೆಗೆ ಕಣ್ಣು ಹಾಯಿ ಸುತ್ತಿದ್ದೆ. ವಾತಾವರಣ ಚೆನ್ನಾಗಿರುವ ಕಾರಣ ಜೋಧ್‌ಪುರ್‌ನಿಂದ ಬರುವ ಸಪ್ಲೈ ವಿಮಾನದ ಆಗಮನವಾಗಬಹುದು.

ಹಿಂದೆ ಯಾರೋ ಕ್ಯಾಬಿನ್ ಮೇಲೆ ಜೋರಾಗಿ ಹೊಡೆಯುತ್ತಾ ಶಬ್ದ ಮಾಡತೊಡಗಿದರು.

ಏನೆನ್ನುವಂತೆ ಷೇರ್‌ಖಾನ್ ಕಡೆಗೆ ನೋಡಿದೆ. ಷೇರ್‌ಖಾನ್ ಕ್ಯಾಬಿನ್ ಗಿದ್ದ ಕಿಂಡಿಯನ್ನು ತೆರೆದು ಬಾಡಿಯೊಳಕ್ಕೆ ನೋಡಿದ. ಕಿಂಡಿ ಓಪನ್ ಆದೊಡನೆ ಘೋರಾ ಧ್ವನಿ ಕೇಳಿಸಿತು.

"ಸ್ಟಾಪ್ ದ ಟ್ರಕ್ ! ಹಿ ಈಸ್ ಗೆಟಿಂಗ್ ಫೈನ್ಸ್ !" ಕೂಗಿಕೊಂಡ ಅವನು.

"ಹಿ ಈಸ್ ವಾಟ್ ?" ಅನ್ನುತ್ತಿದ್ದಂತೆ ವಿಷಯ ಅರ್ಥವಾಗಿತ್ತು ನನಗೆ.

## ಡೆಸರ್ಟ್ ಸ್ವಾರ್ಮ್

ನನ್ನ ದುರದೃಷ್ಟ ! ಮಿ ಸ್ ಲಾಲ್‌ಗೆ ಹೆರಿಗೆ ನೋವು ಶುರುವಾಗಿದೆ. ಈ ಮರುಭೂಮಿಯ ಪ್ರದೇಶದಲ್ಲಿ ಕಣ್ತೆರೆದು ಹೊರ ಪ್ರಪಂಚಕ್ಕೆ ಕಾಲಿಡಲು ಹೊಸ ಜೀವವೊಂದು ಹಾತೊರೆಯುತ್ತಿದೆ !

ಟ್ರಕ್ ಬಾಡಿಯೊಳಕ್ಕೆ ಬಗ್ಗಿ ನೋಡಿದ ಷೇರ್‌ಖಾನ್ ನನ್ನ ಕಡೆಗೆ ತಿರುಗಿ ತಲೆಯಾಡಿಸಿದ.

ಟ್ರಕ್ ನಿಲ್ಲಿಸಿಬಿಟ್ಟೆ.

ಷೇರ್‌ಖಾನ್ ಭುಜದ ಮೇಲಿಂದ ಟ್ರಕ್‌ನೊಳಕ್ಕೆ ನೋಡಿದೆ. ಮಿಸೆಸ್ ಪಪಟ್‌ಲಾಲ್ ನೋವಿಗೆ ವಿಲವಿಲ ಒದ್ದಾಡುತ್ತಿದ್ದಳು. ಡಾಕ್ಟರ್ ಹೇಮಂತ್ ಆಕೆಯ ಪಲ್ಸ್‌ಬೀಟ್ ಪರಿಶೀಲಿಸುತ್ತಾ ಏನೋ ಹೇಳುತ್ತಿದ್ದ. ಮಿಸೆಸ್ ಲಾಲ್ ಮುಖದಿಂದ ಬೆವರು ಧಾರಾಕಾರವಾಗಿ ಹರಿಯುತ್ತಿತ್ತು.

ಟ್ರಕ್ ಇಳಿದು ಹಿಂದಕ್ಕೆ ಹೋದೆವು. ಡಾಕ್ಟರ್ ಹೇಮಂತ್ ಎಲ್ಲರಿಗೂ ಕೆಳಕ್ಕಿಳಿಯುವಂತೆ ಹೇಳುತ್ತಿದ್ದವ, ನಮ್ಮನ್ನು ನೋಡಿದಾಗ ನರ್ವಸ್ ಆಗಿ ನಕ್ಕ.

ಎಲ್ಲರೂ ಸರಸರನೆ ಟ್ರಕ್‌ನಿಂದ ಕೆಳಕ್ಕೆ ನೆಗೆದರು.

ತನ್ನ ಮರದ ಪೆಟ್ಟಿಗೆಯಿಂದ ಎರಡು ಬೆಡ್‌ಷೀಟ್ಸ್ ತೆಗೆದು ಟ್ರಕ್ ನೆಲದ ಮೇಲೆ ಹಾಸಿ ಮಿಸೆಸ್ ಲಾಲ್‌ಳನ್ನು ಅದರ ಮೇಲೆ ಮಲಗಿಸಿದ ಡಾಕ್ಟರ್ ಹೇಮಂತ್.

ಅವಳನ್ನು ಚೆಕಪ್ ಮಾಡಿ ಷೇರ್‌ಖಾನ್ ಕಡೆಗೆ ತಿರುಗಿ, "ಆಪರೇಷನ್ ಮಾಡುವ ಅವಶ್ಯಕತೆಯಿದೆ ಎನಿಸುತ್ತದೆ. ಸ್ಟವ್ ಹತ್ತಿಸಿ ನೀರು ಬಿಸಿ ಮಾಡು....." ಅಂದ.

ತಕ್ಷಣ ಸ್ಟವ್ ಹತ್ತಿಸಿದ ಷೇರ್‌ಖಾನ್ ಟೀ ಮಾಡಲು ತಂದಿದ್ದ ದೊಡ್ಡ ಪಾತ್ರೆಯಲ್ಲಿ, ಪ್ಲಾಸ್ಟಿಕ್ ಕ್ಯಾನ್ಸ್‌ನಿಂದ ನೀರು ತುಂಬಿ ಕಾಯಿಸತೊಡಗಿದ.

ಸಣ್ಣ ಮಗುವಿನಂತೆ ಭೀತಿಯಿಂದ ಗಡಗಡ ನಡುಗುತ್ತಿದ್ದ ಪಪಟ್ ಲಾಲ್. ಡಾಕ್ಟರ್ ಹೇಮಂತ್ ಕಾಮಿನಿ ಸರ್ಕಾರ್ ಕಡೆಗೆ ತಿರುಗಿ ಹತ್ತಿರ ಬರುವಂತೆ ಸನ್ನೆ ಮಾಡಿದ.

"ಪ್ಲೀಸ್ ಹೆಲ್ಪ್ ಮಿ ಮಿಸ್ !" ಅಂದ ಆಪರೇಷನ್‌ಗೆ ಬಾಧಿ

ಅನುಕೂಲವಾಗಿರುವಂತೆ ಬೆಡ್‌ಷೀಟ್ಸ್‌ಗೆ ಹೇಗೆ ಎತ್ತರವಾಗಿಡುವುದೆಂದು ಹೇಳಿಕೊಡುತ್ತಾ.

ಎ ಡಾಕ್ಟರ್ ಈಸ್ ಅಲ್ವೇಸ್ ಎ ಡಾಕ್ಟರ್ ಅನ್ನಿಸಿತು ಆ ಕ್ಷಣ ನನಗೆ.

ಆಕಸ್ಮಾತಾಗಿ ಜೋರಾಗಿ ಗಾಳಿ ಬೀಸಿದರೆ ಮರಳು ಬೀಳದಂತೆ ಮೇಲಿನ ಟಾರ್ಪಾಲಿನ್ ಬಿರುಕುಗಳನ್ನು ಕ್ಲೋಸ್ ಮಾಡುವ ಹೊಣೆ ನನ್ನ ಹೆಗಲೇರಿತು.

ಕಾಲುಗಂಟೆ ಎಲ್ಲರೂ ಟ್ರಕ್ ಬಾಡಿಯನ್ನು ಟೆಂಪೊರರಿ ಆಪರೇಷನ್ ಥಿಯೇಟರ್ ಆಗಿಸಲು ಶ್ರಮಿಸಿದೆವು. ಬೋಸ್, ಚಾಂದ್ ಸಿಂಗ್ ಸ್ಪೇರ್ ಬ್ಲಾಂಕೆಟ್ಸ್ ಸುತ್ತಲೂ ಕರ್ಟೆನ್‌ಗಳಂತೆ ಕಟ್ಟಲು ನನಗೆ ಸಹಾಯ ಮಾಡಿದರು.

ಮಿಸ್ ಕಾಮಿನಿ ನೀರಿನಲ್ಲಿ ಟವಲ್ ನೆನೆಸಿ ಮಿಸೆಸ್ ಲಾಲ್ ಮೈಯೆಲ್ಲ ಒರೆಸುತ್ತಿದ್ದಳು.

ಡಾಕ್ಟರ್ ಹೇಮಂತ್ ಸಿಸರ್ಸ್, ಫೋರ್ಸೆಪ್ಸ್, ನೈವ್ಸ್ ಸ್ಟೆರಿಲೈಸ್ ಮಾಡುವುದರಲ್ಲಿ ತೊಡಗಿದ್ದ.

ಪಪಟ್‌ಲಾಲ್ ಕೆಳಗಿಳಿದು ಟ್ರಕ್ ಹೊರಗೆ ನಿಂತು ಮುಖದಿಂದ ಬಸಿಯುತ್ತಿದ್ದ ಬೆವರೊರೆಸಿಕೊಳ್ಳುವುದರಲ್ಲಿ ಮಗ್ನನಾಗಿದ್ದ.

ಟೈಂ ನೋಡಿಕೊಂಡೆ. ಎಂಟೂವರೆಗೆ ಸಮೀಪ.

ಟ್ರಕ್‌ನೊಳಗಿರುವವರ ವಿನಹ ಉಳಿದವರು ಮೂರು ಗುಂಪಾಗಿ ಕುಳಿತು ಏನೋ ಮಾತಾಡಿಕೊಳ್ಳುತ್ತಿದ್ದರು

ನಾನು ಟ್ರಕ್ ಬಾಡಿಯ ನೆರಳಲ್ಲಿ ಮರಳಿನ ಮೇಲೆ ಕುಳಿತೆ ಮಿಸೆಸ್ ಲಾಲ್ ನರಳಿಕೆ ಕೇಳಿಸುತ್ತಿರಲಿಲ್ಲ. ಬಹುಶಃ ಅನಸ್ತೇಷಿಯಾ ಕೊಟ್ಟಿರಬೇಕು. ಸಿ.ಎಸ್.ರಾವ್ ನನ್ನ ಬಳಿಗೆ ಬಂದು ಪಕ್ಕದಲ್ಲೇ ಕುಳಿತ.

"ಮಿಸ್ಟರ್ ಶಿವಾ ! ಆಪರೇಷನ್ ಸೆಕ್ಸಸ್ ಆದರೂ ನಾವು ತಕ್ಷಣ ಇಲ್ಲಿಂದ ಹೊರಡಲು ಸಾಧ್ಯವಾಗದು ಅಂದುಕೊಳ್ಳುತ್ತೇನೆ" ಅಂದ ನರ್ವಸ್ ಆಗಿ ನನ್ನ ಕಡೆಗೆ ನೋಡುತ್ತಾ.

ಇಟ್ ವಾಸ್ ಎ ಫ್ಯಾಕ್ಟ್ ! ಅಲ್ಲಿಯವರಗೆ ನನ್ನ ತಲೆಗೇ ತಟ್ಟಿರಲಿಲ್ಲ ಅದು.

ಅದಾಗ ಮೇಜರ್ ಆಪರೇಷನ್ ಮಾಡಿದ ವ್ಯಕ್ತಿಯನ್ನು ಆ ಟ್ರಕ್‌ನಲ್ಲಿ ಕರೆದುಕೊಂಡು ಹೋಗುವುದು ಅಪಾಯ. ಟ್ರಕ್ ಮೂವ್‌ಮೆಂಟ್‌ಗೆ ಹಾಕಿರುವ ಸ್ಟಿಚಸ್ ಎಲ್ಲಾ ಬಿಚ್ಚಿಕೊಳ್ಳುವ ಸಾಧ್ಯತೆ ಹೆಚ್ಚು. ಸೋ......... ಅವನ ಮಾತಿಗೆ ಒಪ್ಪಿದವನಂತೆ ತಲೆಯಾಡಿಸಿದೆ.

"ಹಾಗಾದರೆ ಮುಂದೇನು ಮಾಡಬೇಕೆಂದು ನಿಮ್ಮ ಯೋಚನೆ ?" ನನ್ನ ಮುಖವನ್ನೇ ನೋಡುತ್ತಾ ಕೇಳಿದ.

ಭುಜ ಎಗರಿಸಿದೆ, "ಕೆಲವರನ್ನು ಹಿಂದಕ್ಕೆ ಕಳಿಸಿ ಬಿಡೋಣವೆಂದು ಕೊಂಡಿದ್ದೇನೆ... ನಾವು ಮುಂದೆ ಹೋಗಿ ಸಹಾಯ ತರುವವರೆಗೆ" ಅಂದೆ.

ಆಗಲೇ ಯಾವುದೋ ಶಬ್ದ ಕೇಳಿಸಿತು. ಗಿರಗಿರನೆ ತಿರುಗುತ್ತಿರುವ ಬ್ಲೇಡ್ಸ್ ಗಾಳಿಯನ್ನು ಸ್ಲೈಸ್ ಮಾಡುತ್ತಿರುವ ಸಪ್ಪಳ. ಹೆಲಿಕಾಪ್ಟರ್ ಬರುವಾಗಿನ ಸೌಂಡ್ ಅದು.

ತಟಕ್ಕನೆದ್ದು ನಿಂತು ಶಬ್ದ ಬರುತ್ತಿರುವ ಕಡೆಗೆ ನೋಟ ಹರಿಸಿದೆ.

ಪಶ್ಚಿಮದ ಕಡೆಯಿಂದ ಒಂದು ಹೆಲಿಕಾಪ್ಟರ್ ಗಜೇಂದ್ರ ಮೋಕ್ಷಕ್ಕೆ ಧಾವಿಸಿದ ವಿಷ್ಣುವಿನಂತೆಯೇ ನಮ್ಮ ಕಡೆಗೆ ಬರುತ್ತಿತ್ತು !

ಕೊನೆಯ ಕ್ಷಣದಲ್ಲಿ ದೇವರಿಗೆ ನಮ್ಮ ಪ್ರಾರ್ಥನೆ ಕೇಳಿಸಿದಂತಿತು. ವಿಮಾನ ಸ್ಫೋಟಕ್ಕೆ ಮೊದಲು ನಾವು ಪ್ರಸಾರ ಮಾಡಿದ ಮೆಸ್ಸೇಜ್ ಅಧಿಕಾರಿಗಳಿಗೆ ಸಿಕ್ಕಿದಂತಿತ್ತು.

ಕುಣಿದು ಕುಪ್ಪಳಿಸಿ ಮರಳಲ್ಲಿ ಉರುಳಾಡುವಾಸೆಯುಂಟಾಗಿತ್ತು ನನಗೆ!

# 11

ಎಲ್ಲರೂ ಒಂದೇ ಹು೦ನಲ್ಲಿದ್ದು ಕೆಳಗಿಳಿಯುತ್ತಿದ್ದ ಹೆಲಿಕಾಪ್ಟರ್ ಕಡೆಗೆ ಓಡಿದೆವು.

ಎಫ್. ಎಚ್. 1100 ಯುಟಿಲಿಟಿ ಹೆಲಿಕಾಪ್ಟರ್ ಅದು. ಕೆಳಕ್ಕಿಳಿಯುತ್ತಿದ್ದ ಹೆಲಿಕಾಪ್ಟರ್ ಮೇಲೆ 'ಪಿ.ಎ' ಎಂಬ ಲೋಗೋ ನೋಡಿ ಓಡುತ್ತಿದ್ದವನು ಟಕ್ಕನೆ ನಿಂತು ಬಿಟ್ಟೆ.

'ಪಿ ಎ' ಅಂದರೆ 'ಪಾಕಿಸ್ತಾನ್ ಆರ್ಮಿ' ಎಂದರ್ಥ.

ಗುಂಡಿಗೆ ಝಲ್ಲೆಂದಿತು.

ನನ್ನ ಕಣ್ಣುಗಳನ್ನು ನಾನೇ ನಂಬಲಾಗದೆ ಅತ್ತ ಕಡೆಯೇ ನೋಡುತ್ತಿದ್ದು ಬಿಟ್ಟೆ.

ಎಲ್ಲರೂ ಟ್ರಕ್‌ನಿಂದ ಸ್ವಲ್ಪ ದೂರದಲ್ಲಿ ಭೂಮಿಯಿಂದ ಹತ್ತಡಿಗಳಷ್ಟು ಎತ್ತರದಲ್ಲಿ ಅತ್ತ ಇತ್ತ ತೂಗಾಡುತ್ತಾ ಕೆಳಗಿಳಿಯುತ್ತಿರುವ ಹೆಲಿಕಾಪ್ಟರ್ ನೋಡಿ ಸಂತೋಷದಿಂದ ವಿಷಲ್ಸ್ ಹಾಕುತ್ತಿದ್ದರು. ಹೆಲಿಕಾಪ್ಟರ್ ಬ್ಲೇಡ್ಸ್ ಪ್ರೊಪಲ್ಸ್ಸ್ ಕಾರಣದಿಂದ ಮರಳು ಸುಂಟರ ಗಾಳಿಯಂತೆ ಮೇಲೇಳುತ್ತಿತ್ತು.

ಢಮ್......! ಪಿಸ್ತೂಲೊಂದರ ಘನಘೋರ ಗರ್ಜನೆ !!

ಹೆಲಿಕಾಪ್ಟರ್ ಕೆಳಕ್ಕಿಳಿದೊಡನೆ ಕೇಳಿ ಬಂದ ಶಬ್ದದಿಂದಾಗಿ ತಮ್ಮ ಆನಂದೋದ್ರೇಕದ ಕೂಗುಗಳನ್ನು ನಿಲ್ಲಿಸಿದ ಎಲ್ಲರೂ ಗಕ್ಕನೆ ಹಿಂದೆ ತಿರುಗಿದರು.

ಚಾಂದ್‌ಸಿಂಗ್ ಕೈನಲ್ಲಿದ್ದ ಪಿಸ್ತೂಲು ಎಲ್ಲರನ್ನೂ ಕೆಕ್ಕರಿಸಿ ನೋಡತೊಡಗಿತ್ತು. ಅವನ ಪಕ್ಕದಲ್ಲೇ ಚಾಲ್ಸ್‌ಫೆರೀರಾ ಹುಸಿ ನಗೆಯೊಡನೆ ನಿಂತಿದ್ದ. ಈಗ ಅವರಿಬ್ಬರ ಕುತ್ತಿಗೆಯಿಂದ ಕಪ್ಪು ಮಫ್ಲರ್ಸ್ ಇಳಿ ಬಿದ್ದಿದ್ದವು.

ಎಲ್ಲರೂ ಸಮ್ಮೋಹಿನಿಗೊಳಗಾದವರಂತೆ ಅವರಿಬ್ಬರನ್ನೇ ನೋಡು

X94.814 308 72
ANA N97

ತ್ತಿದ್ದು ಬಿಟ್ಟರು. ಅವರಿಗೂ ನಮಗೂ ನಡುವೆ ಕನಿಷ್ಠ ಐದಾರು ಗಜಗಳಾದರೂ ಅಂತರವಿತ್ತು.

ಸೋ......ಇವರೇ ಕೊಲೆಗಾರರು...ಬ್ಲಡಿ ಕೋಲ್ಡ್ ಬ್ಲಡೆಡ್ ಮರ್ಡರರ್ಸ್ ! ಆದರೆ ಅವರ ಈ ಕುಕೃತ್ಯಕ್ಕೇನು ಕಾರಣ ?

"ಡೋಂಟ್ ಮೂವ್ ಡಿಯರ್ ಫ್ರೆಂಡ್ಸ್ ! ಯಾರಾದರೂ ತರಲೆ ಮಾಡಲು ಪ್ರಯತ್ನಿಸಿದರೆ ಕೊಲ್ಲಲು ಸಾವು ರೆಡಿ ಎಂದು ಈಗಾಗಲೇ ನಿರೂಪಿಸಿದ್ದೇವೆ......" ಚಾಂದ್‌ಸಿಂಗ್ ಧ್ವನಿಯಲ್ಲಿನ ಕ್ರೂರತೆಗೆ ಮೈ ಜಲದರಿಸಿತು.

ಹಿಂದೆ ಹೆಲಿಕಾಪ್ಟರ್ ಬಾಗಿಲು ತೆರೆದುಕೊಂಡ ಶಬ್ದ ಕೇಳಿಸಿತು.

"ಕವರ್ ದೆಮ್ !" ಅಂದ ಫೆರೀರಾ ಯಾರಿಗೋ.

ಗನ್ನೊಂದರ ಸೇಫ್ಟಿಕ್ಯಾಚ್ ರಿಲೀಸ್ ಆದ ಶಬ್ದ ಕೇಳಿಸಿತು.

ಮೆಲ್ಲಗೆ ತಲೆ ತಿರುಗಿಸಿ ಹಿಂದೆ ನೋಡಿದೆ. ಮಿಲಿಟರಿ ಯೂನಿಫಾರ್ಮ್‌ನಲ್ಲಿದ್ದ ಇಬ್ಬರು ವ್ಯಕ್ತಿಗಳು ಸಬ್‌ಮೆಷಿನ್‌ಗನ್ಸ್ ಗುರಿಹಿಡಿದು ನಿಂತಿದ್ದರು.

ತಲೆಯ ಮೇಲೆ ಕ್ಯಾಪ್ಸ್. ಭುಜಗಳ ಮೇಲೆ ಯಾವುದೇ ರೀತಿಯ ಐಡೆಂಟಿಫಿಕೇಷನ್ ಚಿಹ್ನೆಗಳಿಲ್ಲದಿದ್ದರೂ ಅವರು ಪಾಕ್ ಆರ್ಮಿಗೆ ಸೇರಿದವರೆಂದು ಹೇಳಲು ಆ ಯೂನಿಫಾರ್ಮ್ಸ್ ಸಾಕು.

ತಲೆ ತಿರುಗಿಸಿ ಮತ್ತೆ ಚಾಂದ್‌ಸಿಂಗ್ ಕಡೆಗೆ ನೋಡಿದೆ. ಈ ದಿಢೀರ್ ಡೆವಲಪ್‌ಮೆಂಟ್‌ನಿಂದಾಗಿ ತಲೆ ಕೆಲಸ ಮಾಡುವುದನ್ನೇ ನಿಲ್ಲಿಸಿಬಿಟ್ಟಿತ್ತು.

"ಅವನ ಕೈನಲ್ಲಿರುವುದು ಸರ್ವೀಸ್ ಪಿಸ್ತೂಲು. ಬಹುಶಃ ಪೈಲಟ್ ಆಗಿರಬೇಕು......" ಅಂದ ಸಿ.ಎಸ್.ರಾವ್ ತುಟಿಯಂಚಿನಿಂದ.

ಚಾಂದ್‌ಸಿಂಗ್ ನಮ್ಮೆಲ್ಲರ ಕಡೆಗೆ ನಗುತ್ತಾ ನೋಡಿದ. ಆದರೆ ಕಣ್ಣುಗಳು ಮಾತ್ರ ಬ್ಲಾಕ್ ಸ್ಟೋನ್‌ನಂತೆ ಭಾವನಾರಹಿತವಾಗಿದ್ದವು.

"ದಯವಿಟ್ಟು, ಎಲ್ಲರೂ ಸಾಲಾಗಿ ನಿಂತುಕೊಳ್ಳಿ ...." ಮಿಲಿಟರಿ ಆಫೀಸರ್ ಧ್ವನಿಯಂತಿತ್ತು ಅವನ ಧ್ವನಿ.

"ವಾಟೀಸ್ ದಿಸ್ ನಾನ್ಸೆನ್ಸ್ ಮಿಸ್ಟರ್ ಸಿಂಗ್ ?" ಆಕ್ಷೇಪಣೆ ಪ್ರಕಟಿಸಿದ ಮೆಹ್ರಾ.

"ಷಟಪ್ ಅಂಡ್ ಡೂ ವಾಟ್ ಐ ಸೇ !" ಗರ್ಜಿಸಿದ ಚಾಂದ್‌ಸಿಂಗ್.

ಎಲ್ಲರೂ ಅವನ ಪಿಸ್ತೂಲ ಕಡೆಗೇ ಭಯದೊಡನೆ ನೋಡುತ್ತಾ ಸಾಲಾಗಿ ಒಬ್ಬರ ಪಕ್ಕದಲ್ಲೊಬ್ಬರು ನಿಂತರು. ಚಾಂದ್‌ಸಿಂಗ್ ಎಲ್ಲರನ್ನು ಒಂದು ಸಲ ನೋಡಿ ತಲೆದೂಗಿದ.

ನನಗಂತೂ ಎಲ್ಲಾ ಗೊಂದಲವಾಯಿತು.

"ವೆರಿಗುಡ್ ! ಈಗ ಮುಖ್ಯ ವಿಷಯಕ್ಕೆ ಬರೋಣ. ಆಪರೇಷನ್ ಎಕ್ಸ್‌ಫಾರ್ಮುಲಾ ಪೇಪರ್ಸ್ ನಿಮ್ಮಲ್ಲಿ ಯಾರ ಬಳಿಯಿವೆ ?" ಅಂದ ಎಲ್ಲರನ್ನು ತೀಕ್ಷ್ಣವಾಗಿ ನೋಡುತ್ತಾ.

ಎಲ್ಲರೂ ಕಣ್ಣರಳಿಸಿ ಅವರನ್ನೇ ನೋಡತೊಡಗಿದರು

ದಟೀಸಿಟ್ ! ಆಪರೇಷನ್ ಎಕ್ಸ್ ಫಾರ್ಮುಲಾ ಪೇಪರ್ಸ್‌ಗಾಗಿ ವಿಮಾನವನ್ನು ಹೈಜಾಕ್ ಮಾಡಿದ್ದಾರೆ ಇವರು. ಅಂದರೆ ಇಲ್ಲಿರುವ ಒಂಬತ್ತು ಜನರಲ್ಲೊಬ್ಬರ ಬಳಿ ಆ ಫಾರ್ಮುಲಾ ಇದೆಯೆಂದಾಯಿತು

ಯಾರವರು ? ಎಕ್ಸ್ ಫಾರ್ಮುಲಾ ಎಂದರೇನು ?

ಚಾಂದ್‌ಸಿಂಗ್ ಕಡೆಗೆ ನೋಡುತ್ತಿದ್ದ ನಾನು ಒಂದು ಕ್ಷಣ ನಿಂತ ಜಾಗದಲ್ಲೇ ಫ್ರೀಝಾಗಿಬಿಟ್ಟೆ.

ಟ್ರಕ್‌ನೊಳಗೆ ಡಾಕ್ಟರ್ ಹೇಮಂತ್, ಕಾಮಿನಿಯರ ಜೊತೆಗೆ ಷೇರ್ ಖಾನ್ ಸಹ ಇದ್ದ. ಟ್ರಕ್ ಹಾಗೂ ನಮ್ಮ ನಡುವೆ ಚಾಂದ್‌ಸಿಂಗ್, ಫೆರೀರಾ ನಿಂತಿದ್ದರು.

ಟ್ರಕ್‌ಗೆ ಕಟ್ಟಿರುವ ಟಾರ್ಪಾಲಿನ್ ಮಧ್ಯದಿಂದ ಚಾಂದ್‌ಸಿಂಗ್ ಮೇಲಕ್ಕೆ ನೆಗೆಯುವುದರಲ್ಲಿದ್ದ ಷೇರ್‌ಖಾನ್‌ನನ್ನು ನೋಡಿದೊಡನೆ ನನ್ನ ಗಂಟಲ ಪಸೆ ಆರಿಹೋಯಿತು ಹಾರ್ಟ್‌ಬೀಟ್ ಸಹ ಕ್ಷಣ ಸ್ಥಗಿತಗೊಂಡಿತು.

ಫೆರೀರಾ ನನ್ನ ನೋಟ ಗಮನಿಸಿರಬೇಕು.... ತಲೆ ತಿರುಗಿಸಿ ನೋಡಿ ಏಕ್‌ದಂ ಕಿರುಚಿಕೊಂಡ.

"ವಾಚ್‌ಔಟ್ ದೇಸಾಯರ್ !"

ಮಿಂಚಿನ ವೇಗದೊಡನೆ ಹಿಂದಕ್ಕೆ ತಿರುಗಿದ ಚಾಂದ್‌ಸಿಂಗ್ ಪಿಸ್ತೂಲ ಟ್ರಿಗರ್ ಪ್ರೆಸ್ ಮಾಡಿದ.

ಟ್ರಕ್‌ನೊಳಗಿಂದ ಅವನ ಮೇಲೆ ನೆಗೆಯುವುದರಲ್ಲಿದ್ದ ಷೇರ್‌ಖಾನ್

ಸಣ್ಣಗೆ ಚೀರಿ ಧೊಪ್ಪನೆ ಮರಳ ಮೇಲೆ ಬಿದ್ದುಬಿಟ್ಟ. ಅವನ ತೊಡೆಯ ಮೇಲೆ ಬುಲೆಟ್ ಗಾಯದಿಂದಾಗಿ ರಕ್ತ ಛಿಲ್ಲನೆ ಚಿಮ್ಮಿತು.

"ಟೇಕ್ ಕೇರ್ ಆಫ್ ಹಿಮ್ ಜೈಸ್ವಾಲ್ !" ಅಂದ ಕ್ರೂರ ನಗೆಯೊಡನೆ ನಮ್ಮ ಕಡೆಗೆ ತಿರುಗಿ.

ಇವರ ಹೆಸರುಗಳು ಚಾಂದ್‌ಸಿಂಗ್, ಫೆರೀರಾ ಅಲ್ಲ......ಚಾಂದ್‌ಸಿಂಗ್ ಹೆಸರು ದೇಸಾಯ್ ಎಂದು, ಫೆರೀರಾ ಹೆಸರು ಜೈಸ್ವಾಲ್ ಎಂದು ಅವರೇ ಕರೆದ ಕಾರಣದಿಂದಾಗಿ ಸ್ಪಷ್ಟವಾಗಿತ್ತು.

ಜೈಸ್ವಾಲ್ ಷೇರ್‌ಖಾನ್‌ನನ್ನು ದರದರ ಎಳೆತಂದು ನಮ್ಮ ಮುಂದೆಸೆದ. ಮಿಸ್ ಕಾಮಿನಿ ಸರ್ಕಾರ್‌ಳನ್ನು ಸಾಲಿನಲ್ಲಿ ನಿಲ್ಲಿಸಿವ ಅದೇಕೋ! ಡಾಕ್ಟರ್ ಹೇಮಂತ್‌ನನ್ನು ಮಾತ್ರ ಕರೆತರಲಿಲ್ಲ.

"ನೌ......ಟೆಲ್ ಮಿ ! ಫಾರ್ಮುಲಾ ಯಾರ ಬಳಿ ಇದೆ ? ಆ ಫಾರ್ಮುಲಾ ನಮಗೆ ಕೊಟ್ಟು ಬಿಟ್ಟರೆ ನಮ್ಮ ದಾರಿ ಹಿಡಿದು ನಾವು ಹೋಗುತ್ತೇವೆ. ನಿಮ್ಮ ಪಾಡಿಗೆ ನಿಮ್ಮನ್ನು ಬಿಡುತ್ತೇವೆ. ನಿಮಗೆ ಸದ್ಯಕ್ಕಂತೂ ಯಾರಿಂದಲೂ ಸಹಾಯ ಬರುವ ಸಾಧ್ಯತೆಯಿಲ್ಲ. ಹೇಳದಿದ್ದರೆ ಸಾಲಾಗಿ ಒಬ್ಬೊಬ್ಬರನ್ನೇ ಕೊಂದುಬಿಡುತ್ತೇನೆ" ಅಂದ ದೇಸಾಯ್ ಕರ್ಕಶಧ್ವನಿಯಲ್ಲಿ.

ಅವನ ಧ್ವನಿಯ ಕಠಿಣತೆ ಎಂತಹ ಧೈರ್ಯವಂತನ ಎದೆಯಲ್ಲಿ ನಡುಕ ಹುಟ್ಟಿಸುತ್ತಿತ್ತು.

ಯಾರೂ ಮಾತಾಡಲಿಲ್ಲ ಎಲ್ಲರೂ ಕಣ್ಣು ಹಿಗ್ಗಲಿಸಿ ರಾಕ್ಷಸರ ಪ್ರತಿರೂಪದಂತೆ ನಿಂತಿರುವ ಆ ಕಿರಾತಕರನ್ನೇ ನೋಡುತ್ತಿದ್ದರು.

"ಆಲ್‌ರೈಟ್ ! ಒಂದು ನಿಮಿಷ ಅವಧಿ ಕೊಡುತ್ತೇನೆ ಅಷ್ಟರಲ್ಲಿ ಆ ಫಾರ್ಮುಲಾ ಹೊರಬರದಿದ್ದರೆ ಬಲಪಾರ್ಶ್ವದಿಂದ ಮೊದಲ ವ್ಯಕ್ತಿಯ ಕಾಲಿನಲ್ಲಿ ಗುಂಡು ಲಾಡ್ಜ್ ಆಗುತ್ತದೆ......ಆಮೇಲೆ ಎರಡನೆಯವನು. ನಂತರ......" ಭೀಷಣ ಧ್ವನಿಯಲ್ಲಂದ ದೇಸಾಯ್.

ಎಲ್ಲರೂ ಅಯಾಚಿತವಾಗಿ ಬಲಗಡೆಗೆ ನೋಡಿದೆವು. ಲೈನ್ ಕೊನೆಯಲ್ಲಿ ಅಬ್ದುಲ್‌ಗಫಾರ್ ನಿಂತಿದ್ದ. ಗಡಗಡ ನಡುಗುತ್ತಿದ್ದ ಅವನ ಮುಖದ ತುಂಬಾ ಬೆವರು

ರಿಸ್ಟ್‌ವಾಚ್ ಕಡೆಗೆ ತೀಕ್ಷ್ಣವಾಗಿ ನೋಡುತ್ತಾ ನಿಂತ ದೇಸಾಯ್. ಎಲ್ಲರೂ ಉಸಿರು ಬಿಗಿಹಿಡಿದು ಅವರನ್ನೇ ನೋಡತೊಡಗಿದೆವು. ಎತ್ತಲೂ ಓಡಿ ಹೋಗುವ ಅವಕಾಶವಿಲ್ಲ !

ಹಠಾತ್ತನೆ ದೇಸಾಯ್ ಕೈನಲ್ಲಿದ್ದ ಪಿಸ್ತೂಲನಳಿಗೆ ಗಫೂರ್ ಕಡೆಗೆ ತಿರುಗಿತು.

"ಒನ್ ಮಿನಿಟ್ ಈಸ್ ಓವರ್ !"

ಯಾರೂ ಮಾತಾಡಲಿಲ್ಲ. ಮರು ಕ್ಷಣ 'ಢನ್' ಎಂದು ಗರ್ಜಿಸಿತು ಪಿಸ್ತೂಲು.

ಗಫೂರ್ ಭಯಂಕರ ಆಕ್ರಂದನದೊಡನೆ ನೆಲಕ್ಕೆ ಕುಸಿದ.

ಎದೆಯಲ್ಲಿ ಸಂಕಟ, ಅಸಹಾಯಕತೆ, ಕೋಪ ನೀರಿನ ಸುಳಿಯೋಪಾದಿಯಲ್ಲಿ ಸುತ್ತುತ್ತಿದ್ದವು.

"ಹಾರ್ಟ್‌ಲೆಸ್ ಬಾಸ್ಟರ್ಡ್......ಸ್ಟಾಪ್ ದಿಸ್ ... ಫಾರ್ ಗಾಡ್ಸ್‌ಸೇಕ್ ಸ್ಟಾಪ್ ದಿಸ್.... !" ಹುಚ್ಚನಂತೆ ಅರಚಿಕೊಂಡೆ

ಕ್ರೂರವಾಗಿ ನಕ್ಕ ದೇಸಾಯ್. "ಕಮಾನ್ ಶಿವಾ ! ಆ ಪೇಪರ್ಸ್ ಕೊಟ್ಟು ಬಿಡುವಂತೆ ಅಡ್ವೈಸ್ ಮಾಡು. ಆಗ ಎಲ್ಲರಿಗೂ ಈ ಬಾಧೆ ತಪ್ಪುತ್ತದೆ. ಇಲ್ಲದಿದ್ದರೆ ಎಲ್ಲರನ್ನು ಸಾಲಾಗಿ ಚಿತ್ರವಧೆ ಮಾಡುತ್ತೇನೆ"

"ಆಲ್‌ರೈಟ್ ! ಏನು ಆ ಫಾರ್ಮುಲಾ ಸ್ಪೆಷಾಲಿಟಿ ?" ಕೇಳಿದೆ.

ಗುಂಡೇಟು ತಗುಲಿದ್ದ ಷೇರ್‌ಖಾನ್ ನರಳುತ್ತಿದ್ದ. ಅಬ್ದುಲ್‌ಗಫೂರ್ ಷಾಕ್‌ನಿಂದಾಗಿ ಮೂರ್ಛೆ ಹೋದಂತಿದ್ದ.

"ಆಪರೇಷನ್ ಎಕ್ಸ್ ಫಾರ್ಮುಲಾ......ಒಂದು ಸಬ್‌ಸ್ಟಿಟ್ಯೂಟ್ ಫಾರ್ಮುಲಾ. ಪೆಟ್ರೋಲ್‌ಗೆ ಬದಲು ಫ್ಯೂಯಲ್ಲಾಗಿ ಉಪಯೋಗಿಸಲು ಬಹಳ ಚೀಪಾಗಿ ತಯಾರಿಸಬಹುದಾದ ಕೆಮಿಕಲ್ ಫಾರ್ಮುಲಾ. ಈ ವಿಮಾನದ ಪ್ರಯಾಣಿಕರಲ್ಲೊಬ್ಬರ ಬಳಿ ಆ ಫಾರ್ಮುಲಾ ಪೇಪರ್ಸ್ ಇವೆಯೆಂದು ನಮಗೆ ತಿಳಿದುಬಂತು. ಆ ಕೆಮಿಕಲ್ ಅನ್ನು ಒಬ್ಬ ಭಾರತೀಯ ವಿಜ್ಞಾನಿ ಕಂಡು ಹಿಡಿದಿದ್ದಾನೆ. ಆ ಫಾರ್ಮುಲಾ ಬಾಂಬೆ ಸಮೀಪದ ಟೆಕ್ನಿಕಲ್ ಲ್ಯಾಬ್‌ಗೆ ಕಳಿಸುತ್ತಿರುವುದಾಗಿ ಸುದ್ದಿ ಬಂತು. ಪ್ರಯಾಣಿಕರ

ಲ್ಲೊಬ್ಬರು ಆ ಫಾರ್ಮುಲಾ ತೆಗೆದುಕೊಂಡು ಹೋಗುತ್ತಿದ್ದಾರೆ. ಬೇಗ ಆ ಪೇಪರ್ಸ್ ನಮಗೆ ನೀಡಿದರೆ ಇಬ್ಬರಿಗೂ ಶ್ರಮ ಕಡಿಮೆಯಾಗುತ್ತದೆ" ವಿವರಿಸಿದ ದೇಸಾಯಿ.

ಮೈಗಾಡ್ ! ಪೆಟ್ರೋಲ್‌ಗೆ ಸಬ್‌ಸ್ಟಿಟ್ಯೂಟಾಗಿ ಇಂಧನವಾಗಿ ಉಪಯೋಗಕ್ಕೆ ಬರುವ ಕೆಮಿಕಲ್ ! ಈ ಸೈಂಟಿಫಿಕ್ ಡಿಸ್ಕವರಿ ಹೊರ ಪ್ರಪಂಚಕ್ಕೆ ತಿಳಿದರೆ ಮಾತ್ರ ಆರ್ಥಿಕ ವ್ಯವಸ್ಥೆಯಲ್ಲಿ ಭಾರೀ ಬದಲಾವಣೆಗಳಾಗುವುದು ಖಂಡಿತಾ.

"ಈ ಮರುಭೂಮಿಯಲ್ಲೇ ವಿಮಾನವನ್ನಿಳಿಸಲು ಕಾರಣವೇನು ?" ಸಿ ಎಸ್. ರಾವ್ ಧ್ವನಿಯಲ್ಲಿ ಜಿಲ್ಲಾಧಿಕಾರಿಗಿರಬೇಕಾದ ದರ್ಪದ ಸುಳಿವಿರಲಿಲ್ಲ ಈಗ.

"ಜಸ್ಟ್ ಅವರ್ ಬ್ಯಾಡ್ ಲಕ್ ! ವಿಮಾನವನ್ನು ಹೈಜಾಕ್ ಮಾಡಿ ಬಾರ್ಡರ್ ಕ್ರಾಸ್ ಮಾಡಿ ಪಾಕೀಸ್ಥಾನದಲ್ಲಿಳಿಸಿ ನಮ್ಮ ಕೆಲಸ ಮುಗಿಸಿಕೊಳ್ಳಬೇಕೆಂದಿತ್ತು ನಮ್ಮ ಯೋಜನೆ. ಆದರೆ ಹೈಜಾಕ್ ಮಾಡಿದ ಮೇಲೆ ಮಧ್ಯದಲ್ಲಿ ಈ ಡೆಸರ್ಟ್ ಸ್ವಾರ್ಮ್ ನಮಗಡ್ಡ ಬಂತು. ಮರಳು ಎಂಜಿನ್‌ನಲ್ಲಿ ತೂರಿ ಎಂಜಿನ್ ಹಾಳಾಯಿತು. ಬಾರ್ಡರ್ ದಾಟಿ ಆಚೆ ಹೋಗುವ ಅವಕಾಶವಿಲ್ಲ. ಆದ್ದರಿಂದಲೇ ವಿಧಿಯಿಲ್ಲದೆ ಈ ಡೆಸರ್ಟ್‌ನಲ್ಲಿ ಲ್ಯಾಂಡ್ ಮಾಡಲೇಬೇಕಾಯಿತು !" ಅಂದ ದೇಸಾಯಿ.

"ಯು ಮೀನ್..... ನೀನೇ ಆ ಕೆಲಸ ಮಾಡಿದೆಯಾ ?"

"ಎಸ್......ನಾನೇ ಲ್ಯಾಂಡ್ ಮಾಡಿದೆ ಪೈಲಟ್ಸ್‌ಗೆ ಬೆದರಿಸಲು ನಮ್ಮ ಬಳಿ ಆಯುಧಗಳಿರಲಿಲ್ಲ. ಆದ್ದರಿಂದಲೇ ಅವರನ್ನು ಮೂರ್ಛೆಗೊಳಿಸಿ ವಿಮಾನವನ್ನು ಕಂಟ್ರೋಲ್‌ಗೆ ತೆಗೆದುಕೊಂಡೆವು. ಆದರೆ ಭಾರತದ ಗಡಿಯೊಳಗೇ ಲ್ಯಾಂಡ್ ಆದ ಮೇಲೆ ಅವರು ಬದುಕಿರುವುದು ನಮಗೆ ಅಪಾಯ. ಮೂರ್ಛೆಗೊಳಿಸುವ ಮೊದಲು ಅವರು ನಮ್ಮನ್ನು ನೋಡಿದ್ದರು. ಹಾಗೆಯೇ ಏರ್ ಹೋಸ್ಟೆಸ್ ಸಹ ಎಲ್ಲರಿಗಿಂತಾ ಮೊದಲೇ ಎಚ್ಚರಗೊಂಡು ನಮ್ಮ ಮುಖ ನೋಡಿ ತನ್ನ ಪ್ರಾಣಕ್ಕೆ ಸಂಚಕಾರ ತಂದುಕೊಂಡಳು."

ಎಲ್ಲರೂ ಕಿವಿನಿಮಿರಿಸಿ ಅವನ ಮಾತುಗಳನ್ನು ಕೇಳುತ್ತಿದ್ದರು.

"ದೋಸ್ತ್ ! ಈಗಾಗಲೇ ತಡವಾಗಿದೆ !" ಕೂಗಿಕೊಂಡ ಹೆಲಿಕಾಪ್ಟರ್ ಪೈಲಟ್.

"ಗೈಟೊ ! ಇನ್ನು ಆ ಫಾರ್ಮುಲಾ ಕೊಟ್ಟರೆ ನಮ್ಮ ಪಾಡಿಗೆ ನಾವು ಹೊರಟುಬಿಡುತ್ತೇವೆ. ಇಲ್ಲದಿದ್ದರೆ ಈ ಸಲ ಬುಲೆಟ್ ಯಾರದಾದರೂ ಎದೆಯಲ್ಲಿ ತಳ ಊರುತ್ತದೆ !" ಅಂದ ಪಿಸ್ತೂಲನ್ನು ಮೇಲೆತ್ತಿ ಗುರಿ ಹಿಡಿಯುತ್ತಾ.

ದೇಸಾಯಿ ಅಂದಂತೆ ಮಾಡುವವನೇ ಎಂಬುದರಲ್ಲಿ ಸಂಶಯವೇ ಇರಲಿಲ್ಲ.

"ನಿಮಗೆ ಅರ್ಥವಾಗುತ್ತಿಲ್ಲವೇ ? ಸಹ ಮಾನವನ ಪ್ರಾಣಕ್ಕಿಂತಾ ಆ ಫಾರ್ಮುಲಾ ದೊಡ್ಡದೇ ? ದಯವಿಟ್ಟು ಅದನ್ನು ಅವರಿಗೆ ಕೊಟ್ಟುಬಿಡಿ......" ಉಳಿದ ಪ್ರಯಾಣಿಕರ ಕಡೆಗೆ ಕೈ ಜೋಡಿಸಿ ಕೇಳಿಕೊಂಡೆ.

ಯಾರೂ ಉಸಿರೆತ್ತಲಿಲ್ಲ.

"ಡಾಮ್ ಇವರ್ ಇಂಟೆಲಿಜೆನ್ಸ್ ! ಸೀಕ್ರೆಟ್ ಲೀಕ್ ಆಗದಂತೆ ನೋಡಿಕೊಳ್ಳಬೇಕು. ಈ ಸ್ಟೇಜ್ ರೀಚ್ ಆದ ಮೇಲೆ ನಿಮಗಾಗಿ ಎಲ್ಲರ ಪ್ರಾಣಕ್ಕೆ ಸಂಚಕಾರ ತರುವುದು ಅವಿವೇಕದ ಪರಮಾವಧಿ. ಯಾರ ಬಳಿ ಇದೆಯೋ..... ಅವರು ದಯವಿಟ್ಟು ಕೊಟ್ಟುಬಿಡಿ......" ವಿನಂತಿಸಿದ ಚಂಚಲ್ ಬೋಸ್.

ಒಬ್ಬೊಬ್ಬರನ್ನೇ ಸರ್ಚ್ ಮಾಡಿ ಏಕೆ ಪಡೆಯಲು ಪ್ರಯತ್ನಿಸುತ್ತಿಲ್ಲ ಎಂಬುದರ್ಥವಾಗಲಿಲ್ಲ ನನಗೆ. ಬಹುಶಃ ಸಾಮಾನ್ಯ ಕಣ್ಣಿಗೆ ಗೋಚರಿಸದ ರೂಪದಲ್ಲಿರಬೇಕು ಆ ಫಾರ್ಮುಲಾ.

ಆ ಫಾರ್ಮುಲಾ ರಕ್ಷಿಸುತ್ತಿರುವ ವ್ಯಕ್ತಿಯ ಮಾನಸಿಕ ತುಮುಲದ ಸಂಘರ್ಷವನ್ನು ಅರ್ಥ ಮಾಡಿಕೊಳ್ಳಬಲ್ಲೆ ನಾನು. ಕರ್ತವ್ಯಕ್ಕೂ, ಮಾನ ವತ್ವಕ್ಕೂ ನಡುವೆ ಭಾರೀ ಹೋರಾಟವೇ ನಡೆದಿರುತ್ತದೆ ಅವನ ಮನದಲ್ಲಿ.

ಮಿಸ್ ಕಾಮಿನಿಸರ್ಕಾರ್ ಕಡೆಗೆ ಪಿಸ್ತೂಲು ಗುರಿಯಿಟ್ಟು ಟ್ರಿಗರ್ ಮೇಲೆ ತೋರುಬೆರಳು ಬಿಗಿಸಿದ ದೇಸಾಯಿ.

"ಆಲ್ ರೈಟ್ ! ಡೋಂಟ್ ಷೂಟ್ !" ಅಂದರ್‍ಯಾರೋ.

ಎಲ್ಲರೂ ಅತ್ತ ನೋಡಿದರು.

ಗೋಪಾಲ್ ಸಂಧು ಒಂದೆಜ್ಜೆ ಮುಂದಿಟ್ಟು ನಿಂತ.

ಅಂದಿನವರೆಗೆ ಗೂಢಚಾರನೊಬ್ಬನನ್ನು ಕಣ್ಣಾರೆ ನೋಡಿರಲಿಲ್ಲ ನಾನು. ಇಷ್ಟು ಸಾಧಾರಣ ವ್ಯಕ್ತಿತ್ವದವನೇ ಅನ್ನಿಸದಿರಲಿಲ್ಲ. ಎನಿಹೌ...... ಆ ಕ್ಷಣ ರಿಲೀಫ್ ಆದದ್ದಂತೂ ನಿಜ.

ದೇಸಾಯ್ ಪಿಸ್ತೂಲಿನಲ್ಲಿ ಗೋಪಾಲ್ ಕಡೆಗೆ ತಿರುಗಿಸಿದ "ಗುಡ್! ಕೊಡು ಅದನ್ನ......" ಅಂದ.

ಜೇಬಿನಿಂದ ನಿಧಾನವಾಗಿ ಮನಿಪರ್ಸ್ ತೆಗೆದ ಗೋಪಾಲ್ ಸಂಧು. ಅದರಿಂದ ಹತ್ತು ರೂಪಾಯಿಗಳ ನೋಟಿನ ಕಟ್ಟೊಂದನ್ನು ದೇಸಾಯ್ ಮುಂದೆ ಹೋಗಿಬೀಳುವಂತೆಸೆದ. ಹದಿನೈದೋ, ಇಪ್ಪತ್ತೋ ನೋಟುಗಳಿದ್ದವು ಆ ಕಟ್ಟಲ್ಲಿ.

"ವಾಟೀಸ್ ದಿಸ್?" ಕೇಳಿದ ದೇಸಾಯ್ ನೋಟುಗಳ ಕಡೆಗೆ ತೀಕ್ಷ್ಣವಾಗಿ ನೋಡುತ್ತಾ.

"ನೋಟುಗಳ ನಡುವೆ ಬಿಳಿಯ ಪೋರ್ಷನ್ ಮೇಲೆ ಇನ್‌ವಿಜಬಲ್ ಇಂಕ್‌ನಿಂದ ಫಾರ್ಮುಲಾ ಬರೆಯಲ್ಪಟ್ಟಿದೆ. ಲೈಟರ್‌ನಿಂದ ಬಿಸಿ ಮಾಡು. ಅಕ್ಷರಗಳು ಕಾಣಿಸುತ್ತವೆ" ಅಂದ ಸಂಧು ಭಾವರ ಹಿತಧ್ವನಿಯಲ್ಲಿ.

ಜೈಸ್ವಾಲ್‌ಗೆ ಸನ್ನೆ ಮಾಡಿದ ದೇಸಾಯ್. ಲೈಟರ್ ಜ್ವಾಲೆ ಉರಿಸಿ ಒಂದು ನೋಟನ್ನು ಬಿಸಿ ಮಾಡಿದ ಜೈಸ್ವಾಲ್. ನೋಟಿನ ಬಿಳಿಯಭಾಗದ ಮೇಲೆ ಸಣ್ಣ ಸಣ್ಣ ಸಂಖ್ಯೆಗಳು, ಗುರುತುಗಳು ಕಾಣಿಸತೊಡಗಿದವು.

ಆಗ ನಗುಮುಖ ತೋರಿದ ದೇಸಾಯ್. "ಥ್ಯಾಂಕ್ಸ್ ಫ್ರೆಂಡ್!" ಅಂದು ಒಂದೊಂದೇ ಹೆಜ್ಜೆ ಹಿಂದಿಡತೊಡಗಿದ ಹೆಲಿಕಾಪ್ಟರ್ ಕಡೆಗೆ.

ಹೋಗುವ ಮೊದಲು ಯಾರಿಂದಾದರೂ ತೊಂದರೆಯಾದೀತೇನೋ ಎಂದು ಆ ಪ್ರಿಕಾಷನ್. ಎಲ್ಲರೂ ಟ್ರಕ್ ಪಕ್ಕದಲ್ಲೇ ಒಬ್ಬರಿಗೊಬ್ಬರು ಅಂಟಿಕೊಂಡು ನಿಂತಿದ್ದೆವು.

ಟ್ರಕ್ ಒಳಗೆ ಡಾಕ್ಟರ್ ಹೇಮಂತ್ ಒಬ್ಬನೇ ಆಪರೇಷನ್ ಮಾಡು

ತ್ತಿದ್ದಾನೆಂದು ಗೊತ್ತು. ಮಿಸೆಸ್ ಲಾಲ್ ಲೇಬರ್ ಬ್ರೀತಿಂಗ್ ಮಾಡುತ್ತಿರುವುದು ಹೊರಗಡೆಗೆ ಕೇಳಿಸುತ್ತಿತ್ತು.

ಮನಸ್ಸಿನಲ್ಲೇ ಡಾಕ್ಟರ್ ಹೇಮಂತ್‌ಗೆ ಹ್ಯಾಟ್ಸಾಫ್ ಮಾಡಿದೆ. ಒಂದು ಕಡೆ ಪ್ರಾಣ ಹೋಗುತ್ತಿದ್ದರೆ ಇನ್ನೊಂದು ಕಡೆ ಹೊಸ ಜೀವವೊಂದನ್ನು ಪ್ರಪಂಚಕ್ಕೆ ತರಲು ತನ್ನೆಲ್ಲಾ ಎಫರ್ಟ್ಸ್ ಹಾಕಿ ಅದರಲ್ಲೇ ಮಗ್ನವಾಗಿ ಬಿಟ್ಟಿದ್ದ ಅವನು ! ಅವನ ಏಕಾಗ್ರತೆಗೆ ಭಂಗ ತರಲು ಆ ದುಷ್ಟರೂ ಪ್ರಯತ್ನಿಸಿರಲಿಲ್ಲ.

# 12

ಜೈಸ್ವಾಲ್, ದೇಸಾಯಿ ಇಬ್ಬರೂ ಹೆಲಿಕಾಪ್ಟರ್ ಹತ್ತಿ ಕುಳಿತರು.

ದೇಸಾಯಿ ಹೊರಕ್ಕೆ ಬಗ್ಗಿ ಯೂನಿಫಾರ್ಮ್ ವ್ಯಕ್ತಿಗಳಿಗೆ ಏನೋ ಸೂಚನೆ ನೀಡಿದ. ಅವರು ತಲೆದೂಗಿ ಸಬ್‌ಮೆಷಿನ್ ಗನ್ಸ್ ನಮ್ಮ ಕಡೆಗೆ ತಿರುಗಿಸಿದರು.

ವೈನಗಾಡ್......ತನ್ನ ಕೆಲಸ ಮುಗಿದೊಡನೆ ಎಲ್ಲರನ್ನೂ ನಿರ್ದಾಕ್ಷಿಣ್ಯವಾಗಿ ಮುಗಿಸುವ ಯೋಜನೆ ಆ ರಾಕ್ಷಸನದು! ಸಾಕ್ಷಿಗಳನ್ನು ಉಳಿಸಿ ಹೋಗುವ ಇರಾದೆಯಿಲ್ಲ ಅವನಿಗೆ! ಅದನ್ನು ಮೊದಲೇ ಯೋಚಿಸಬೇಕಾಗಿತ್ತು ನಾನು!

"ವಾಚ್‌ಔಟ್..... ಅವರು ಫೈರ್ ಮಾಡಲಿದ್ದಾರೆ!" ಅಂದೆ ಟ್ರಕ್ ಹಿಂದಕ್ಕೆ ವೇಗವಾಗಿ ಜಂಪ್ ಮಾಡುತ್ತಾ.

ಗಚ್‌ಚ್‌ಚ್......ಎಂದು ಬೆಂಕಿಯ ಮಳೆಗರೆಯತೊಡಗಿತು ಸಬ್‌ಮೆಷಿನ್ ಗನ್. ಗುಂಪಾಗಿದ್ದ ಎಲ್ಲರೂ ಹಾಹಾಕಾರಗಳೊಡನೆ ಸ್ಕ್ಯಾಟರ್ ಆದರು. ಯಾರೋ ಜೋರಾಗಿ ಚೀರಿದ ಶಬ್ದ.

ಕಾಮಿನಿ ಸರ್ಕಾರ್, ಚಕ್ರವರ್ತಿ ಟ್ರಕ್ ಹಿಂದಕ್ಕೆ ಓಡೋಡಿ ಬಂದರು. ಚಂಚಲ್‌ಬೋಸ್, ಗೋಪಾಲ್ ಸಂಧು ಟ್ರಕ್ ತಳದಿಂದಲೇ ಉರುಳಿಕೊಂಡು ಬಂದರು.

ಮತ್ತೆ ಗನ್ ಮೊರೆತ......ಜೊತೆಗೇಲ್ಲೋ ದೂರದಿಂದ ಇನ್ನೊಂದು ಶಬ್ದ ಸಿಡಿಲಿನಂತಹ ಘನಘೋರ ಶಬ್ದ.

ಹೆಲಿಕಾಪ್ಟರ್ ಮೂವ್ ಆಗುತ್ತಿದೆಯೋನೋ ಅಂದುಕೊಂಡೆ. ಅಲ್ಲ...... ಕೆಳ ಮಟ್ಟದಲ್ಲಿ ಹಾರುತ್ತಾ ಬರುತ್ತಿರುವ ಎರಡು ಜೆಟ್ ಫೈಟರ್ಸ್ ಹೊರ

ಹೊಮ್ಮಿಸುವ ಶಬ್ದ ಅದು. ಅವುಗಳ ಬಾಡಿಯಲ್ಲಿ ಇಂಡಿಯನ್ ಏರ್‌ಫೋರ್ಸ್ ಲೋಗೋ !

ಜೋಧ್‌ಪುರ್ ಸ್ಟೇಷನ್ ವೇವ್‌ಲೆಂಗ್ತ್ ಮೇಲೆ ನಾವು ರಾತ್ರಿ ಪ್ರಸಾರ ಮಾಡಿದ ಮೆಸ್ಸೇಜ್ ಯಾರೋ ಶ್ರೋತೃ ಕೇಳಿ ಮಾರನೆ ದಿನ ಬೆಳಗ್ಗೆ ಅಧಿಕಾರಿಗಳಿಗೆ ಇನ್‌ಫಾರ್ಮ್ ಮಾಡಿದ ವಿಷಯ ಆಮೇಲೆ ನಮಗೆ ತಿಳಿದು ಬಂದಿತ್ತು.

ಹೆಲಿಕಾಪ್ಟರ್ ಆತುರಾತುರವಾಗಿ ಮೇಲೆದ್ದು ಪಶ್ಚಿಮ ದಿಕ್ಕಿನತ್ತ ವೇಗವಾಗಿ ಪ್ರಯಾಣಿಸತೊಡಗಿತು.

ದೂರದಲ್ಲಿ ಆಕಾಶದಲ್ಲಿ ಒಮ್ಮಿಂದೊಮ್ಮೆಲೇ ಭೀಕರ ಶಬ್ದ.

ಎಲ್ಲರೂ ತಲೆ ಮೇಲೆತ್ತಿದೆವು.

ಎಫ್. ಎಚ್. 1100 ಹೆಲಿಕಾಪ್ಟರ್ ಬೆಂಕಿ ಯುಂಡೆಯಾಗಿ ಧಗಧಗ ಉರಿಯುತ್ತಾ ಮರುಭೂಮಿಯ ನೆಲದತ್ತ ಧಾವಿಸಿ ಬಂತು. ಸುಮಾರು ಮೈಲಿಯಾಚೆ ಕ್ರಾಷ್ ಆಗಿ ಭೀಕರವಾಗಿ ಸ್ಫೋಟಿಸಿದದ ಶಬ್ದವೂ ಕಿವಿಗೆ ಬಿತ್ತು.

ಆಕಾಶದತ್ತ ಚಿಮ್ಮಿತ್ತು ಕಪ್ಪು ಹೊಗೆ.

ಟ್ರಕ್‌ನೊಳಗಿಂದ ಹಸುಳೆಯ ಆಕ್ರಂದನದ ಶಬ್ದ ಅದೇ ಕ್ಷಣವೇ ಕೇಳಿ ಬಂದಿತ್ತು !

ಮಂದಹಾಸ ತನ್ನಂತಾನೇ ಪ್ರತ್ಯೇಕವಾಗಿತ್ತು ನನ್ನ ತುಟಿಗಳ ಮೇಲೆ ಪ್ರಪಂಚಕ್ಕೊಂದು ಹೊಸ ಜೀವ... ಡಾಕ್ಟರ್ ಹೇಮಂತ್‌ಗೆ ಇನ್ನೊಂದು ವಿಕ್ಟರಿ !

ಎದ್ದು ಉತ್ಸಾಹದೊಡನೆ ಟ್ರಕ್ ಕಡೆಗೆ ಧಾವಿಸಿದೆ.

ಉಳಿದೆಲ್ಲರೂ ಒಂದೆಜ್ಜೆಯಷ್ಟೇ ಹಿಂದಿದ್ದರು ! ●

# ಡೆಡ್ ಬಾಡಿ

“ವಾಟ್‌ನೆಕ್ಸಲೆಂಟ್ ಸೈಟ್ !”

ತಲೆ ತಿರುಗಿಸಿ ಷೇರ್‌ಸಿಂಗ್ ಕಡೆಗೆ ನೋಡಿದೆ

ಬೈನಾಕ್ಯುಲರ್ಸ್ ಮೂಲಕ ಕೆಳಗಿನ ಕಣಿವೆಯತ್ತ ದೂರದಲ್ಲಿರುವ ಆಕಾಶವನ್ನು ತಮ್ಮ ಹಿಂದೆ ಅಡಗಿಸಿಬಿಡುತ್ತಿರುವ ಪರ್ವತಗಳತ್ತ ನೋಡುತ್ತಾ ಮೈ ಮರೆತು ಬಿಟ್ಟಿದ್ದ ಅವನು.

ಸೆಪ್ಟೆಂಬರ್ ತಿಂಗಳು. ಅಸ್ಸಾಂನಲ್ಲಿರುವ ಮಿಷಮಿ ಬೆಟ್ಟಗುಡ್ಡಗಳ ಪ್ರದೇಶ. ದಟ್ಟ ಕಾಡು ತುಂಬಿರುವ ಪರ್ವತ ಶ್ರೇಣಿ. ಮಳೆಗಾಲದಲ್ಲಿ ವಿಪರೀತ ಮಳೆ. ಚಳಿಗಾಲದಲ್ಲಿ ವಿಪರೀತ ಚಳಿ. ನಾಗರೀಕತೆಗೂ, ಮಿಷಮಿ ಪ್ರಾಂತ್ಯಕ್ಕೂ ಕೆಲ ಶತಮಾನಗಳಷ್ಟು ದೂರ ತುಸು ನಾಗರೀಕತೆಯ ವಾಸನೆ ಕಾಣಿಸಬಹುದಾದ ಪಟ್ಟಣ ಇಲ್ಲಿಂದ ನೂರು ಮೈಲಿಗಳಷ್ಟು ದೂರದಲ್ಲಿರುವ ಚಾಂಗ್‌ಲೆ.

“ಡ್ರೈವರ್ ! ಜೀಪ್ ನಿಲ್ಲಿಸು......” ಅಂದ ಷೇರ್‌ಸಿಂಗ್.

ಗುಡ್ಡಗಾಡಿನ ರಸ್ತೆಯಲ್ಲಿ ನಲವತ್ತು ಕಿಲೋಮೀಟರ್ ಸ್ಪೀಡ್‌ನಲ್ಲಿ ಹೋಗುತ್ತಿದ್ದ ಜೀಪ್‌ಗೆ ಬ್ರೇಕ್ ಹಾಕಿದ ಡ್ರೈವರ್.

ಜೀಪಿಳಿದ ಷೇರ್‌ಸಿಂಗ್ ರಸ್ತೆಯ ಅಂಚಿಗೆ ತೆರಳಿ ಬೈನಾಕ್ಯುಲರ್ಸ್ ಕೆಳಗಿನ ಕಣಿವೆಗೆ ಫೋಕಸ್ ಮಾಡಿ ತದೇಕವಾಗಿ ನೋಡತೊಡಗಿದ. ನಗು ಬರುತ್ತಿತ್ತು ನನಗೆ ಅವನನ್ನು ಆ ಭಂಗಿಯಲ್ಲಿ ನೋಡುತ್ತಿದ್ದಂತೆ ತುಸು ಮುಂದಕ್ಕೆ ಬಗ್ಗಿ, ಪರಿಸರವನ್ನೇ ಮರೆತವನಂತೆ, ತುಟಿಗಳ ಮೇಲೆ ವಿಚಿತ್ರ ನಗೆಯೊಡನೆ ....

ಅಸ್ಸಾಮ್‌ನ ಸೂರ್ಯ ಕಿರಣಗಳ ಬೆಳಕಲ್ಲಿ ಕೋರೈಸುತ್ತಿತ್ತು ಅವನ

ಆಫೀಸರ್ ಯೂನಿಫಾರಂ ಬಿಳಿಯ ವ್ಹೈಬಣ್ಣ. ನೀಟಾಗಿ ಷೇವ್ ಮಾಡಿ ಟ್ರಿಂ ಮಾಡಿರುವ ಮೀಸೆ, ಚೂಪು ಮೂಗು, ಉತ್ಸಾಹತೆಯೊಡನೆ ನೋಡು ತ್ತಿರುವ ಕಣ್ಣುಗಳು, ಅಗಲ ಭುಜಗಳು, ಷೋಲ್ಡರ್ ಲೂಪ್ ಮೇಲೆ ಕ್ಯಾಪ್ಟನ್ ರ್ಯಾಂಕ್ ಪ್ರದರ್ಶಿಸುವ ಮೂರು ನಕ್ಷತ್ರಗಳು, ಎಡಕ್ಕೆ ಜೇಬಿನ ಮೇಲೆ ಐದು ಬಣ್ಣದ ವಾರ್ ಕಲರ್ಸ್. ಎತ್ತರಕ್ಕೆ ತಕ್ಕ ವ್ಯಕ್ತಿತ್ವದವನು ಷೇರ್‌ಸಿಂಗ್.

ಕ್ಯಾಪ್ಟನ್ ಷೇರ್‌ಸಿಂಗ್ ನಮ್ಮ ಫಾರ್ವರ್ಡ್ ಚೆಕ್‌ಪೋಸ್ಟ್ ತನಿಖೆ ಮಾಡಲು ಆರ್ಮಿ ಹೆಡ್‌ಕ್ವಾರ್ಟರ್ಸ್, ಷಿಲ್ಲಾಂಗ್‌ನಿಂದ ಈ ದಿನವಷ್ಟೇ ಬಂದಿದ್ದ.

ಕೆಳಕ್ಕಿಳಿದು ಅವನ ಪಕ್ಕದಲ್ಲೇ ನಿಂತು ಕೆಳಗಡೆಗೆ ನೋಡಿದೆ. ಅಗರ್ಥ ವಾಯಿತು ಷೇರ್‌ಸಿಂಗ್‌ನ ಆತುರಕ್ಕೇನು ಕಾರಣ ಎಂದು.

ಕೆಳ ಕಣಿವೆಯಲ್ಲಿ ಪ್ರಶಾಂತವಾಗಿ ಹರಿಯುತ್ತಿರುವ ಸಿಕಾಂಗ್ ನದೀ ತೀರದಲ್ಲಿ ಅಟವಿಕ ಹೆಣ್ಣೊಬ್ಬಳು ನಗ್ನವಾಗಿ ಸ್ನಾನ ಮಾಡುತ್ತಿದ್ದಳು. ಪ್ರಕೃತಿಯ ನಡುವೆ ಯಾವುದೇ ಅಡ್ಡಿ ಆತಂಕಗಳಿಲ್ಲದೆ ಬೆಳೆದ ಸುಪುಷ್ಟ ಶರೀರ ಸೊಂಟದವರೆಗೆ ನೀರಲ್ಲಿ ಮುಳುಗಿ, ಮೇಲ್ಭಾಗಕ್ಕೆ ಯಾವುದೇ ಕವರ್ ಇಲ್ಲದೆ......ಕ್ಯಾಪ್ಟನ್ ಷೇರ್‌ಸಿಂಗ್ ನೋಟಕದಲಿಸದೆ ನೋಡುತ್ತಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ನನ್ನ ಕಡೆ ನೋಡಿದ ಷೇರ್‌ಸಿಂಗ್. "ವೆರಿ ಸೆನ್ಸುಯಲ್......ಎ ವೈಲ್ಡ್ ಬ್ಯೂಟಿ !" ಅಂದ ಉತ್ಸಾಹದೊಡನೆ ನಗುತ್ತಾ.

ನಾನು ನಕ್ಕು ತಲೆಯಾಡಿಸಿದೆ. "ಎಸ್ ಸರ್ ! ಯು ಆಲ್‌ರೈಟ್ !" ಅಂದೆ.

ಜೀಪು ಮತ್ತೆ ಪ್ರಯಾಣಿಸತೊಡಗಿ ಬೆಟ್ಟ ಹತ್ತಲು ಶುರುವಾಯಿತು.

ಸಿಗರೇಟ್ ಹತ್ತಿಸಿದ ಕ್ಯಾಪ್ಟನ್ ಹೊಗೆ ಹೊರ ಚೆಲ್ಲುತ್ತಾ ನನ್ನ ಕಡೆಗೆ ಪರಿಶೀಲನೆಯ ನೋಟ ಬೀರಿದ.

"ಲೆಫ್ಟಿನೆಂಟ್ ಕೀರ್ತಿ ! ಆ ಹೆಣ್ಣು ಯಾರಾಗಿರಬಹುದು ?" ಕೇಳಿದ ಸಾಲೋಚನೆಯೊಡನೆ.

"ಈ ಮಿಷಿಮಿ ಬೆಟ್ಟಗಳಲ್ಲಿ ಗಿರಿಜನರ ಹಲವಾರು ಜಾತಿಗಳಿವೆ ಸರ್ !

ನಮ್ಮ ನಾಗರೀಕ ಪ್ರಪಂಚಕ್ಕೂ ಅವರಿಗೂ ಗಾವುದ ದೂರ, ದೂರದಲಿ ಬೆಟ್ಟಗಳ ಮೇಲೆ ಗುಹೆಗಳೊಳಗೋ, ಮರಗಳ ಕೆಳಗೋ ಅವರ ವಾಸ. ಆ ಹೆಣ್ಣು ಅಂತಹವರಲ್ಲೊಬ್ಬಳಿರಬೇಕು" ಅಂದೆ.

"ಪ್ಚ್... ವಾಟ್ ಎ ಷೇಮ್ ! ಟ್ವೆಂಟಿ ಫಸ್ಟ್ ಸೆಂಚುರಿ ದ್ವಶ್ರಥ ದಲ್ಲಿರುವಾಗ ಹೀಗೆ ಬದುಕುತ್ತಿರುವವರೂ ಇದ್ದಾರೆಂದರೆ ಆಶ್ಚರ್ಯದ ಜೊತೆಗೆ ಮರುಕವೂ ಉಂಟಾಗುತ್ತದೆ" ಅಂದ ಕ್ಯಾಪ್ಟನ್.

"ವೆಲ್ ಸರ್......ನನಗಂತೂ ಇದು ಪ್ರಕೃತಿಯಲ್ಲಿನ ಹಲವಾರು ಮುಖಗಳಲ್ಲಿನ ಒಂದು ಭಾಗವೇನೋ ಎಂದೆನಿಸುತ್ತದೆ. ನಾವು ಉಸಿರಾಡು ತ್ತಿರುವ ಈ ಅಟಾಮಿಕ್ ಏಜ್‌ನಲ್ಲಿ, ಯಾವ ಕ್ಷಣ ಮೂರನೇ ಮಹಾ ಯುದ್ಧ ಶುರುವಾಗುವುದೋ, ತನ್ಮೂಲಕ ಇಡೀ ಮಾನವ ಸಮೂಹ ಸರ್ವ ನಾಶವಾಗುವುದೋ ಹೇಳಲಾಗದು ಹಾಗೂ ಆದಾಗ___ಕೊನೆಗುಳಿಯುವುದು ಈ ಪರ್ವತ ಶ್ರೇಣಿಗಳಲ್ಲಿ ನಾಗರೀಕತೆಯಿಂದ ದೂರವಾಗಿ ಬದುಕುವ ಈ ಗಿರಿಜನರೇ ಏನೋ ಅನಿಸುತ್ತದೆ !" ಅಂದೆ ಗಂಭೀರವಾಗಿ.

"ಮೇ ಬಿ ಯು ಆರ್ ರೈಟ್ ! ಇನ್ನೂ ನಮ್ಮ ಚೆಕ್‌ಪೋಸ್ಟ್ ಎಷ್ಟು ದೂರದಲ್ಲಿದೆ ?" ಕೇಳಿದ ಷೇರ್‌ಸಿಂಗ್ ನನ್ನ ಲೆಕ್ಚರಿಂಗ್‌ನಿಂದ ಬೇಸರ ಗೊಂಡವನಂತೆ ಮುಖವಿಟ್ಟು.

ನಾನು ರಸ್ತೆಯ ಕಡೆ ಒಂದು ಸಲ ನೋಡಿ, "ಸುಮಾರು ಮುವ್ವತ್ತು ಮೈಲಿ ಹೋಗಬೇಕು ಸರ್. ಇನ್ನು ಒಂದೂವರೆ ಗಂಟೆಯ ಪ್ರಯಾಣ" ಅಂದೆ.

"ಇನ್ನು ಒಂದೂವರೆ ಗಂಟೆಯೇ ? ರಸ್ತೆ ಚೆನ್ನಾಗಿಲ್ಲವೇನು ? ಬಿ.ಆರ್.ಒ. ದಿಂದ ಬಂದ ರಿಪೋರ್ಟ್ ಮೊನ್ನೆಯೇ ನೋಡಿದೆ. ಫಾರ್ವರ್ಡ್ ಪೋಸ್ಟ್‌ಗಳಿಗೆ ಪ್ರಯಾಣಿಸುವ ರೋಡ್‌ಗಳೆಲ್ಲಾ ಪರ್ಫೆಕ್ಟ್ ಕಂಡೀಷನ್‌ನಲ್ಲಿವೆ ಎಂದು ಬರೆದಿದ್ದಾರೆ ಅವರು......"

"ಎಸ್ ಸರ್ ! ಆದರೆ ಕ್ರಮೇಣ ರಸ್ತೆ ಎತ್ತರದತ್ತ ಸಾಗತೊಡಗು ತ್ತದೆ, ನಮ್ಮ ಚೆಕ್‌ಪೋಸ್ಟ್ ಭೂಮಟ್ಟದಿಂದ ಸುಮಾರು ಒಂಬತ್ತು ಸಾವಿರ ಅಡಿಗಳ ಎತ್ತರದಲ್ಲಿದೆ ! ಸಮುದ್ರ ಮಟ್ಟಕ್ಕೆ ಹನ್ನೆರಡು ಸಾವಿರದಡಿ ಎತ್ತರದಲ್ಲಿದೆ. ರೋಡ್ ಪರ್ಫೆಕ್ಟಾಗಿದ್ದರೂ ಬೆಟ್ಟದ ಅಂಚಿಗೆ ನಿರ್ಮಿಸಿರುವ

ಕಾರಣದಿಂದಾಗಿ ಹೆಚ್ಚು ವೇಗದೊಡನೆ ಪ್ರಯಾಣ ಮಾಡುವುದು ಅಪಾಯ ಕಾರಿ. ಪ್ರತಿ ಕಿಲೋಮೀಟರ್‌ಗೊಂದರಂತೆ ಹೇರ್‌ಪಿನ್ ತಿರುವುಗಳು ಬೇರೆ ಇವೆ. ಆದ್ದರಿಂದಲೇ ಹೆಚ್ಚು ವೇಗದೊಡನೆ ಹೋಗಲಾರೆವು" ಅಂದೆ ನಾನು ಪರಿಸರದ ಬಗ್ಗೆ ತಿಳಿವು ನೀಡುತ್ತಾ.

"ಐ ಸೀ !" ಅಂದ ಕ್ಯಾಪ್ಟನ್ ಷೇರ್‌ಸಿಂಗ್ ಯಾವುದೋ ಯೋಚನೆ ಯಲ್ಲಿ ಮುಳುಗಿ.

ಆಮೇಲೆ ಚೆಕ್‌ಪೋಸ್ಟ್ ತಲುಪುವವರೆಗೆ ಯಾರೂ ಏನೂ ಮಾತಾಡಲಿಲ್ಲ.

ನಾರ್ತ್ ಈಸ್ಟ್ ಫ್ರಾಂಟಿಯರ್ ಏಜೆನ್ಸಿ (ನೇಫಾ)ದಲ್ಲಿ ಇಂಡಿಯಾ, ಚೈನಾ ಬಾರ್ಡರ್‌ಗೆ ಇಪ್ಪತ್ತೈದು ಮೈಲಿ ದೂರದಲ್ಲಿತ್ತು ನಮ್ಮ ಚೆಕ್ ಪೋಸ್ಟ್. ಷಿಲ್ಲಾಂಗ್‌ನಲ್ಲಿರುವ ನಮ್ಮ ಹೆಡ್‌ಕ್ವಾರ್ಟರ್ಸ್‌ನಿಂದ ಸುಮಾರು ಇನ್ನೂರೈವತ್ತು ಮೈಲಿ ದೂರ. ಸೆಕ್ಟರ್ ಹೆಡ್‌ಕ್ವಾರ್ಟರ್ಸ್ ಚಾಂಗಲೆ ನಿಂದ ನೂರು ಮೈಲಿ.

ಬಾರ್ಡರ್ ರೋಡ್ಸ್ ಆರ್ಗನೈಸೇಷನ್‌ನವರು ನಮ್ಮ ಚೆಕ್‌ಪೋಸ್ಟ್ ವರೆಗೆ ಮಾತ್ರ ಈ ಬೆಟ್ಟಗಳಲ್ಲಿ ಮೋಟರ್ ವೆಹಿಕಲ್ಸ್ ನಡೆಸುವಷ್ಟು ರಸ್ತೆ ಗಳನ್ನು ಮಾಡಿದ್ದರಷ್ಟೇ. ಇಲ್ಲಿಂದ ಗಡಿ ಠಾಣ್ಯಕ್ಕೆ ಹೋಗಲು ಕಾಲ್ನಡಿಗೆಯೇ ಟ್ರಾನ್ಸ್‌ಪೋರ್ಟ್ ! ತೂಕದ ವಸ್ತುಗಳಿದ್ದರೆ ಹೇಸರಗತ್ತೆಗಳ ಮೇಲೇರಿ ಬಾರ್ಡರ್ ಚೆಕ್‌ಪೋಸ್ಟ್ ಬಳಿಗೆ ಸಾಗಿಸುತ್ತಿದ್ದೆವು.

ನಮ್ಮ ಸೆಂಟ್ರಲ್ ಚೆಕ್‌ಪೋಸ್ಟ್‌ಗೆ ಸಪ್ಲೈರೂಟ್‌ನಲ್ಲಿ ಕನೆಕ್ಟ್ ಮಾಡಲ್ಪಟ್ಟಿರುವ ಫಾರ್ವರ್ಡ್ ಬಾರ್ಡರ್ ಚೆಕ್‌ಪೋಸ್ಟ್‌ಗಳು ಒಟ್ಟು ಆರು. ಅವನ್ನು ಎಫ್.ಸಿ.ಪಿ. 1, ಎಫ್.ಸಿ.ಪಿ. 2, ಎಫ್.ಸಿ.ಪಿ. 3...... ಎಂದು ಹೆಸರಿಸಿ ಕರೆಯುತ್ತಿದ್ದೆವು ಇವು ಈಶಾನ್ಯದಿಂದ ಉತ್ತರದವರೆಗೆ ಸುಮಾರು ಎಂಬತ್ತು ಮೈಲಿ ಬಾರ್ಡರ್ ಉದ್ದಕ್ಕೂ ಹರಡಿದ್ದವು.

ಆರೂ ಚೆಕ್‌ಪೋಸ್ಟ್‌ಗಳ ಇನ್ಸ್‌ಪೆಕ್ಷನ್ ಮಾಡಿ ಮುಗಿಸಲು ಷೇರ್ ಸಿಂಗ್‌ಗೆ ಹತ್ತು ದಿನ ಬೇಕೇ ಬೇಕು. ಮೊದಲು ಇಲ್ಲಿಂದ ಹೊರಟು ಫಸ್ಟ್ ಚೆಕ್‌ಪೋಸ್ಟ್ ತಲುಪುತ್ತೇವೆ ಅಲ್ಲಿಂದ ಸಾಲಾಗಿ ಎಲ್ಲ ಪೋಸ್ಟ್‌ಗಳನ್ನು ಚೆಕ್ ಮಾಡಿದ ಹತ್ತನೇ ದಿನ ಹಿಂತಿರುಗಬೇಕು.

ನಾನು ಸೆಂಟ್ರಲ್ ಪೋಸ್ಟ್‌ಗೆ ಇನ್‌ಚಾರ್ಜ್ ಕಮಾಂಡೆಂಟ್ ಆದ ಕಾರಣ ಮೊದಲ ಮೂರು ಚೆಕ್‌ಪೋಸ್ಟ್‌ಗಳ ಇನ್ಸ್‌ಪೆಕ್ಷನ್ ಮಾಡುವವರೆಗಿದ್ದು. ನಂತರ ನನ್ನ ಬೇಸ್‌ಗೆ ಹಿಂತಿರುಗುವವನಿದ್ದೆ. ಆ ಮೂರು ಪೋಸ್ಟ್ ಚೆಕಿಂಗ್‌ಗೆ ನಾಲ್ಕು ದಿನ ಹಿಡಿಯುತ್ತಿತ್ತು.

ಆಮೇಲೆ ಹೇರ್‌ಸಿಂಗ್ ಒಬ್ಬನೇ ಅಲ್ಲಿನ ಲೋಕಲ್ ಇನ್‌ಚಾರ್ಜ್‌ಗಳ ಸಹಾಯದೊಡನೆ ಉಳಿದ ಮೂರು ಚೆಕ್‌ಪೋಸ್ಟ್‌ಗಳ ತನಿಖೆ ಮುಗಿಸುತ್ತಾನೆ ಪ್ರಯಾಣವೆಲ್ಲಾ ಹೇಸರಗತ್ತೆಗಳ ಮೇಲೆಯೇ !

# 2

ಸಿಗರೇಟ್ ಹತ್ತಿಸಿ ಹೊಗೆ ಹೊರಚೆಲ್ಲುತ್ತಾ ಕಣ್ಣು ಕಿರಿದುಗೊಳಿಸಿ ಆಕಾಶದ ಕಡೆಗೆ ನೋಡಿದೆ.

ದಕ್ಷಿಣ ದಿಕ್ಕಿನಿಂದ ಮೋಡಗಳು ಗುಂಪು ಗುಂಪಾಗಿ ಧಾವಿಸುತ್ತಿದ್ದವು, ಕಪ್ಪು ಮೋಡಗಳು ಗುಡುಗಿದಾಗಿನ ಶಬ್ದ ಪರ್ವತಶ್ರೇಣಿಗಳಲ್ಲಿ ಪ್ರತಿಧ್ವನಿಸುತ್ತಾ ಹಲವಾರು ಸಲ ಕೇಳಿಸುತ್ತಿತ್ತು.

"ಬಹಳ ಕೆಟ್ಟ ವಾತಾವರಣ ನಿರ್ಮಾಣಗೊಳ್ಳಲಿದೆ ಸಾಬ್ !" ಅಂದ ಹವಲ್ದಾರ್ ರಾವಮ್ಲಾ ನನ್ನ ಪಕ್ಕಕ್ಕೆ ಬಂದು ನಿಲ್ಲುತ್ತಾ.

ತಲೆ ತಿರುಗಿಸಿ ಅವನ ಕಡೆಗೆ ನೋಡಿದೆ ನಾನು.

ಅವನು ಮೋಡಗಳ ಕಡೆಗೇ ತದೇಕವಾಗಿ ನೋಡುತ್ತಾ ತನ್ನ ಮಾತಿನಿಂದ ತನಗೇ ಅಸಂತೋಷವಾದವನಂತೆ ತಲೆ ಅತ್ತಿತ್ತ ಆಡಿಸುತ್ತಿದ್ದ ಮಂಗೋಲಿಯನ್ ಚಹರೆಗಳು ಅವನಲ್ಲಿ ಸ್ಪಷ್ಟವಾಗಿ ತೋರಿಬರುತ್ತಿದ್ದವು.

ಆ ಪರ್ವತ ಶ್ರೇಣಿಗಳಲ್ಲಿನ ಜೀವನದ ಬಗ್ಗೆ ರಾವಮ್ಲಾನಿಗಿರುವಷ್ಟು ನಾಲೆಡ್ಜ್ ನನಗಿಲ್ಲ ಎಂದು ಒಪ್ಪಿಕೊಳ್ಳಲೇನೂ ಬೇಜಾರಿಲ್ಲ ನನಗೆ. ಅಸ್ಸಾಂ ಪರ್ವತ ಶ್ರೇಣಿಗಳಲ್ಲಿ ವಾಸಿಸುವ 'ಕುಮಾರ್' ಪಂಗಡದವನು ಅವನು. ಹಲವಾರು ರೀತಿಯಲ್ಲಿ ಪ್ರಕೃತಿಯೊಡನೆ ಹೋರಾಡಿ ರಾಜಿ ಮಾಡಿಕೊಂಡಿರುವ ಜನ ಅವರು. ಐದಡಿ ನಾಲ್ಕು ಅಂಗುಲ ಎತ್ತರ, ಸ್ಕಾಲ್ಪ್‌ಗೆ ಅಂಟಿಸಿದಂತೆ ಕತ್ತರಿಸಿರುವ ಕೂದಲು, ಕಂಡೂ ಕಾಣದಂತಿರುವ ಹುಬ್ಬುಗಳು, ಸಣ್ಣ ಕಣ್ಣುಗಳು, ಕಟ್ಟುಮಸ್ತಾದ ಶರೀರ. ಹೊಸಬರ ಕಣ್ಣುಗಳಿಗೆ ಅಸ್ಸಾಮೀಯರಂತೆಯೇ ಕಾಣುತ್ತಾರವರು.

"ಹೌದು ! ಜೋರಾಗಿ ಮಳೆ ಬರುವ ಸೂಚನೆಗಳು ಕಾಣಿಸುತ್ತಿದೆ" ಅಂದೆ ಸಿಗರೇಟ್ ಹೊಗೆ ಹೊರ ಚೆಲ್ಲುತ್ತಾ.

ಮಳೆ ಬರುವ ಮೋಡಗಳಿದ್ದರೂ ಹೊರಬಿಟ್ಟ ಹೊಗೆ ಗಾಳಿಯಲ್ಲಿ ತೇಲುತ್ತಾ ಅಲ್ಲಿಯೇ ಇದ್ದು ಬಿಟ್ಟಿತು. ಗಾಳಿಯಲ್ಲಿ ಕದಲಿಕೆಯಿಲ್ಲ, ಏನೋ ಬಿಗಿತ.

"ಇಲ್ಲ ಸಾಬ್ ! ಜೋರು ಮಳೆಯಲ್ಲ......ಬಿರುಗಾಳಿ ಬರುವ ಸೂಚನೆಗಳು ಕಾಣಿಸುತ್ತವೆ !" ಅಂದ ರಾಮ್ನಾ.

ಅಚ್ಚರಿಯೊಡನೆ ಅವನ ಕಡೆಗೆ ನೋಡಿದೆ, "ಬಿರುಗಾಳಿಯೇ !"

"ಹೌದು ಸಾಬ್ ! ಗಾಳಿಯಲ್ಲಿ ಬಿಗಿತ ಉಂಟಾಗಿರುವುದರ ಕಾರಣ ಅದೇ !" ಅಂದ ರಾಮ್ನಾ ಮತ್ತೆ ದಕ್ಷಿಣದಿಂದ ಬರುತ್ತಿರುವ ಮೋಡಗಳ ಕಡೆಗೆ ನೋಡುತ್ತಾ.

ನನಗೆ ತಕ್ಷಣ ಕ್ಯಾಪ್ಟನ್ ಷೇರ್‌ಸಿಂಗ್ ವಿಷಯ ನೆನಪಾಯಿತು. ಈ ತೂಫಾನ್ ಬೀಸುವ ಸಮಯಕ್ಕೆ ಬಯಲಿನಲ್ಲಿದ್ದರೆ ಅವನು ಬದುಕುಳಿಯುವುದು ಕಷ್ಟ. ಎಫ್.ಸಿ ಪಿ ಸಿಕ್ಸ್‌ಗೆ ಇಂದು ಸಾಯಂಕಾಲ ತಲುಪಬೇಕು ಷೇರ್‌ಸಿಂಗ್

ಇಷ್ಟೊತ್ತಿಗೆ ಪೋಸ್ಟ್ ಫೈವ್‌ನಿಂದ ಹೊರಟು ಬಿಟ್ಟಿದ್ದರೆ ಪೋಸ್ಟ್ ಸಿಕ್ಸ್ ತಲುಪುವುದರೊಳಗೆ ಬಿರುಗಾಳಿಗೆ ಸಿಕ್ಕಿಕೊಳ್ಳುವ ಸಾಧ್ಯತೆಯಿದೆ ಅವರು.

ಆ ಪರ್ವತ ಶ್ರೇಣಿಗಳ ನಡುವೆ ದಾರಿ ಸರಿಯಿಲ್ಲದ ಕಾಡಿನಲ್ಲಿ ಬಿರುಗಾಳಿಯ ದಾಳಿಗೆ ಸಿಕ್ಕಿಬಿದ್ದರೆ ಎಷ್ಟು ಅಪಾಯ ಎಂದು ಗೊತ್ತು ನನಗೆ. ಹನ್ನೆರಡು ಸಾವಿರಡಿ ಎತ್ತರದಲ್ಲಿ ಏರ್‌ಫ್ರೆಷರ್ ಅತ್ಯಧಿಕವಾಗಿರುತ್ತದೆ. ಇಲ್ಲಿ ಸುರಕ್ಷಿತ ಸ್ಥಳದಲ್ಲಿರದೆ ಬಿರುಗಾಳಿಯ ನಡುವೆ ಸಿಕ್ಕಿಕೊಂಡರೆ ಹೆಣ ಸಿಗುವುದೂ ಕಷ್ಟವೇ !

ತಕ್ಷಣ ರೇಡಿಯೋಮನ್‌ಗೆ ಷೇರ್‌ಸಿಂಗ್ ಬಗ್ಗೆ ಇನ್‌ಸ್ಟ್ರಕ್ಷನ್ಸ್ ಕೊಟ್ಟೆ.

ಮಧ್ಯಾಹ್ನದ ಮೂರು ಗಂಟೆಗೆ, ಪೋಸ್ಟ್ ಫೈವ್‌ನಿಂದ ಹೊರಟ

ಮೇಲೆ ಕ್ಯಾಪ್ಟನ್ ಪೇರ್‌ಸಿಂಗ್ ಜೋಡಿಸಿರುವ ಸಿಗ್ನಲ್‌ಮೆನ್ ಬಳಿಯಿಂದ ಯಾವುದೇ ರೇಡಿಯೋ ಸಿಗ್ನಲ್ ಫ್ಲಾಷ್ ಆಗಿಲ್ಲವೆಂದೂ ತಿಳಿಯಿತು.

ಕ್ಷಣ ಕೈ ಗಡಿಯಾರದ ಕಡೆ ನೋಡಿಕೊಂಡೆ ಐದೂವರೆ.

ಪ್ರಯಾಣದಲ್ಲಿರುವಾಗ ಸಿಗ್ನಲ್‌ಮೆನ್ ರಾಘವನ್ ನಮಗೆ ಪ್ರತಿ ಗಂಟೆಗೊಂದು ಸೇಫ್ಟಿ ಸಿಗ್ನಲ್ ಕಳಿಸಲೇಬೇಕಾದ್ದು ನಿಯಮ. ಮೂರೂ ವರೆಗೆ ಪೋಸ್ಟ್ ಫೈವ್ ಬಿಟ್ಟನರು ಇನ್ನು ಸಿಗ್ನಲ್ ಕಳಿಸಿಲ್ಲವೆಂದರೆ ಅರ್ಥವೇನು ?

ಅದೇಕೋ ಮನಸ್ಸಲ್ಲಿ ಕಸಿವಿಸಿ ಶುರುವಾಯಿತು. ಪ್ರಾಣ ಹೋಗುವ ಸ್ಥಿತಿಯಲ್ಲಿದ್ದರೂ ಆರ್ಮಿಯಲ್ಲಿ ಇನ್‌ಸ್ಟ್ರಕ್ಷನ್ಸ್ ಕೊಟ್ಟ ಪ್ರಕಾರ ನಡೆಯಲೇ ಬೇಕು.....ನಡೆಯುತ್ತಾರೆ ಕೂಡ. ರಾಘವನ್ ಟೈಂಗೆ ಸರಿಯಾಗಿ ಸಿಗ್ನಲ್ ಕಳಿಸದೆ ಎಲ್ಲೋ ಸಿಗರೇಟ್ ಸೇದುತ್ತಾ ಕಾಲ ಕಳೆಯುವನೆಂದುಕೊಳ್ಳುವುದು ತಪ್ಪು.

ರಾಘವನ್ ಮೆಸ್ಸೇಜ್ ಕಳಿಸುವ ಫ್ರೀಕ್ವೆನ್ಸಿಯಲ್ಲಿ ರಿಸೀವಿಂಗ್ ಸೆಟ್ ಆನ್ ಮಾಡಿ ಕಾಯುವಂತೆ ರೇಡಿಯೋಮೆನ್‌ಗೆ ಸೂಚನೆ ಕೊಟ್ಟೆ.

ಇದ್ದಕ್ಕಿದ್ದಂತೆ ವಾತಾವರಣದಲ್ಲಿ ವಿಚಿತ್ರ ಬದಲಾವಣೆಯುಂಟಾಯಿತು. ಅಲ್ಲಿಯವರೆಗೆ ಕದಲಿಕೆಯೇ ಕಾಣದ ಪ್ರಕೃತಿಯಲ್ಲಿ ಹಠಾತ್ ಬದಲಾವಣೆ ಬಂತು. ಕದಲುವ ಮೋಡಕ್ಕೆ ಮೊದಲು ಬಲವಾದ ಗಾಳಿ ಬೀಸಲು ಶುರು ವಾಯಿತು. ಮೈದಾನ ಪ್ರದೇಶವಾಗಿದ್ದರೆ ಬೀಸುವ ಗಾಳಿಯೊಡ ಧೂಳೆದ್ದು ತೀವ್ರತೆಯನ್ನು ಸ್ಪಷ್ಟವಾಗಿ ಕಾಣಬಹುದಿತ್ತು. ಆ ಪರ್ವತ ಶ್ರೇಣಿಯಲ್ಲಿ ಜೋರಾಗಿ ಬೀಸುವ ಗಾಳಿಗೆ ಬಗ್ಗುತ್ತಿರುವ ಮರದ ಕೊಂಬೆಗಳೂ ಹಾರಾಡು ತ್ತಿರುವ ಎಲೆಗಳ ವಿನಹ ಬೇರೇನೂ ಕಾಣಿಸುತ್ತಿಲ್ಲ.

ಬೆಳಕು ಕಡಿಮೆಯಾಗಿ ಏಕ್‌ದಂ ಸೂರ್ಯಾಸ್ತಮಾನವಾದಂತೆನಿಸಿತು. ಮಬ್ಬಿನ ನಡುವೆ ಚಟಕ್ಕನೆ ಕೋರೈಸಿದ ಮಿಂಚು. ಎದೆ ಡವಗುಟ್ಟಿಸುವಷ್ಟು ಜೋರು ಶಬ್ದದ ಸಿಡಿಲು......... ಐದಾರು ಕ್ಷಣಗಳಿಗೊಮ್ಮೆ ರಿಪೀಟ್ ಆಗ ತೊಡಗಿದವು ನಾನಂತೂ ಈ ಮಿಷಿಮಿ ಪ್ರಾಂತ್ಯದಲ್ಲಿ ಬಿರುಗಾಳಿಯ ಪ್ರತಾಪ ನೋಡುತ್ತಿರುವುದು ಇದೇ ಮೊದಲ ಸಲ.

ಜೋರು ಗಾಳಿಯಿಂದಾಗಿ ತಲೆಯ ಮೇಲಿನ ಕ್ಯಾಪ್‌ಗಳು ಹಾರಿ

ಹೋಗದಂತೆ ಒಂದು ಕೈನಲ್ಲಿಡಿದು ಜವಾನ್ಸ್ ಅರ್ಜೆಂಟಾಗಿ ಬ್ಯಾರೆಕ್ಸ್ ಮೇಲೆ, ಹೊರಗಿರುವ ಸಾಮಾನುಗಳ ಮೇಲೆ ಟಾರ್ಪಾಲಿನ್ಸ್ ಮುಚ್ಚುತ್ತಿದ್ದರು.

ತಲೆಯ ಮೇಲಿಟ್ಟುಕೊಂಡಿದ್ದ ಕೈ ಮೇಲೆ ದೊಡ್ಡ ಹನಿಯೊಂದು ಬಿತ್ತು. ತಣ್ಣಗೆ ಐಸ್ ಪೀಸೊಂದು ಬಿದ್ದಂತಾಗಿತ್ತು. ತಲೆಯೆತ್ತಿ ನೋಡಿದೆ ಟಪಟಪನೆ ಇನ್ನು ನಾಲ್ಕು ಹನಿಗಳು ಮುಖದ ಮೇಲೆ ಬಿದ್ದವು, ಬಿರುಗಾಳಿ ಶುರುವಾಯಿತು ಅಂದುಕೊಂಡೆ.

ಜೋರು ಗಾಳಿಯೊಡಗೂಡಿ ಎಲೆಗಳು, ಒಣ ಮರಗಳ ಕೊಂಬೆಗಳು ಗಾಳಿಯಲ್ಲಿ ಹಾರಾಡುತ್ತಾ ಬರುತ್ತಿದ್ದವು. ಒಳಕ್ಕೆ ನುಗ್ಗಿ ರೇಡಿಯೋಮನ್ ಬಳಿಗೆ ನಡೆದೆ. ಕ್ಯಾಪ್ಟನ್ ಷೇರ್‌ಸಿಂಗ್ ಬಳಿಯಿಂದ ಇದುವರೆಗೆ ಯಾವುದೇ ಮೆಸ್ಸೇಜ್ ಬಂದಿಲ್ಲವೆಂದು, ಅವರ್‍ಯಾರೂ ಪೋಸ್ಟ್ ಸಿಕ್ಸ್ ತಲುಪಿಲ್ಲವೆಂದು ತಿಳಿಸಿದ ರೇಡಿಯೋಮನ್.

ಮತ್ತೆ ಟೈಂ ನೋಡಿಕೊಂಡೆ, ಆರನ್ನು ಸಮೀಪಿಸುತ್ತಿತ್ತು. ಗಾಳಿಯೊಡನೆಯೇ ಮಳೆಯ ವೇಗವೂ ಹೆಚ್ಚಿತು.

ನನ್ನ ಮನಸ್ಸದೇಕೋ ಕೇಡು ಶಂಕಿಸತೊಡಗಿತು.

# 3

ಗಾಳಿಯನ್ನು ಸೀಳಿಕೊಂಡು ತಲೆಯ ಮೇಲಿಂದ ಹಾರುತ್ತಾ ಹೊರಟು ಹೋಯಿತು ಆ ಹೆಲಿಕಾಪ್ಟರ್.

ಮರದ ಮೇಲ್ಭಾಗದಿಂದ ಆಗಾಗ ಅಲ್ಪ ಸ್ವಲ್ಪ ಕಾಣಿಸುತ್ತಾ ಕಡಿಮೆ ಎತ್ತರದಲ್ಲಿ ಹಾರುತ್ತಿತ್ತು ಅದು. ಈ ಮರಗಳ ಲೆವೆಲ್‌ನಲ್ಲೇ ಹೆಲಿಕಾಪ್ಟರ್ ಹಾರಾಟ ಮಾಡುವುದು ಕಷ್ಟ. ಜೊತೆಗೆ ಡೇಂಜರಸ್ ಕೂಡ. ಆದರೂ ವಿಧಿಯಿಲ್ಲ. ಕ್ಯಾಪ್ಟನ್ ಶೇರ್‌ಸಿಂಗ್ ಗ್ರೂಪನ್ನು ಹುಡುಕಿ ಹಿಡಿಯಬೇಕು ನಾವು.

ನಾಲ್ಕು ದಿನಗಳ ಬಿರುಗಾಳಿಯ ನಂತರ ಈ ಕಾಡು ಪ್ರದೇಶ. ಕಾಡು ದಾರಿಗಳೆಲ್ಲಾ ಗುರುತಿಸಲಾಗದಷ್ಟು ಹಾಳಾಗಿದ್ದವು. ಅಲ್ಲಲ್ಲಿ ಉರುಳಿ ಬಿದ್ದಿರುವ ಸಿಂಕೋನಾ ವೃಕ್ಷಗಳು ಮೊದಲೇ ತ್ರಾಸದಾಯಕ ಕೆಲಸಕೆ ಇನ್ನಷ್ಟು ಅಡ್ಡಿ ತಂದಿದ್ದವು.

ಕ್ಯಾಪ್ಟನ್ ಶೇರ್‌ಸಿಂಗ್ ಆಗಲಿ, ಸಿಗ್ನಲ್‌ಮ್ಯಾನ್ ರಾಘವನ್ ಆಗಲಿ, ಅವರೊಡನಿದ್ದ ಜವಾನ್ ಆಗಲಿ ಇನ್ನೂ ಬದುಕಿರುತ್ತಾರೆಂಬ ನಂಬಿಕೆಯಿರಲಿಲ್ಲ ನನಗೆ. ನಾಲ್ಕು ದಿನಗಳ ಕುಂಭದ್ರೋಣ ಮಳೆಯಲ್ಲಿ, ಬೃಹತ್ ಮರಗಳನ್ನೇ ಬುಡಸಮೇತ ಎತ್ತೆಸೆದ ಬಿರುಗಾಳಿಯಲ್ಲಿ ಸಿಕ್ಕಿಬಿದ್ದ ಅವರು ಬದುಕಿ ಹೊರಬೀಳುವ ಸಾಧ್ಯತೆ ಎಳ್ಳಷ್ಟೂ ಇರಲಿಲ್ಲ.

ಆದರೂ ಮಾಡಲೇಬೇಕಾಗಿದ್ದ ಕೆಲಸ ಅದು. ಈ ಬೆಟ್ಟಗುಡ್ಡಗಳ ಪ್ರದೇಶದಲ್ಲಿ ಯಾವುದೋ ಗುಹೆಯೊಳಗೋ, ಮರದ ಪೊಟರೆಯೊಳಗೋ ಅವರನ್ನೂ ಕೊನೆಯುಸಿರಲ್ಲಿರಬಹುದು. ಬದುಕಿದ್ದರೆ ನಮಗೇಕೆ ಸಿಗ್ನಲ್ ಕಳಿಸಲಿಲ್ಲ ? ರೇಡಿಯೋ ಕೆಟ್ಟು ಹೋಗಿರಬಹುದೇ ?

ಬಿರುಗಾಳಿಯ ತೀವ್ರತೆ ಕಡಿಮೆಯಾದಾಗಿಂದ ಪೋಸ್ಟ್ ಫೈವ್,

ಸಿಕ್ಸ್‌ಗಳ ಮಧ್ಯದ ಏರಿಯಾ ನಾನೇ ಖುದ್ದು ನಿಂತು ಹುಡುಕಾಟ ನಡೆಸಿದ್ದೆ. ಗಂಟೆಯ ಹಿಂದೆ ಚಾಂಗ್‌ಲೆಯಿಂದ ನಮಗೆ ಸಹಾಯ ಮಾಡಲೆಂದು ಒಂದು ಹೆಲಿಕಾಪ್ಟರ್ ಸಹ ಬಂದಿತ್ತು.

ಮಧ್ಯಾಹ್ನ ಹನ್ನೆರಡಾಗತೊಡಗಿತ್ತು ಟೈಂ. ಸುಮಾರು ಆರು ಗಂಟೆಗಳಿಂದ ಸತತವಾಗಿ ಹುಡುಕಾಟ ನಡೆಸಿದ್ದೆವು. ಕ್ಯಾಪ್ಟನ್ ಸಿಂಗ್ ಈ ಪ್ರದೇಶಕ್ಕೆ ಬಂದಿದ್ದಾರೆ ಇಷ್ಟೊತ್ತಿಗೆ ಏನಾದರೊಂದು ಕ್ಲೂ ಸಿಗಬೇಕಿತ್ತು.

ದೂರದಲ್ಲಿ ಸಿಕಾಂಗ್ ನದಿ ಅತಿ ವೇಗದೊಡನೆ ನೊರೆಯುಗುಳುತ್ತಾ ಹರಿಯುತ್ತಿತ್ತು. ಕ್ಯಾಪ್ಟನ್ ಸಿಂಗ್ ತಂಡ ಆ ನದೀ ಪ್ರವಾಹದ ಪಾಲಾಗಿಲ್ಲ ತಾನೇ ?

ಹಾಗೇನಾದರೂ ಆಗಿದ್ದಲ್ಲಿ ಮಾತ್ರ ಅವರ ಹೆಣಗಳು ಸಿಕ್ಕುವುದೂ ಕಷ್ಟವೇ.

ಬ್ರಹ್ಮಪುತ್ರಾ ನದಿಯ ಉಪನದಿ ಸಿಕಾಂಗ್. ಈ ಮಿಷಮಿ ಬೆಟ್ಟಗಳಲ್ಲಿ ಸುರಿಯುವ ಮಳೆಯ ನೀರು ಆ ನದಿಯ ಮೂಲಕವೇ ಕೆಳಭಾಗ ತಲುಪುತ್ತದೆ. ಡೆಲ್ಟಾ ಪ್ರಾಂತ್ಯದಲ್ಲಿ ನದಿಯಂತೆಯೇ ಯಾವ ಅಡೆತಡೆಯಿಲ್ಲದೆ ಸ್ಮೂಥಾಗಿರುತ್ತದೆ. ಆ ನೀರಿನ ವೇಗಕ್ಕೆ ಯಾವುದೇ ವಸ್ತುವಾದರೂ ಬಂಡೆಗಲ್ಲುಗಳಿಗೆ ಡಿಕ್ಕಿ ಹೊಡೆದು ಪೀಸ್ ಪೀಸ್ ಆಗುವುದು ಗ್ಯಾರಂಟಿ.

ಜೇಬಿನಿಂದ ವಿಷಲ್ ತೆಗೆದು ಎರಡು ಸಲ ಜೋರಾಗಿ ಊದಿದೆ.

ಎಲ್ಲ ಕಡೆಯೂ ಹುಡುಕುತ್ತಿದ್ದವರೆಲ್ಲಾ ಹಿಂತಿರುಗಿದರು. ಬಳಲಿ ಬೆಂಡಾಗಿ ಬಿಟ್ಟಿದ್ದರು ಅವರೆಲ್ಲಾ. ಬೆಳಗ್ಗೆಯಿಂದ ಈ ಕಾಡಲ್ಲಿ ಹುಡುಕಾಟ ನಡೆಸಿ ಅರ್ಧ ಗಂಟೆ ಲಂಚ್ ಬ್ರೇಕ್ ಕೊಡುವಂತೆ ರಾಮ್ನಾನಿಗೆ ಕೇಳಿ, ಮರದ ಕೆಳಗೆ ಬ್ಲಾಂಕೆಟ್ ಮೇಲೆ ಕುಳಿತಿದ್ದ ಡಾಕ್ಟರ್ ಕಪಾಡಿಯಾ ಬಳಿಗೆ ನಡೆದೆ.

ಡಾಕ್ಟರ್ ಕಪಾಡಿಯಾ ಆರ್ಮಿ ಮೆಡಿಕಲ್ ಫೋರ್ಸ್‌ನಲ್ಲಿ ಮೇಜರ್, ನಮ್ಮ ಪೋಸ್ಟ್‌ಗೆ ಅಟ್ಯಾಚ್ ಆಗಿದ್ದ ಮೆಡಿಕಲ್ ಆಫೀಸರ್. ರ್‍ಯಾಂಕ್‌ನಲ್ಲಿ ನನಗಿಂತಾ ಹೆಚ್ಚಿನವರಾದರೂ. ನನ್ನದು ರೆಗ್ಯುಲರ್ ಆರ್ಮಿ ರ್‍ಯಾಂಕ್ ಆಗಿದ್ದ ಕಾರಣ ನಾನೇ ನಮ್ಮ ಪೋಸ್ಟ್ ಇನ್‌ಚಾರ್ಜ್ ನೆಸೆಸಿಟಿ ಬರಬಹುದೆಂದು ನಮ್ಮೊಡನೆ ಕರೆತಂದಿದ್ದೆ.

ಹೆಲಿಕಾಪ್ಟರ್ ಮತ್ತೆ ನಮ್ಮ ಕಡೆಗೆ ಹಾರುತ್ತಾ ಬಂತು ನಾವು ಕುಳಿತಿದ್ದ ಪ್ರದೇಶದಲ್ಲಿ ಮರಗಳಿಲ್ಲದ ಕಾರಣ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಸಮತಟ್ಟಾಗಿದ್ದ ಪ್ರದೇಶವಾದ ಕಾರಣ, ಇಳಿಸಲೂ ಅನುಕೂಲವಾಗಿಯೆ ಇತ್ತು.

ಅಲ್ಲಿಯೇ ಒಂದು ರೌಂಡ್ ಹೊಡೆದು ಕೆಳಕ್ಕಿಳಿಯಲು ಶುರುವಾಯಿತು ಹೆಲಿಕಾಪ್ಟರ್.

ಲ್ಯಾಂಡ್ ಆದ ಮೇಲೆ ಅದರ ಬಳಿಗೆ ನಡೆದೆ. ಅದರೊಳಗಿಂದ ಹೆಡ್ ಕ್ವಾರ್ಟರ್ಸ್‌ನಿಂದ ಬಂದಿದ್ದ ಸಬ್‌ಲೆಫ್ಟಿನೆಂಟ್ ಕೆಳಕ್ಕಿಳಿದ.

“ಎನಿ ಲಕ್ ?” ಕೇಳಿದೆ ಆತುರದೊಡನೆ.

“ಐ ಹೋಪ್ ಸೋ ! ಬೆಟ್ಟದ ಇನ್ನೂ ಒಳಭಾಗದಲ್ಲಿ ನದೀ ದಡಕ್ಕೆ ಹತ್ತಿರವಾಗಿ ಯಾರೋ ಬಿದ್ದಿದ್ದಾರೆ.....”

“ನಿಮ್ಮ ಕಡೆ ನೋಡಲಿಲ್ಲವೇ ?”

“ಇಲ್ಲ ಬದುಕಿರುವುದು ಅನುಮಾನ. ಕೆಳಗೆ ಹಾರುವ ಅವಕಾಶವಿಲ್ಲ ಅಲ್ಲಿ. ಮರದ ಕೊಂಬೆಗಳು ಬಹಳ ಒತ್ತಾಗಿವೆ.”

“ಎಷ್ಟು ದೂರವಿರಬಹುದು ?”

“ಇಲ್ಲಿಗೆ ಎರಡು ಕಿಲೋಮೀಟರ್ ಇರಬಹುದು. ನದೀ ದಡದಲ್ಲೇ ಬಂದರೆ ನಿಮಗೆ ಪ್ರಯಾಣಿಸಲು ಸುಲಭವಾಗುತ್ತದೆ.”

“ರೈಟ್ ! ಪೈಲಟ್‌ನನ್ನು ಕರೆದು ಲಂಚ್ ಮುಗಿಸಿ. ಆದಷ್ಟು ಬೇಗ ಹೊರಟು ಬಿಡೋಣ” ಅಂದೆ ನಾನು ಮೇಲೇಳುತ್ತಾ.

# 4

ಹೆಲಿಕಾಪ್ಟರ್ ಮೇಲೆ ಹಾರುತ್ತಾ ದಾರಿ ತೋರಿಸುತ್ತಿದ್ದಂತೆ. ನದೀ ದಡದಲ್ಲಿ ಬಿದ್ದಿದ್ದ ಶವದ ಬಳಿಗೆ ಮುಕ್ಕಾಲು ಗಂಟೆಯಲ್ಲಿ ತಲುಪಿದ್ದೆವು.

ಎಲೆ ಹಸಿರು ಬಣ್ಣದ ಯೂನಿಫಾರಂ ಮೇಲೆ ಕೆಸರು ಗುರುತುಗಳು ಸಾಕಾಷ್ಟಿದ್ದವು. ಬೋರಲು ಬಿದ್ದಿತ್ತು ಶವ.

ನಾನೂ, ಮೇಜರ್ ಕಪಾಡಿಯಾ ಹತ್ತಿರ ಹೋದೆವು. ಪ್ರಾಣ ಹೋಗಿ ಮೂರ್ನಾಲ್ಕು ದಿನ ಆಗಿರಬಹುದೆಂದುಕೊಂಡೆ. ಕೊಳೆತ ವಾಸನೆ ಬರುತ್ತಿತ್ತು.

ಕ್ಯಾಪ್ಟನ್ ಸಿಂಗ್ ಅಥವ ರಾಘವನ್ ಡೆಡ್ ಬಾಡಿಯಲ್ಲ ಅದು. ಬಹುಶಃ ಪೋಸ್ಟ್ ಫೈವ್‌ನಿಂದ ಅವರೊಡನೆ ಬಂದಿದ್ದ ಎಸ್ಕಾರ್ಟ್ ಜವಾನ್ ದಿರಬಹುದೆನಿಸಿತು. ಕುತ್ತಿಗೆಯ ಗಾಯದ ಮೇಲೆ ನೊಣಗಳು, ಕ್ರಿಮಿಗಳು ಗುಂಪುಗಟ್ಟಿರುವುದು ಕಾಣಿಸಿ ಕ್ಷಣ ಹೊಟ್ಟೆ ತೊಳೆಸಿದಂತಾಯಿತು ನನಗೆ.

ಮೇಜರ್ ಕಪಾಡಿಯ ಬಗ್ಗಿ ಆ ಗಾಯದಿಂದ ಹೊರಗೆ ಕಾಣಿಸುತ್ತಿದ್ದ ಉದ್ದನೆಯ ಮೂರು ಬೆರಳು ದಪ್ಪದ ದೊಣ್ಣೆಯೊಂದನ್ನು ಹೊರಗೆಳೆದ. ತಟ್ಟನೆ ನೋಡಿದರೆ ಆ ದೊಣ್ಣೆಯನ್ನು ಆ ಸೋಲ್ಜರ್ ಕುತ್ತಿಗೆಯ ಮೂಲಕ ಭೂಮಿಯೊಳಕ್ಕಿಳಿಸಿರುವಂತೆ ಕಾಣಿಸುತ್ತಿತ್ತು.

ಐದಡಿ ಉದ್ದವಿತ್ತು ಆ ದೊಣ್ಣೆ. ತುದಿಯಲ್ಲಿ ಚೂರಿಗಿಂತಲೂ ಚೂಪಾಗಿ, ತೀಕ್ಷ್ಣವಾಗಿ ಕೆತ್ತಿ ಹರಿತಗೊಳಿಸಲ್ಪಟ್ಟಿತ್ತು.

"ಬ್ಲಡಿ ಕ್ರೂಡ್ ವೆಪನ್ ! ಯಾರು ಕೊಂದವನು ಅದೂ ಈ ರೀತಿಯಲ್ಲಿ ?" ಅಂದ ಕಪಾಡಿಯ ದೊಣ್ಣೆಯಲ್ಲಿ ಕೊನೆಯಲ್ಲಿ ಅಸಹ್ಯವಾಗಿ ಕಾಣಿಸುತ್ತಿದ್ದ ವಸ್ತುವನ್ನು ನೋಡುತ್ತಾ.

ಹವಲ್ದಾರ್ ರಾಮ್ನಾ ಮುಂದೆ ಬಂದು ಆ ಆಯುಧದ ಕಡೆಗೆ ಪರೀಕ್ಷಕ ನೋಟ ಬೀರಿದ.

"ಈ ಪರ್ವತದಲ್ಲಿ ವಾಸಿಸುವ ಗುಡ್ಡಗಾಡು ಜನಾಂಗದವರು ಬಳಸುವ ಆಯುಧ ಇದು. ಲೋಹದಿಂದ ಮಾಡಿದ ವಸ್ತುಗಳನ್ನು ಉಪಯೋಗಿಸುವುದಿಲ್ಲ ಅವರು. ಕಲ್ಲು ಬಿದಿರುಗಳಿಂದ ತಮ್ಮ ಆಯುಧಗಳನ್ನು ತಾವೇ ಮಾಡಿಕೊಳ್ಳುತ್ತಾರೆ. 'ಬಾಜೂಂ' ಎಂದು ಕರೆಯುತ್ತಾರೆ ಈ ಆಯುಧವನ್ನು ತುದಿಗೆ ವಿಷ ಲೇಪನ ಮಾಡಿರುತ್ತಾರೆ" ವಿವರಿಸಿದ.

"ಆಟವಿಕರು ಸೈನಿಕರೊಡನೆ ತಗಾದೆಗಿಳಿದ ಒಂದು ಇನ್ಸಿಡೆಂಟ್ ಸಹ ಕೇಳಿಲ್ಲ ನಾನಿದುವರೆಗೆ. ಇವನನ್ನೇಕೆ ಕೊಂದರು ? ಕ್ಯಾಪ್ಟನ್ ಸಿಂಗ್, ಸಿಗ್ನಲ್‌ಮನ್ ರಾಘವನ್ ಏನಾದರು ?" ಅಂದೆ ನಾನು ಇನ್ನು ನಂಬದವನಂತೆ ಸೈನಿಕನ ಶವದ ಕಡೆಗೇ ನೋಡುತ್ತಾ.

"ಆಟವಿಕರು ದಾಳಿಯೆಸಗುತ್ತಿದ್ದರೆ ಇವರು ನೋಡುತ್ತಾ ಸುಮ್ಮನಿರಲಾರರು ಅಲ್ಲವೇ ? ಅತ್ಯಾಧುನಿಕ ವೆಪನ್ಸ್ ಇವೆ ಇವರ ಬಳಿ. ಆಟೊಮ್ಯಾಟಿಕ್ ವೆಪನ್‌ಗಳ ಮುಂದೆ ಆಟವಿಕರ ಈಕ್ರೂಡ್ ವೆಪನ್ಸ್ ಏನು ಮಾಡಾವು ? ಜವಾನ್‌ನನ್ನು ಕೊಲ್ಲುತ್ತಿದ್ದರೆ ಕ್ಯಾಪ್ಟನ್ ಸಿಂಗ್ ನೋಡುತ್ತಾ ನಿಂತಿದ್ದನೆಂದರೆ ನಂಬಲಾಗದು" ಅಂದ ಮೇಜರ್ ಕಪಾಡಿಯಾ ಡಿಗ್ರೀ ಯೋಚಿಸುತ್ತಿರುವವನಂತೆ.

ರಾಮ್ನಾ ನಕಾರಾತ್ಮಕವಾಗಿ ತಲೆಯಾಡಿಸಿದ "ಮನುಷ್ಯರನ್ನು ಕೊಲ್ಲುವಷ್ಟು ಕ್ರೂರ ಸ್ವಭಾವದವರಲ್ಲ ಈ ಆಟವಿಕರು. ನಾಗರೀಕರ ಮುಖ ಕಂಡರೆ ತಪ್ಪಿಸಿಕೊಂಡು ದೂರ ಓಡಿಬಿಡುತ್ತಾರವರು. ಆದರೆ___" ದೂರದಲ್ಲಿ ಒಬ್ಬ ಜವಾನ್ ನಮ್ಮ ಗಮನ ಸೆಳೆಯಲು ಜೋರಾಗಿ ಕೂಗಿದಾಗ ಅವನ ಮಾತಿಗೆ ತಡೆಯುಂಟಾಗಿತ್ತು.

ಓಡುತ್ತಾ ನಮ್ಮ ಬಳಿಗೆ ಬಂದ ಆ ಜವಾನ್. ಏನೆನ್ನುವಂತೆ ಅವನ ಕಡೆಗೆ ನೋಡಿದೆ.

"ಸಾರ್ ! ಇನ್ನೊಂದು ಶವವಿದೆ ಅಲ್ಲಿ" ಅಂದ ತಾನು ಬಂದ ಕಡೆಗೆ ತೋರಿಸಿ.

"ಯಾರದು ?"

"ಯಾರೋ ಆಟವಿಕ ಜನಾಂಗದವಳು......ಹೆಣ್ಣು !" ಅಂದ ಅವನ ಬಂದ ಕಡೆಗೆ ಅಪ್ಪಿ ತಪ್ಪಿ ಕಣ್ಣು ತಿರುಗಿಸಲೋಗದೆ.

ರಾಮ್ನಾ ಹುಬ್ಬುಗಳು ಒಮ್ಮೆಲೇ ಏನೋ ಯೋಚಿಸುತ್ತಿರುವಂತೆ ಸಂಕುಚಿತಗೊಂಡವು.

"ಬನ್ನಿ ಸಾಬ್....." ಅಂದ ಜವಾನ್ ಅತ್ತ ಕಡೆಗೆ ಹೆಜ್ಜೆ ಹಾಕುತ್ತಾ.

ನೂರು ಗಜಗಳಷ್ಟು ದೂರದಲ್ಲಿ ಮರಗಳ ನಡುವೆ ಖಾಲಿ ಜಾಗವೊಂದ ಷ್ಟಿತ್ತು. ಅಲ್ಲಿ ನಗ್ನ ಹೆಣ್ಣಿನ ಶವವೊಂದು ಅಂಗಾತಾಗಿ ಬಿದ್ದಿತ್ತು.

ನೋಡಲೇ ಬಹಳ ಅಸಹ್ಯವಾಗುತ್ತಿತ್ತು ಅದನ್ನ. ಸ್ತನಗಳ ಮಧ್ಯದಿಂದ ಹೊಕ್ಕಳ ಮೂಲಕ ಸಾಗ್ಗಿರುವ ಎರಡು 'ಬಾಜೂಂ'ಗಳು ನೆಲದೊಳಕ್ಕೆ ಕಚ್ಚಿಕೊಂಡಿದ್ದವು ಗಾಯಗಳ ಬಳಿ ಹುಳು, ಹುಪ್ಪಟೆಗಳ ಬೀಡು ಕಣ್ಣುಗುಡ್ಡೆಗಳನ್ನು ಕಿತ್ತು ತಿಂದಿರಬೇಕು ಯಾವುದೋ ಪಕ್ಷಿಗಳು ತೀವ್ರ ನೋವಿಗೇನೋ ತುಟಿ ಬಿಂದು ಮೇಲಿನ ಹಲ್ಲುಗಳು ಭಯಂಕರವಾಗಿ ಕಾಣಿಸುತ್ತಿದ್ದವು.

ಆ ದೃಶ್ಯ ನೋಡಲಾಗದೆ ಡವಡವಿಸತೊಡಗಿದ ಗುಂಡಿಗೆಯೊಡನೆ ಮುಖ ಪಕ್ಕಕ್ಕೆ ತಿರುಗಿಸಿ ಬಿಟ್ಟೆ.

"ಬೀಸಲಿ !" ಅಂದ ಕಪಾಡಿಯಾ ಉಸಿರು ಸಿಕ್ಕಿಕೊಂಡವನಂತೆ.

# 5

ಸುತ್ತಮುತ್ತ ಇನ್ಯಾರದಾದರೂ ಹೆಣಗಳು ಕಾಣುವುದೇನೋ ಎಂದು ಸೈನಿಕರನ್ನು ನಾಲ್ಕೂ ಕಡೆಗೆ ಸರ್ಚ್ ಮಾಡಲು ಕಳಿಸಿದ ರಾವ್ನಾ.

ಟೈಂ ನೋಡಿಕೊಂಡ ಎರಡೂವರೆ ದಾಟಿತ್ತು.

"ಭಯಂಕರ ! ಏಕೆ ನಡೆಯಿತು ಹೀಗೆ ?" ಕೇಳಿದ ಸಿಗರೇಟ್ ಹಚ್ಚಿ.

ರಾವ್ನಾ ಮುಖ ಬಿರಿಯಿತು. ದೀರ್ಘಾಲೋಚನೆ ಮಾಡುತ್ತಿರುವಂತೆ ಹಣೆಯ ಮೇಲೆ ನೆರಿಗೆಗಳ ಆಳ ಹೆಚ್ಚಾಯಿತು.

"ಬಹುಶಃ ಜವಾನ್ ಆ ಕಾಡಿನ ಕನ್ಯೆಯನ್ನು ಬಲವಂತವಾಗಿ ಅನುಭವಿಸಿರಬೇಕು" ಅಂದ ಕೊನೆಗೆ.

"ವಾಟ್ ?" ಉದ್ಗರಿಸಿದ ಚಕಿತನಾಗಿ.

"ಈ ಗುಡ್ಡಗಾಡು ಜನಾಂಗದವರೆಲ್ಲಾ ಹೆಣ್ಣು ಗಂಡಿನ ಸಂಬಂಧದ ಬಗ್ಗೆ ನಮ್ಮ ನಾಗರೀಕ ಪ್ರಪಂಚಕ್ಕಿಂತಾ ಹೆಚ್ಚಿನ ಕಟ್ಟುಪಾಡುಗಳಿವೆ. ಹೆಣ್ಣಾಗಲಿ, ಗಂಡಾಗಲಿ ಇತರರೊಡನೆ ಸಂಪರ್ಕವಿರಿಸಿಕೊಂಡಿರುವುದು ತಿಳಿದರೆ ಬಾಣೂನಿಂದ ನೆಲಕ್ಕೆ ಚುಚ್ಚಿಸಿ ಕೊಂದು ಬಿಡುತ್ತಾರೆ. ನಮ್ಮ ಸೈನಿಕನ ಶವ ನೋಡಿದೊಡನೆ ನನಗೆ ಆ ಅನುಮಾನ ಬಂದಿತ್ತು. ಈ ಹೆಣ್ಣಿನ ಶವ ನೋಡಿದ ಮೇಲೆ ಅದು ದೃಢಪಟ್ಟಿತು. ಕ್ಯಾಪ್ಟನ್ ಸಾಬ್ ಸಹ ಅಪಾಯದಲ್ಲಿ ಸಿಕ್ಕಿಕೊಂಡಿರಬೇಕೆನಿಸುತ್ತದೆ" ಅಂದ ರಾವ್ನಾ.

"ಹೌ ಇಂಕ್ರೆಡಿಬಲ್ ! ಇವರ ಬಳಿ ರೈಫಲ್ಸ್ ಇವೆ. ಅವರು ಬಂದು ಕೊಲ್ಲುತ್ತಿದ್ದರೆ ಸುಮ್ಮನೆ ನಿಂತು ನೋಡುತ್ತಿದ್ದರೆನ್ನುವೆಯಾ ?" ಕೇಳಿದ ಮೇಜರ್ ಕಪಾಡಿಯಾ ನಂಬಲಾಗದವನಂತೆ.

ಆದರೆ ಆ ಪ್ರಶ್ನೆಗೆ ಬಹು ಬೇಗ ಉತ್ತರ ಸಿಕ್ಕಿಬಿಟ್ಟಿತ್ತು. ಸುತ್ತಮುತ್ತ ಹುಡುಕಲು ಹೋಗಿದ್ದ ಇಬ್ಬರು ಜವಾನ್ಸ್ ಓಡುತ್ತಾ ತಮ್ಮ ಬಳಿಗೆ ಬಂದರು.

"ಏಕೆ ? ಯಾರಾದರೂ ಕಾಣಿಸಿದರೇ ?"

"ಜೀಹಾ ಸಾಬ್ ! ಬೆಟ್ಟದ ಒಳ ಬದಿಗೆ ಒಂದು ಗುಹೆಯ ಬಳಿ ಹೆಣಗಳ ರಾಶಿಯೇ ಬಿದ್ದಿವೆ" ಅಂದ ಒಬ್ಬ. ಅವನ ಧ್ವನಿಯಲ್ಲಿ ಫುಲ್ ಎಕ್ಸೈಟ್‌ಮೆಂಟ್ ಸ್ಫುಟವಾಗಿ ಕಾಣಬಹುದಿತ್ತು.

ತಕ್ಷಣ ಎಲ್ಲರೂ ಆ ಗುಹೆಯ ಬಳಿಗೆ ಓಡಿದೆವು. ನಿಜಕ್ಕೂ ಭಯಂಕರ ದೃಶ್ಯ ಅಲ್ಲಿ.

ಅಟವಿಕರ ಹತ್ತು ಹೆಣಗಳು ಗುಹೆಯ ಬಾಗಿಲಿಂದ ಹತ್ತು ಗಜಗಳಷ್ಟು ದೂರದಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಆ ಹೆಣಗಳನ್ನು ನೋಡಿದಾಗ ಮೊದಲಿನಂತೆ ಅಸಹ್ಯವಾಗದೆ ನಡೆದದ್ದೇನೋ ಅರಿಯುವ ಉತ್ಸುಕತೆ ಹೆಚ್ಚಾಯಿತು.

ಆಲ್‌ಮೋಸ್ಟ್ ಎಲ್ಲರೂ ಗುಂಡುಗಳಿಂದಾದ ಗಾಯಗಳಿಂದಲೇ ಸತ್ತಿರುವುದು ಸ್ಪಷ್ಟವಾಗಿತ್ತು. ಬುಲೆಟ್ಸ್ ಶರೀರದಿಂದ ಹೊರ ಬಂದ ಪ್ರದೇಶದಲ್ಲಿ ಸುಮಾರು ನಾಲ್ಕೈದು ಅಂಗುಲಗಳಷ್ಟಿರುವ ಗಾಯ. ಬಹಳ ಹತ್ತಿರದಿಂದ ರೈಫಲ್ ಫೈರ್ ಮಾಡಿದಾಗುಂಟಾಗುವ ಗಾಯಗಳವು.

ಮಳೆ ಸುರಿಯುತ್ತಿದ್ದ ಕಾರಣ ಸುರಿದ ರಕ್ತವೆಲ್ಲಾ ನೀರಿನಲ್ಲಿ ಬೆರೆತು ಹರಿದು ಹೋಗಿರಬೇಕು, ಇಲ್ಲವೇ ಇಂಗಿ ಹೋಗಿರಬೇಕು. ಹೆಚ್ಚಿಗೇನೂ ರಕ್ತ ಕಾಣುತ್ತಿರಲಿಲ್ಲ. ಮಳೆಯಿಲ್ಲದಿದ್ದರೆ ಹತ್ತು ಕಡೆ ರಕ್ತ ಮಡುಗಟ್ಟಿರುತ್ತಿತ್ತು ಅಲ್ಲಿ.

"ಲೆಫ್ಟಿನೆಂಟ್ ಕೀರ್ತಿ ! ಕಂ ಹಿಯರ್ !" ಕೂಗಿಕೊಂಡ ಕಪಾಡಿಯಾ ದೂರದಲ್ಲಿದ್ದ ಮರದ ಬಳಿಯಿಂದ.

ನಾನು ಅವನ ಬಳಿಗೆ ನಡೆದೆ. ಈ ಹೆಣಗಳ ರಾಶಿ ಬೀಳಲು ಕ್ಯಾಪ್ಟನ್ ಸಿಂಗ್ ಕಾರಣವಿರಬೇಕು ಅವನು, ಸಿಗ್ನಲ್‌ಮನ್ ರಾಘವನ್ ಬದುಕಿರಬಹುದು.

ನೋಡು ಅನ್ನುವಂತೆ ಭೂಮಿಯ ಕಡೆಗೆ ಸನ್ನೆ ಮಾಡಿದ ಮೇಜರ್ ಕಪಾಡಿಯಾ.

ಒಂದು ಕ್ಷಣ ಶಿಬ್ಬೆರಗಾದ.

ಆರಡಿ ಉದ್ದ, ಮೂರಡಿ ಅಗಲವಿದ್ದ, ಆಳ ಒಂದೂವರೆಯಷ್ಟಿದ್ದ

ಹಳ್ಳವೊಂದನ್ನು ತೋಡಲಾಗಿತ್ತು ಅಲ್ಲಿ. ಮಳೆಯ ನೀರು ಅರ್ಧದಷ್ಟು ಇಂಗಿಹೋಗಿ ಇನ್ನರ್ಧ ಹಾಗೆಯೇ ಇದ್ದು ಕೆಸರು ಮಯವಾಗಿತ್ತು. ಪಕ್ಕದಲ್ಲಿ ಹಳ್ಳದಿಂದ ತೋಡಿದ ಮಣ್ಣು ರಾಶಿಯಾಗಿ ಬಿದ್ದಿತ್ತು.

ನನಗೆ ಆಶ್ಚರ್ಯ ಉಂಟು ಮಾಡಿದ್ದ ವಿಷಯ ಅದಲ್ಲ ಹಳ್ಳದಲ್ಲಿ ಮೇಲ್ಬದಿಗೇ ಕಾಣಿಸುತ್ತಿದ್ದ ವಸ್ತುವೊಂದಿತ್ತು. ಹಳ್ಳ ತೋಡಲು ಉಪ ಯೋಗಿಸುವ ಷೊವೆಲ್ ಅದು. 'ಇಂಡಿಯನ್ ಆರ್ಮಿ' ಎಂದು ಕಪ್ಪು ಬಣ್ಣದಲ್ಲಿ ಬರೆದಿರುವ ಅಕ್ಷರಗಳು ಅದರ ಹಿಡಿಯ ಮೇಲೆ ಸ್ಪಷ್ಟವಾಗಿ ಕಾಣಿಸು ತ್ತಿದ್ದವು.

"ಯಾರೋ ನಮ್ಮವರೇ ಈ ಹಳ್ಳ ತೋಡಿದಂತಿದೆ"ಅಂದ ಕಪಾಡಿಯಾ.

"ಹೌದು. ಕ್ಯಾಪ್ಟನ್ ಸಿಂಗ್ ಬಳಿ ಪ್ಲಾಂಟ್‌ಸೇವಿಂಗ್ ಅಂಡ್ ಕ್ಯಾಂಪಿಂಗ್ ಸರಂಜಾಮುಗಳೆಲ್ಲಾ ಇದ್ದವು. ಇದನ್ನು ನೋಡಿದರೆ ಯಾವುದೋ ಶವ ಹೂಳಲೆಂದೇ ತೆಗೆದಂತೆ ಕಾಣುತ್ತದೆ" ಅಂದ.

ಹೌದು ! ಆರಡಿ ಮೂರಡಿ ಹಳ್ಳ ಹೆಣ ಹೂಳಲ್ಲದೆ ಇನ್ನೇಕೆ ? ಯಾರ ಹೆಣ ?

ಹಠಾತ್ತನೆ ಗುಂಡಿಗೆ ಝಲ್ಲೆಂದಿತ್ತು, ಅರ್ಧದಷ್ಟು ಮಾತ್ರ ಹಳ್ಳ ತೆಗೆದು ಏಕೆ ನಿಲ್ಲಿಸಿಬಿಟ್ಟರು ?

ಮೇಜರ್ ಕಪಾಡಿಯಾನೂ ಅದೇ ಯೋಚನೆ ಬಂದಂತೆ ತಲೆ ಯಾಡಿಸಿದ.

"ಕ್ಯಾಪ್ಟನ್ ಸಿಂಗ್‌ಗೇನಾಗಿರಬಹುದೆನ್ನುವೇ ?"

ರಾಮ್ನಾ ಯಾವಾಗ ಹತ್ತಿರ ಬಂದನೆಂಬುದನ್ನೇ ಗಮನಿಸಿರಲಿಲ್ಲ ನಾನು, ಕಣ್ಣು ಕೊನೆಗೆ ಕಾಣಿಸಿದಾಗ ಏನೆನ್ನುವಂತೆ ನೋಡಿದೆ.

ಗುಹೆಯ ಕಡೆಗೆ ಕೈ ನೀಟಿ ತೋರಿಸಿದ ರಾಮ್ನಾ.

"ಟಾಕ್ ಹವಲ್ದಾರ್ ! ಡೋಂಟ್ ಆಕ್ಟ್. ಏನದು ?" ಸಿಡುಕಿದ.

"ಕ್ಯಾಪ್ಟನ್ ಸಿಂಗ್ !" ಅಂದ ರಾಮ್ನಾ ತಟಕ್ಕನೆ ಹಿಂದೆ ತಿರುಗಿ ಗುಹೆಯ ಕಡೆ ನಡೆಯುತ್ತಾ.

ಅವನಂದ ಮಾತುಗಳು ತಲೆಯೊಳಗೆ ಹೋಗಲು ಎರಡು ಕ್ಷಣ ಹಿಡಿದಿತ್ತು.

ಎರಡೇ ಹೆಜ್ಜೆಗಳಲ್ಲಿ ಗುಹೆಯ ಬಳಿಗೆ ಸೇರಿಕೊಂಡೆ ನನ್ನ ಹಿಂದೆಯೇ ಬಂದ ಕಪಾಡಿಯಾ ಆಗಲೇ ನಾಲ್ಕೈದು ಸೈನಿಕರೂ ಅಲ್ಲಿಗೆ ತಲುಪಿದರು. ರಾಮ್ನಾ ಕೈನಲ್ಲಿ ಫೈವ್ ಸೆಲ್ಸ್ ಟಾರ್ಚಿತ್ತು.

"ಎಲ್ಲಿ ?" ಅಂದೆ.

ಟಾರ್ಚ್ ಆನ್ ಮಾಡಿದ ರಾಮ್ನಾ ಗುಹೆಯ ಒಳಭಾಗಕ್ಕೆ ಫೋಕಸ್ ಮಾಡಿದ. ಲೈಟ್ ಬೆಳಕಲ್ಲಿ ಕಂಡ ದೃಶ್ಯದಿಂದ ಐದು ಕ್ಷಣ ಸ್ಥಂಭೀಭೂತ ನಾಗಿ ನಿಂತುಬಿಟ್ಟೆ.

ಕ್ಯಾಪ್ಟನ್ ಷೇರ್‌ಸಿಂಗ್ ಮೃತ ಶರೀರ ಗುಹೆಯೊಳಗೆ ಗೋಡೆಗೊರಗಿ ದಂತೆ ಕುಳಿತಿತ್ತು. ನಮಗೆ ಕಾಣಿಸುತ್ತಿದ್ದ ಪಾರ್ಶ್ವದಿಂದ, ಕಣತಲೆಯಿಂದ ರಕ್ತ ಕೆನ್ನೆಯ ಮೇಲಿಳಿದು ಯೂನಿಫಾರ್ಮ್ ಮೇಲೆ ಸುರಿದು ಗಡ್ಡೆ ಕಟ್ಟಿತ್ತು. ಪಕ್ಕಕ್ಕೆ ಜೋತುಬಿದ್ದಿರುವ ಕೈನೊಳಗೆ 'ಆರ್ಮಿ ಸ್ಪೆಷಲ್' ಪಿಸ್ತೂಲು ಕಪ್ಪಗೆ ಮಿನುಗುತ್ತಿತ್ತು.

ಸಿಂಗ್ ಎದುರಿಗೆ ಸರಿಯಾಗಿ ಗೋಡೆಗೊರಗಿ ಕಾಲು ಚಾಚಿ ಕುಳಿತಿತ್ತು ಸಿಗ್ನಲ್‌ಮನ್ ರಾಘವನ್ ಮೃತದೇಹ.

ವಿಶಾಲವಾಗಿರುವ ಗುಹೆಯೇನಲ್ಲ ಅದು, ಆರಡಿ ಉದ್ದ, ಅಷ್ಟೇ ಅಗಲ ವಿರಬಹುದು ಅಂದುಕೊಂಡೆ ಬಾಗಿಲ ಬಳಿ ಒಳಕ್ಕೆ ಹೋದಾಗ. ವಿಶಾಲ ವಾಗಿ ಹತ್ತಡಿಗಳ ವಿಸ್ತೀರ್ಣದೊಡನಿರುವ ಗುಹೆ ಎಂದರಿವಾಯಿತು ಆದರೆ ಎತ್ತರ ಅಷ್ಟಿರಲಿಲ್ಲ. ತಲೆ ಬಗ್ಗಿಸಿ ಒಳಕ್ಕೆ ನಡೆದ.

ಗುಪ್ಪೆಂದು ವಾಸನೆ ಬಂತು ಮೂಗಿಗೆ. ಶವ ಕೊಳೆತಿರುವ ವಾಸನೆ, ಕರ್ಚೀಫ್ ತೆಗೆದು ಮೂಗಿಗಡ್ಡ ಹಿಡಿದೆ.

ನನ್ನ ಪಕ್ಕದಲ್ಲಿ ರಾಮ್ನಾ, ಹಿಂದೆ ಕಪಾಡಿಯಾ ಒಳ ಬಂದರು.

ಕ್ಯಾಪ್ಟನ್ ಸಿಂಗ್ ಶರೀರದಲ್ಲಿ ಪ್ರಾಣವಿಲ್ಲವೆಂದು ಸ್ಪಷ್ಟವಾಗಿ ಕಾಣಿಸು ತ್ತಿತ್ತು. ಅತ್ತ ಇತ್ತ ನಡೆದಾಗ ಕಾಲಿಗೆ ಎಂಪ್ಟಿ ಬುಲೆಟ್ ಕೇಸ್‌ಗಳು ತಗುಲುತ್ತಿದ್ದವು.

ರಾಮ್ನಾ ಟಾರ್ಚ್ ಬೆಳಕನ್ನು ರಾಘವನ್ ಕಡೆಗೆ ತಿರುಗಿಸಿದ. ಅವನ ಹಣೆಯ ಮೇಲೆ ಪಿಸ್ತೂಲ್ ಬುಲೆಟ್ ಮಾಡಿರುವ ರಂಧ್ರ ಕಂಡಾಗ ದಿಗ್ಭ್ರಾಂತನಾದ.

"ಮರ್ಡರ್......ಸೂಯಿಸೈಡ್ !" ಅಂದ ಕ್ಯಾಪ್ಟನ್ ಸಿಂಗ್ ಕೈನಲ್ಲಿದ್ದ ಪಿಸ್ತೂಲಿನ ಕಡೆಗೆ ನೋಡುತ್ತಾ.

"ಐ ಡೋಂಟ್ ಥಿಂಕ್ ಸೋ !" ಅಂದ ಕಪಾಡಿಯಾ ಬಗ್ಗಿ ರಾಘವನ್‌ನನ್ನು ಪರಿಶೀಲಿಸುತ್ತಾ.

ನಾನೂ, ರಾಮ್ಸಾ ಕಪಾಡಿಯಾನನ್ನೇ ನೋಡುತ್ತಿದ್ದುಬಿಟ್ಟೆವು.

"ಎಸ್ ! ಐಯಾಂ ರೈಟ್......" ಅಂದ ಕಪಾಡಿಯಾ ರಾಘವನ್ ಭುಜದ ಮೇಲೆ ಆದಾಗ ಕಾಣಿಸಿದ ಗಾಯವನ್ನು ನೋಡುತ್ತಾ, "ಬಹುಶಃ ಇದು ಬಾಟಲಿನಿಂದಾದ ಗಾಯವೆಂದುಕೊಳ್ಳುತ್ತೇನೆ. ಆ ವಿಷದ ಕಾಂಪಿದಿಂದಾಗಿಯೇ ರಾಘವನ್ ಮರಣ ಸಂಭವಿಸಿದೆ. ಹಣೆಯ ಮೇಲಿನ ಪಿಸ್ತೂಲಿನ ಗಾಯ ಆಮೇಲಾಗಿರಬೇಕು !"

"ವಾಟ್ ಡು ಯು ಮೀನ್ ?" ಗೊಂದಲಗೊಂಡು ಕೇಳಿದೆ. ಮೊದಲೇ ಸತ್ತಿರುವವನ ಮೇಲೆ ಬುಲೆಟ್ ವೇಸ್ಟ್ ಮಾಡುವುದೇಕೆ ?"

"ಐ ಮೀನ್ ವಾಟ್ ಐ ಸೆಡ್ ! ಏಕಾಯಿತೆಂಬ ಪ್ರಶ್ನೆಗೆ ಮಾತ್ರ ನನ್ನಲ್ಲಿ ಉತ್ತರವಿಲ್ಲ" ಅನ್ನುತ್ತಾ ಮೇಲೆದ್ದ ಕಪಾಡಿಯಾ.

ನಾನು ರಾಘವನ್ ಹೆಣದ ಕಡೆಗೆ, ಕ್ಯಾಪ್ಟನ್ ಸಿಂಗ್ ಹೆಣದ ಕಡೆಗೆ ನೋಟ ಬದಲಾಯಿಸಿ ಐದಾರು ಸಲ ನೋಡಿದೆ ನಂಬಲಾಗದವನಂತೆ. ರಾಘವನ್ ಶವ ಸಂಪೂರ್ಣವಾಗಿ ಕೆಸರುಮಯವಾಗಿತ್ತು.

ಏನು ನಡೆದಿದೆ ಇಲ್ಲಿ ?

ಗೋಡೆಯ ಪಕ್ಕದಲ್ಲೇ ಎರಡು ಸೆಲ್ಫ್ ಲೋಡಿಂಗ್ ರೈಫಲ್ಸ್ ಬಿದ್ದಿದ್ದವು. ಎಚ್ಚರಿಕೆಯೊಡನೆ ಒಂದರ ಹೋಲ್ಟ್ ರಿಲೀಸ್ ಮಾಡಿದೆ. ಎಮ್ಟಿ ಷೆಲ್ ಎಗರಿ ಹೊರಬಿತ್ತು. ಒಳಗೆ ಮ್ಯಾಗಜೈನ್ ಖಾಲಿಯಾಗಿತ್ತು.

"ಕೀರ್ತಿ ! ಸೀ ದಿಸ್ !" ಅಂದ ಕಪಾಡಿಯಾ ಸಿಂಗ್ ಪಕ್ಕದಲ್ಲೇ ಬಿದ್ದಿದ್ದ ಒಂದು ಬ್ಲಾಕ್ ಕವರ್ ಹಾಕಿದ್ದ ಪುಸ್ತಕವನ್ನು ಬಗ್ಗಿ ಎತ್ತಿಕೊಂಡ.

ಕ್ಯಾಪ್ಟನ್ ಸಿಂಗ್ ಡೈರಿ ಅದು. ಎಕ್ಸರ್‌ಸೈಜ್ ನೋಟ್‌ಬುಕ್ ಸೈಜ್‌ನಲ್ಲಿತ್ತು ಅದು. ಟಾರ್ಚ್ ಬೆಳಕಲ್ಲಿ ಸರಸರನೆ ಪೇಜುಗಳನ್ನು

ತಿರುವಿದೆ ಕೊನೆಯ ನಾಲ್ಕು ಪೇಜುಗಳವು. ಗುಹೆಯ ಹೊರಗೆ ಬೆಳಕಿಗೆ ನಡೆದೆ.

ಹೊರಗಡೆ ಒಬ್ಬ ಜವಾನ್ ಪೀಸ್ ಪೀಸಾಗಿರುವ ಸಿಗ್ನಲಿಂಗ್ ಸೆಟ್ ಅನ್ನು ದಟ್ಟ ಪೊದೆಯೊಂದರೊಳಗಿಂದ ಹೊರಕ್ಕೆ ಹೆಕ್ಕಿ ತೆಗೆಯುತೊಡಗಿದ್ದ.

ಪೋಸ್ಟ್ ಫೈವ್ ಬಿಟ್ಟಾಗಿನಿಂದ ನಡೆದ ಈ ಘಟನೆಗಳನ್ನೆಲ್ಲಾ ವಿವರವಾಗಿ ಬರೆದಿದ್ದ ಕ್ಯಾಪ್ಟನ್ ಸಿಂಗ್. ಸೈನ್ಯದಲ್ಲಿನ ಕ್ರಮ ಶಿಕ್ಷಣ ಕಲಿಸಿದ್ದ ಉಪಯುಕ್ತ ಸಂಗತಿಗಳಲ್ಲೊಂದು ಅದು.

ನಿಧಾನವಾಗಿ ಓದಲು ಶುರುಮಾಡಿದೆ......

# 6

ಸಂಜೆ ನಾಲ್ಕೂವರೆ ಸಮೀಪಿಸುತ್ತಿತ್ತು.

ಕ್ಯಾಪ್ಟನ್ ಸಿಂಗ್ ಕೈನಲ್ಲಿದ್ದ ಮ್ಯಾಪ್‌ನ್ನು ಒಂದು ಸಲ ಲ್ಯಾಂಡ್ ಮಾರ್ಕ್ಸ್ ಚೆಕ್ ಮಾಡಿಕೊಂಡು ತೃಪ್ತಿಯೊಡನೆ ತಲೆದೂಗಿದ

ಎದುರಿಗೆ ಸಿಕಾಂಗ್ ನದಿ ಜುಳು ಜುಳು ಹರಿಯುತ್ತಿತ್ತು. ಸೂರ್ಯ ಆಕಾಶದಲ್ಲಿ ಮರೆಯಾಗಿದ್ದ. ವಾತಾವರಣ ತಣ್ಣಗಿತ್ತು. ಮ್ಯಾಪ್ ಪ್ರಕಾರ ತುಸು ಎತ್ತರ ಪ್ರದೇಶದಲ್ಲಿ ನದಿಯ ವಿಸ್ತಾರ ಕಡಿಮೆಗೊಳ್ಳುತ್ತದೆ. ಅಲ್ಲಿ ದಾಟುವುದು ಸುಲಭ.

ಸವಾರಿ ಮಾಡುತ್ತಿದ್ದ ಹೇಸರಗತ್ತೆಯ ಮೇಲಿಂದಿಳಿದು ಹಗ್ಗ ಕೈನಲ್ಲಿಡಿದು ಮುಂದಕ್ಕೆ ನಡೆಸಿಕೊಂಡು ಹೋದ ಸಿಗ್ನಲ್‌ಮನ್ ರಾಘವನ್, ಪೋಸ್ಟ್ ಫೈವ್‌ನಿಂದ ಬಂದ ಎಸ್ಕಾರ್ಟ್ ಜವಾನ್ ಅವನ ಹಿಂದೆಯೇ ನಡೆದರು.

ನದೀ ಪಾತ್ರದಲ್ಲೇ ಸ್ವಲ್ಪ ದೂರ ನಡೆದ ಮೇಲೆ ಹಟಕ್ಕನೆ ನಿಂತುಬಿಟ್ಟ ಕ್ಯಾಪ್ಟನ್ ಷೇರ್‌ಸಿಂಗ್, ನದಿಯಲ್ಲಿ ಸ್ವಲ್ಪ ಆಳ ಹೆಚ್ಚಿಗಿರುವ ನೀರಿನಲ್ಲಿ ಬಂಡೆಗಲ್ಲೊಂದರ ಹಿಂದೆ ಆಟವಿಕ ಜನಾಂಗದ ಹೆಣ್ಣೊಬ್ಬಳು ಅತ್ತ ಕಡೆಗೆ ತಿರುಗಿ ನಿಂತು ಸ್ನಾನ ಮಾಡುತ್ತಿದ್ದಳು.

ಶಬ್ದ ಮಾಡಬೇಡಿರೆಂದು ಸನ್ನೆ ಮಾಡಿ. ಬೇಕಂದೆ ಮುಂದಕ್ಕೆ ನಡೆದ ಷೇರ್‌ಸಿಂಗ್. ರಾಘವನ್ ಮತ್ತು ಜವಾನ್ ಇಕ್ಕಟ್ಟಿಗೆ ಸಿಕ್ಕಿಬಿದ್ದವರಂತೆ ನಿಂತಲ್ಲೇ ಮಿಡುಕಾಡಿದರು.

ಸ್ನಾನ ಮಾಡುತ್ತಿದ್ದ ಹೆಣ್ಣು ಚರ್ಮದ ವಸ್ತ್ರಗಳನ್ನು ಪಕ್ಕದಲ್ಲೇ ಇದ್ದ ಬಂಡೆಯ ಮೇಲಿರಿಸಿದ್ದಳು.

ಕ್ಯಾಪ್ಟನ್ ಸಿಂಗ್ ಸಪ್ಪಳವಾಗದಂತೆ ಅದನ್ನೆತ್ತಿ ಬೇರೆ ಪೊದೆಯೊಂದರ

ಬಳಿ ಅಡಗಿಸಿಟ್ಟ. ಹಿಂದಿರುಗಿ ನಗ್ನವಾಗಿ, ಕಣ್ಣಿಗೆ ಕಂಪಾಗಿ ಕಾಣುವಂತೆ ಸ್ನಾನ ಮಾಡುತ್ತಿದ್ದ ಹೆಣ್ಣನ್ನೇ ಒಂದು ಪಕ್ಕದಿಂದ ನೋಡುತ್ತಾ ನಿಂತು ಬಿಟ್ಟ.

ಕಪ್ಪು ಮೈ ಬಣ್ಣ, ಕಂಡೂ ಕಾಣದಂತಿರುವ ಎಳಸು ಹುಬ್ಬುಗಳು. ಅರಳುಗಣ್ಣುಗಳು, ಅಗಲ ಮೂಗು, ಗುಂಡಗೆ, ದಪ್ಪಗೆ ಭಾರವಾಗಿ ಕದಲುತ್ತಿರುವ ಸ್ತನಯುಗ್ಮ ಕ್ಯಾಪ್ಟನ್ ಸಿಂಗ್ ಕಣ್ರೆಪ್ಪೆಯನ್ನೂ ಬಡಿಯದೆ ಒಣಗಿದ ತುಟಿಗಳ ಮೇಲೆ ನಾಲಿಗೆಯಾಡಿಸಿಕೊಳ್ಳುತ್ತಾ ನೋಡುತ್ತಲೇ ಇದ್ದ.

ದೂರದಲ್ಲೇ ಇದ್ದ ಎಸ್ಕಾರ್ಟ್ ಜವಾನ್ ಆತಂಕದೊಡನೆ ರಾಘವನ್ ಕಡೆಗೆ ನೋಡಿದ. ಪುರನ್ ಅವನ ಹೆಸರು. ಅಸ್ಸಾಮಿ ಈ ಗುಡ್ಡಗಾಡು ಜನಾಂಗದವರ ಬಗ್ಗೆ ಅವನಿಗೆ ಚೆನ್ನಾಗಿ ಗೊತ್ತು. ಆ ಹೆಣ್ಣಿಗೆ ಸಂಬಂಧಿಸಿದ ಪುರುಷನೇನಾದರೂ ಆ ದೃಶ್ಯ ನೋಡಿದರೆ ಸಿಕ್ಕಾಪಟ್ಟೆ ಘರ್ಷಣೆಯಾಗುವುದೆಂದು ಅವನಿಗೆ ಗೊತ್ತು

“ಇದು ಸರಿಯಲ್ಲ......” ಅಂದ ರಾಘವನ್ ಕಡೆಗೆ ನೋಡುತ್ತಾ.

ಕಣ್ಣರಳಿಸಿ ಆ ಹೆಣ್ಣನ್ನೇ ತದೇಕವಾಗಿ ನೋಡುತ್ತಿದ್ದ ರಾಘವನ್ ಕೋಪದಿಂದ ಪುರನ್‌ನನ್ನೇ ನುಂಗುವಂತೆ ನೋಡಿದ. “ಚುಪ್‌ರಹೋ ಸಾಬ್ ಕೋಗುಸ್ಸಾ ಆಯೇಗಾ !” ಅಂದ.

ಆ ಸಂಭಾಷಣೆ ಕೇಳಿಸಿರಬೇಕು ಆ ಹೆಣ್ಣಿಗೆ. ತಟಕ್ಕನೆ ಬೆದರಿದ ಹರಿಣಿಯಂತೆ ಹಿಂದೆ ತಿರುಗಿ ನೋಡಿ ಅದುರಿ ಹೋಗಿ ತನ್ನ ಬಟ್ಟೆಗಳನ್ನಿಟ್ಟಿದ್ದ ಬಂಡೆಯ ಕಡೆಗೆ ಓಡಿದಳು.

ಅವು ಕಣ್ಣಿಗೆ ಬೀಳದಿದ್ದಾಗ ಏನು ಮಾಡುವುದೆಂದು ಅರ್ಥವಾಗದವಳಂತೆ ಒಂದು ಕ್ಷಣ ನಿಂತುಬಿಟ್ಟಳು.

ನಗುತ್ತಾ ಅವಳ ಕಡೆಗೆ ನೋಡಿದ ಕ್ಯಾಪ್ಟನ್ ಸಿಂಗ್. ಕೈನಲ್ಲಿದ್ದ ಐವತ್ತರ ನೋಟು ಅವಳ ಕಣ್ಣಿಗೆ ಕಾಣುವಂತೆ ಹಿಡಿದು ತೆಗೆದುಕೋ ಅನ್ನುವಂತೆ ಸನ್ನೆ ಮಾಡಿದ.

ಆ ಕಾಗದದ ಬೆಲೆ ಆ ಆಟವಿಕ ಹೆಣ್ಣಿಗೆ ಗೊತ್ತಿಲ್ಲವೆಂದು ಅವನಿಗೆ ಗೊತ್ತಿಲ್ಲ. ಹಿಂದಿನಿಂದ ನಗುತ್ತಾ ಬರುತ್ತಿದ್ದ ರಾಘವನ್.

ತಟಕ್ಕನೆ ಪಕ್ಕಕ್ಕೆ ತಿರುಗಿ ಮರಗಳ ಗುಂಪಿನ ಕಡೆಗೆ ಓಡಿದಳು ಆ ಹೆಣ್ಣು.

ತಡ ಮಾಡಲಿಲ್ಲ ಕ್ಯಾಪ್ಟನ್ ಸಿಂಗ್. ಜಿಂಕೆಯ ಬೆನ್ನು ಬಿದ್ದ ಹುಲಿಯಂತೆ ಅವಳ ಹಿಂದೆ ಬಿದ್ದ. ಅವಳು ತನ್ನೆಲ್ಲಾ ಶಕ್ತಿ ಕಾಲುಗಳಲ್ಲಿ ಕ್ರೋಢೀಕರಿಸಿ ಓಡುತ್ತಿದ್ದಳು.

ಥಂಗನೆ ಮುಂದಕ್ಕೆ ನೆಗೆದು ಆ ಹೆಣ್ಣಿನ ಎರಡೂ ಕಾಲುಗಳನ್ನು ಹಿಡಿದುಕೊಂಡ ಕ್ಯಾಪ್ಟನ್ ಸಿಂಗ್. ಓಡುತ್ತಿದ್ದ ಹೆಣ್ಣು ಆ ರಭಸಕ್ಕೆ ಸಿಂಗ್‌ನೊಡಗೂಡಿ ಕೆಳಕ್ಕೆ ಬಿದ್ದುಬಿಟ್ಟಳು.

ಹುಲಿಯಂತೆ ಅವಳ ಮೇಲೆ ಬಿದ್ದ ಕ್ಯಾಪ್ಟನ್ ಸಿಂಗ್, ಒಂದು ಕಾಲು ಅವಳ ಸೊಂಟಕ್ಕೆ ಸುತ್ತಿ ಎರಡೂ ಕೈಗಳಿಂದ ಅವಳ ಭುಜ ಹಿಡಿದು ನೆಲಕ್ಕೆ ಅದುಮಿದ.

ಆ ಹೆಣ್ಣು ಅಸಹಾಯಕ ಅಬಲೆಯಂತೆ ಆಕ್ರಂದನವೆಸಗಲಿಲ್ಲ ನಿಶ್ಯಬ್ದವಾಗಿಯೇ ಒದ್ದಾಡುತ್ತಾ ಅವನ ಪಟ್ಟಿನಿಂದ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಳು. ತನ್ನ ಜನಾಂಗದವರೇನಾದರೂ ಇದನ್ನು ನೋಡಿದನೆ ತನ್ನ ಸಾವು ಖಚಿತ ಎಂದವಳಿಗೆ ಗೊತ್ತು.

ನದೀ ತೀರದಲ್ಲೇ ಇದ್ದ ಪುರನ್ ಒಂದು ಕ್ಷಣ ಆ ದೃಶ್ಯವನ್ನು ನೋಡಿ ಅಪ್ರತಿಭನಾಗಿ ನಿಂತುಬಿಟ್ಟ ! ಆದಿವಾಸಿಗಳೊಂದಿಗೆ ದ್ವೇಷ ಹಾವಿನೊಂದಿಗೆ ಸರಸವಾಡಿದಷ್ಟೇ ಕ್ಷೇಮ !

ಮರಗಳ ಪಕ್ಕದಲ್ಲಿ ನಿಂತಿದ್ದ ರಾಘವನ್ ಆತುರದೊಡನೆ ಅವರಿಬ್ಬರನ್ನೇ ನೋಡುತ್ತಿದ್ದ.

ಆಗ ನೋಡಿದ ಪುರನ್ ಅವರನ್ನ !

ಸುಮಾರು ಹತ್ತು ಜನರಿದ್ದಂತೆ ಕಾಣುತ್ತಿದ್ದರು ಆದಿವಾಸಿಗಳು. ಕೈಗಳಲ್ಲಿ ಸೂಜಿಯಷ್ಟು ಚೂಪಿನ ಬಿದಿರು ದೊಣ್ಣೆಗಳೊಡನೆ ತಮ್ಮ ಕಡೆಗೇ ಓಡೋಡಿ ಬರುತ್ತಿದ್ದರವರು. ಹತ್ತಿರದಲ್ಲೇ ಎಲ್ಲೋ ಅವರ ಗುಡ್ಲುಗಳಿರಬೇಕು. ರಾಘವನ್ ಕಡೆಗೆ ತಿರುಗಿ ಓಡಿಹೋಗುವಂತೆ ಕಿರುಚಿಕೊಂಡ.

ಧಡ್ಡನೆ ಒಂದು ದೊಣ್ಣೆ ಆಗಲೇ ಅವನ ಮೂಳೆಗೆ ನುಗ್ಗಿತ್ತು.

ರಾಘವನ್ ಸಹ ಪುರನ್ ಕೂಗಿನಿಂದ ಜಾಗೃತನಾಗಿ ಇವರನ್ನು

ಗಮನಿಸಿಬಿಟ್ಟಿದ್ದ. ಸರ್ರನೆ ಮರದ ಮರೆಗೆ ನೆಗೆದು ಭುಜದಲ್ಲಿದ್ದ ಸೆಲ್ಫ್ ಲೋಡಿಂಗ್ ರೈಫಲ್ ತೆಗೆದು ಕ್ಷಣಾರ್ಧದಲ್ಲಿ ಲೋಡ್ ಮಾಡಿದ.

ಆದಿವಾಸಿಗಳೆಲ್ಲಾ ಪುರಸ್ ಶರೀರದ ಸುತ್ತಲೂ ಗುಂಪುಗೂಡಿದ್ದರು.

ಒಂದು ರೌಂಡ್ ಆ ಗುಂಪಿನ ಕಡೆಗೆ ಏಮ್ ಮಾಡಿ ಶೂಟ್ ಮಾಡಿದ ರಾಘವನ್. ಒಬ್ಬ ಆದಿವಾಸಿ ವಿಕೃತವಾಗಿ ಚೀರಿ ಭುಜ ಹಿಡಿದು ನೆಲಕ್ಕೆ ಕುಸಿದ.

ರೈಫಲ್ ಶಬ್ದ ಕೇಳಿದೊಡನೆ ಆದಿವಾಸಿಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಬಂಡೆಗಳ ಮರೆಗೆ ಸರಿದುಬಿಟ್ಟರು.

"ಕಮ ಆನ್......... ಫಾಲೋ ಮಿ !" ಕೂಗಿಕೊಂಡ ಕ್ಯಾಪ್ಟನ್ ಹಿಂದಿನಿಂದ.

ಹಿಂದೆ ತಿರುಗಿ ನೋಡಿದ ರಾಘವನ್. ಕ್ಯಾಪ್ಟನ್ ಸಿಂಗ್ ತನ್ನ ರೈಫಲ್ ಕಾಕ್ ಮಾಡಿ ಆದಿವಾಸಿಗಳ ಗುಂಪಿದ್ದ ಕಡೆಗೆ ನೋಡುತ್ತಿದ್ದ. ಆದಿವಾಸಿ ಹೆಣ್ಣು ಭೀತಿಭರಿತ ಕಂಗಳೊಡನೆ ಒಂದು ಪೊದೆಯ ಪಕ್ಕದಿಂದ ನೋಡುತ್ತಿದ್ದಳು.

ಆದಿವಾಸಿಗಳು ಮರಗಳ ಮರೆಯಲ್ಲಿ ಪೊದೆಗಳ ಮರೆಯಿಂದ ಮೆಲ್ಲ ಮೆಲ್ಲಗೆ ಮುಂದಕ್ಕೆ ಕದಲುತ್ತಾ, ಅವರನ್ನು ಸಮೀಪಿಸುವ ಸನ್ನಾಹದಲ್ಲಿದ್ದರು

"ಎಷ್ಟೇ ರೈಫಲ್ಸ್ ಇದ್ದರೂ ಆ ಮರಗಳ ನಡುವೆ ಫೈಟ್ ಮಾಡುವುದು ಕಷ್ಟ. ಹಿಂದಕ್ಕೆ ನಡಿ....." ಆರ್ಡರ್ ಕೊಟ್ಟ ಕ್ಯಾಪ್ಟನ್ ಸಿಂಗ್.

ಒಬ್ಬರು ರೈಫಲ್‌ನಿಂದ ಕವರ್ ಮಾಡುತ್ತಿದ್ದಂತೆ ಇನ್ನೊಬ್ಬರು ಹಿಂದೆ ದಾರಿ ಗಮನಿಸುತ್ತಾ ಒಂದೊಂದೇ ಹೆಜ್ಜೆ ಹಿಂದಿಂದೆ ನಡೆಯತೊಡಗಿದರು. ಆದಿವಾಸಿಗಳು ರೈಫಲ್ ಬುಲೆಟ್ಸ್ ತಾಗದಷ್ಟು ದೂರದಿಂದ ಮರಗಳ ಹಿಂದೆ ಅಡಗಿ ಇಂಚಿಂಚಾಗಿ ಮುನ್ನಡೆಯುತ್ತಿದ್ದರು.

ರಾಘವನ್ ಎಚ್ಚರಿಕೆಯೊಡನೆ ಸುತ್ತಲೂ ಕಾಣಿಸುತ್ತಿದ್ದ ಮರ, ಪೊದೆಗಳನ್ನು ಪರಿಶೀಲಿಸುತ್ತಾ ಹಿಂದಕ್ಕೆ ನಡೆಯುತ್ತಿದ್ದ. ಯಾವುದಾದರೂ ಪೊದೆಯ ಹಿಂದೆಯೋ, ಮರದ ಪಕ್ಕದಲ್ಲೋ ಯಾರಾದರೂ ಇದ್ದಾರೆಂಬ ಅನುಮಾನ ಬಂದರೆ ಅತ್ತ ಕಡೆಗೆ ನರ್ವಸ್ಸಾಗಿ ಫೈರ್ ಮಾಡುತ್ತಿದ್ದ.

ಮನುಷ್ಯರ್ಯಾರೂ ಕಾಣದಿದ್ದರೂ ಅವರು ನಿಧಾನವಾಗಿ ತಮ್ಮ ಕಡೆಗೆ ಕದಲುತ್ತಿರುವಂತೆ ಒಣಗಿದ ಕೊಂಬೆಗಳು, ಎಲೆಗಳು ಮಾಡುತ್ತಿರುವ ಶಬ್ದದ ಮೂಲಕ ತಿಳಿಯುತ್ತಿತ್ತು.

"ದೇರ್ ಇಟೀಸ್ !" ಕೂಗಿಕೊಂಡ ಷೇರ್ ಸಿಂಗ್.

ಅತ್ತ ಕಡೆಗೆ ನೋಡಿದ ರಾಘವನ್. ಮರಗಳಾಚೆಗೆ ಬೆಟ್ಟದ ಒಂದೆಡೆ ಸಣ್ಣ ಗುಹೆಯೊಂದು ಕಾಣಿಸುತ್ತಿತ್ತು.

ಅದರೊಳಕ್ಕೆ ಸೇರಿಕೊಳ್ಳಲು ಸಾಧ್ಯವಾದರೆ ರೇಡಿಯೋ ಮೆಸ್ಸೇಜ್ ಕಳಿಸಿ ಸಹಾಯ ಬರುವವರೆಗೆ ತಮ್ಮನ್ನು ತಾವು ಕಾಪಾಡಿಕೊಳ್ಳಬಹುದು. ಮರಗಳಿಗೂ, ಗುಹೆಗೂ ನಡುವೆ ಸುಮಾರು ಹದಿನೈದು ಗಜಗಳಷ್ಟು ಖಾಲಿ ಜಾಗವಿತ್ತು.

ದಿಢೀರನೇ ನಾಲ್ಕು ಸಲ ಫೈರ್ ಮಾಡಿ ಗುಹೆಯ ಕಡೆಗೆ ಸ್ಪ್ರಿಂಟ್ ಮಾಡಿದರು ಇಬ್ಬರೂ. ಮೊದಲು ಕ್ಯಾಪ್ಟನ್ ಸಿಂಗ್ ಹಿಂದೆ ರಾಘವನ್.

ಏಕ್‌ದಂ ಆದಿವಾಸಿಗಳಲ್ಲಿ ಸಂಚಲನೆ ಕಾಣಿಸಿಕೊಂಡಿತು ಅರ್ಥವಾಗದ ಭಾಷೆ ಕೂಗುಗಳು ಕೇಳಿ ಬಂದವು, ಓಡುತ್ತಿದ್ದವರ ಕಡೆಗೆ ಬಾಣಗಳು ಹಾರಿ ಬರತೊಡಗಿದವು.

ಬೆನ್ನಿನ ಮೇಲೆ ಏನೋ ಥಡ್ಡನೆ ಬಿದ್ದ ಶಬ್ದ ಕೇಳಿಸಿತು ರಾಘವನ್‌ಗೆ. ಬೆನ್ನ ಮೇಲೆ ಸಿಗ್ನಲಿಂಗ್ ಸೆಟ್ ಇಲ್ಲದಿದ್ದಲ್ಲಿ ಆ ಬಾಣ ಇಷ್ಟೊತ್ತಿಗೆ ತನ್ನ ಶರೀರದಲ್ಲಿ ತೂರಿ ತಾನು ಪುರಸ್‌ನಂತೆ ಹೆಣವಾಗುತ್ತಿದ್ದೆ ಎಂಬ ಯೋಚನೆ ಮಾತ್ರಕ್ಕೆ ಮೈ ಜಲದರಿಸಿತ್ತು. ಕ್ಯಾಪ್ಟನ್ ಸಿಂಗ್ ಅಷ್ಟೊತ್ತಿಗೆ ಗುಹೆಯೊಳಕ್ಕೆ ತುಂಬಿಟ್ಟಿದ್ದ ಎಗರಿ ಸ್ವರ್ಗದಂತೆ ಕಾಣುತ್ತಿದ್ದ ಗುಹೆಯ ಕಡೆಗೆ ನೆಗೆದ ರಾಘವನ್.

ಇಟ್ ವಾಸ್ ರಿಯಲಿ ವೆರಿ ಬ್ಯಾಡ್‌ಲಕ್ !

ಸರಿಯಾಗಿ ಅವನು ಗುಹೆಯೊಳಕ್ಕೆ ತೂರುವ ಸಮಯದಲ್ಲೇ ಒಂದು ಬಾಣ ರಾಘವನ್ ಭುಜದಲ್ಲಿ ಚುಚ್ಚಿಕೊಂಡಿತ್ತು. ವಿಕೃತವಾಗಿ ಚೀರಿ ಗುಹೆಯೊಳಕ್ಕೆ ಅಂಗಾತವಾಗಿ ಬಿದ್ದುಬಿಟ್ಟ.

ಕ್ಯಾಪ್ಟನ್ ಸಿಂಗ್ ಎಂಟು ಹತ್ತು ರೌಂಡ್ಸ್ ಆದಿವಾಸಿಗಳ ಗುಂಪಿನ

ಕಡೆಗೆ ಫೈರ್ ಮಾಡಿದ. ಇಬ್ಬರು ಮೂವರು ಅರಚುತ್ತಾ ಕೆಳಗುರುಳಿದರು. ಉಳಿದವರು ಮರಗಳ ಮರೆಗೋಡಿ ಬಿಟ್ಟರು.

"ರಾಘವನ್ ! ಗೆಟ್ ಇನ್‌ಸೈಡ್ !" ಕೂಗಿಕೊಂಡ ಸಿಂಗ್ ರೈಫಲ್ ರೀಲೋಡ್ ಮಾಡುತ್ತಾ.

ಕದಲಲಿಲ್ಲ ರಾಘವನ್, ಮಾತಾಡಲೂ ಇಲ್ಲ. ಚಲನೆಯೇ ಇಲ್ಲದೆ ಹಾಗೆಯೇ ಗುಹೆಯ ಎಂಟ್ರೆನ್ಸ್ ಬಳಿ ಬಿದ್ದಿದ್ದ. ಬೆನ್ನ ಮೇಲೆ ರೇಡಿಯೋ ಸಿಗ್ನಲ್ ಸೆಟ್ ಇದ್ದು ಅಂಗಾತಾಗಿ ಬಿದ್ದಿದ್ದ ಕಾರಣ ವಿಚಿತ್ರ ಭಂಗಿಯಲ್ಲಿರುವಂತೆ ಕಾಣುತ್ತಿದ್ದ.

"ರಾಘವನ್ ! ಮೂವ್ ಮ್ಯಾನ್ !" ಮತ್ತೆ ಕರೆದ ಕ್ಯಾಪ್ಟನ್ ಸಿಂಗ್.

ಚಲನೆಯೇ ಇಲ್ಲ. ಅದೇಕೋ ಗುಂಡಿಗೆ ಝಲ್ಲೆಂದಿತ್ತು ಕ್ಯಾಪ್ಟನ್ ಷೇರ್‌ಸಿಂಗ್‌ಗೆ.

ಮರಗಳ ಕಡೆಗೆ ಎರಡು ರೌಂಡ್ ಫೈರ್ ಮಾಡಿ ಮೊಣ ಕೈಗಳ ಮೇಲೆ ತೆವಳುತ್ತಾ ರಾಘವನ್ ಬಳಿಗೆ ಬಂದ. ಮೂಗಿನ ಬಳಿ ಬೆರಳಿರಿಸಿ ನೋಡಿದ ಉಸಿರಾಡುತ್ತಿಲ್ಲ. ಆ ಬಾಣಗಳ ಮೊನೆಗೆ ಹಚ್ಚುವ ವಿಷ ಬಹಳ ತೀಕ್ಷ್ಣವಾದದ್ದಿರಬೇಕು.

ಮರಗಳ ಸಮೂಹದ ಬಳಿ ಆದಿವಾಸಿಗಳ ಕದಲಿಕೆ ಕಾಣಿಸುತ್ತಿರಲಿಲ್ಲ. ರಾಘವನ್ ಶರೀರ ತನ್ನ ಶರೀರಕ್ಕೆ ಅಡ್ಡ ಬರುವಂತೆ ಕಂಕುಳ ಕೆಳಗೆ ಕೈ ತೂರಿಸಿ ಒಳಕ್ಕೆಳೆದುಕೊಂಡ.

ಅವನು ಸತ್ತಿದ್ದಾನೆಂದು ವಿಚಿತ್ರವಾಗಿ ಒಂದು ಪಕ್ಕಕ್ಕೆ ವಾಲಿ ಬಿಟ್ಟಿರುವ ತಲೆಯಿಂದಲೇ ತಿಳಿಯುತ್ತಿತ್ತು.

ಮರಗಳ ಹಿಂದಿನಿಂದ ಹೆಣ್ಣೊಬ್ಬಳು ಭೀಕರವಾಗಿ ಆಕ್ರಂದನವೆಸಗಿದ ಶಬ್ದ ಕಿವಿಗೆ ಬಿದ್ದಾಗ ಷೇರ್‌ಸಿಂಗ್ ಎದೆ ಒಂದು ಕ್ಷಣ ಹೊಡೆಯುವುದನ್ನು ನಿಲ್ಲಿಸಿ ಬಿಟ್ಟಿತು.

ರಾಘವನ್ ಶರೀರವನ್ನು ಗುಹೆಯೊಳಕ್ಕೆ ಕತ್ತಲಿಗೆಳೆದು ಸರಸರನೆ ಖಾಲಿಯಾಗಿದ್ದ ರೈಫಲ್ ಮತ್ತೆ ಲೋಡ್ ಮಾಡಿದ. ಗುಹೆಯ ಹೊರಗೆ ಮರಗಳ ಬಳಿಯಿಂದ ಆದಿವಾಸಿಗಳ ಕೂಗು, ಮಾತುಗಳು ಕೇಳಿ ಬರುತ್ತಲೇ ಇದ್ದವು.

ಗುಹೆಯ ನೆಲದ ಮೇಲೆ ಬೋರಲು ಮಲಗಿ ರೈಫಲ್ ಬಟ್ ಭುಜಕ್ಕೆ

ಒತ್ತಿ ಹಿಡಿದು ಮರಗಳ ಕಡೆಗೆ ಗುರಿ ಹಿಡಿದ. ಗುಹೆಗೂ ಮರಗಳಿಗೂ ನೂರು ಗಜಗಳಷ್ಟು ದೂರವಿಲ್ಲ. ಯಾರಾದರೂ ಗುಹೆಯ ಸಮೀಪಕ್ಕೆ ಬರುವ ಪ್ರಯತ್ನ ಮಾಡಿದರೆ ತಿಗಣೆ ಹೊಸಕಿದಂತೆ ಹೊಸಕಿ ಬಿಡಬಹುದು.

ಇದ್ದಕ್ಕಿದ್ದಂತೆ ದೂರದಲ್ಲಿ ಸಿಡಿಲಿನ ಭೋರ್ಗರೆತದ ಶಬ್ದ ಕೇಳಿ ಬಂತು. ತಕ್ಷಣ ವೇಗವಾಗಿ ಗಾಳಿ ಬೀಸಲು ಶುರುವಾಯಿತು. ಗುಹೆಯಲ್ಲಿ ಮಲಗಿ ನೋಡುತ್ತಿದ್ದರೆ ದೂರದಲ್ಲಿ ಗಾಳಿಯ ಜೋರಿಗೆ ತೂಗಾಡುತ್ತಿರುವ ಮರದ ಕೊಂಬೆಗಳನ್ನು ಕಾಣಬಹುದಿತ್ತು.

ಟೈಂ ನೋಡಿಕೊಂಡ ಕ್ಯಾಪ್ಟನ್ ಸಿಂಗ್ ಐದೂವರೆ.

ಮರದ ಮರೆಯಿಂದ ಹೊರ ಬಂದ ಇಬ್ಬರು ಆದಿವಾಸಿಗಳು ಗುಹೆಯ ಕಡೆಗೆ ನೋಡುತ್ತಾ ಏನೋ ಅರಚುತ್ತಿದ್ದರು. ಕ್ಯಾಪ್ಟನ್ ಸಿಂಗ್ ದವಡೆಗಳು ಬಿಗಿದವು. ರೈಫಲ್ ಎತ್ತಿ ಒಬ್ಬನ ಎದೆಗೆ ಏಮ್ ಮಾಡಿದ. ಅಲ್ಲಿಂದ ಗುರಿ ತಪ್ಪುವ ಸಾಧ್ಯತೆಯೇ ಇಲ್ಲ. ಮೆಲ್ಲಗೆ ಟ್ರಿಗರ್ ಪ್ರೆಸ್ ಮಾಡಿದ.

ರೈಫಲ್ ಮೊರೆತದಲ್ಲಿ ಅವನ ಆಕ್ರಂದನ ಕೇಳಿಸಲೇ ಇಲ್ಲ. ಆದರೆ ಬುಲೆಟ್ ಲಾಡ್ಜ್ ಆದಾಗ ಒಂದು ಗಜ ಹಿಂದಕ್ಕೆ ಅವನ ದೇಹ ಎಗರಿ ಬಿದ್ದುದು ಕಾಣಿಸಿತು. ಎರಡನೆಯವನು ಸರ್ರನೆ ಮರಗಳ ನಡುವೆ ನುಗ್ಗಿಬಿಟ್ಟ.

ಕ್ಯಾಪ್ಟನ್ ಸಿಂಗ್ ಮತ್ತೆ ಚೇಂಬರ್ ಲೋಡ್ ಮಾಡಿ ಸಹನೆಯೊಡನೆ ಕಾಯುತ್ತಾ ಕುಳಿತ. ಹೊರಗೆ ಆದಿವಾಸಿಗಳ ಸಂಖ್ಯೆ ಎಷ್ಟಿದೆಯೆಂದು ಗೊತ್ತಿಲ್ಲ. ಸ್ವಲ್ಪ ಉಸಿರಾಡುವಷ್ಟು ಸಮಯ ಸಿಕ್ಕರೆ ರಾಘವನ್ ಬಳಿಯಿರುವ ಸಿಗ್ನಲ್ ಸೆಟ್ ಮುಖಾಂತರ ಸೆಂಟ್ರಲ್ ಫೋರ್ಸ್‌ಗೆ ಡಿಸ್ಟ್ರೆಸ್ ಸಿಗ್ನಲ್ ಕಳಿಸಬಹುದು.

ಬೆಳಕು ಸಂಪೂರ್ಣವಾಗಿ ಕಡಿಮೆಯಾಗಿ ಹೊರಗೆ ಎಲ್ಲಾ ವಸ್ತುಗಳೂ ಮಸುಕು ಮಸುಕಾಗಿ ಕಾಣುತ್ತಿದ್ದವು. ಬೀಸುತ್ತಿರುವ ಜೋರು ಗಾಳಿಯ ಒತ್ತಡ ಗುಹೆಗೂ ತಿಳಿಯುತ್ತಿತ್ತು. ಟಪಟಪನೆ ಗಜ್ಜುಗ ಗಾತ್ರದ ಮಳೆಯ ಹನಿಗಳು ಬೀಳಲು ಶುರುವಾದವು.

"ಮೈ ಗಾಡ್ ! ಐಯಾಂ ಟ್ರಾಪ್ಡ್ !" ಅಂದುಕೊಂಡ ಕ್ಯಾಪ್ಟನ್ ಸಿಂಗ್ ಭಯದೊಡನೆ.

ಕೊನೆಯ ಸಿಗರೇಟ್ ಹಚ್ಚಿ ರಾಘವನ್ ಶವದ ಕಡೆಗೆ ನೋಡಿದ ಕ್ಯಾಪ್ಟನ್ ಷೇರ್‌ಸಿಂಗ್.

ಬಾಜೂಂಗೆ ಲೇಪಿಸಿದ್ದ ವಿಷದ ಪ್ರಭಾವದಿಂದಾಗಿ ಅವನ ಮೈಯೆಲ್ಲಾ ಕಪ್ಪಗಾಗಿತ್ತು. ಕಪ್ಪಾದ ಮುಖದಲ್ಲಿ ಕಣ್ರೆಪ್ಪೆ ತೆರೆದುಕೊಂಡು ಬಿಳಿಯ ಗುಡ್ಡೆಗಳು ತನ್ನನ್ನೇ ನೋಡುತ್ತಿರುವಂತೆ ಭಯಂಕರವಾಗಿ ಕಾಣಿಸುತ್ತಿದ್ದವು. ಆ ನೋಟಕ್ಕೆ ಮೈ ತಣ್ಣಗಾಗತೊಡಗಿತ್ತು ಸಿಂಗ್‌ಗೆ.

ಹೊರಗೆ ಸಿಡಿಲು ಗುಡುಗುಗಳೊಂದಿಗೆ ಧಾರಾಕಾರವಾಗಿ ಮಳೆ ಸುರಿಯುತ್ತಿತ್ತು. ಜೋರು ಗಾಳಿಯ ಆರ್ಭಟಕ್ಕೆ ಮಳೆಯ ಎರಚಲು ಗುಹೆಯೊಳಕ್ಕೂ ಒಂದೊಂದು ಸಲ ಬೀಳುತ್ತಿತ್ತು. ಮುಸುಕು ಬೆಳಕಲ್ಲಿ ಹೊರಗಿನ ಮರ, ಬಂಡೆಗಳು ಭೂತಗಳಂತೆ ತೋರುತ್ತಿದ್ದವು.

ಬಾಜೂಂ ಚುಚ್ಚಿಕೊಂಡಾಗ ಅಂಗಾತಾಗಿ ಬಿದ್ದ ಕಾರಣ ರಾಘವನ್ ಬೆನ್ನ ಮೇಲಿದ್ದ ಸಿಗ್ನಲಿಂಗ್ ಸೆಟ್ ರಿಪೇರಿ ಮಾಡಲು ಸಾಧ್ಯವಾಗದಂತೆ ಒಳಗಿನ ಸೂಕ್ಷ್ಮ ಭಾಗಗಳೆಲ್ಲಾ ಒಡೆದು ಹೋಗಿದ್ದವು.

ಈ ಬಿರುಗಾಳಿ ಅದ್ಯಾವಾಗ ಇಳಿ ಮುಖವಾಗುವುದೇ ಗೊತ್ತಿಲ್ಲ. ಅಲ್ಲಿಯವರೆಗೆ ತಾನು ಗುಹೆಯೊಳಗೆ ಬಂದಿಯೇ !

ಸುಮಾರು ಹತ್ತು ಆದಿವಾಸಿಗಳನ್ನು ಕೊಂದಿದ್ದ ಬಿರುಗಾಳಿ ಪ್ರಾರಂಭವಾಗುವ ವೇಳೆಗೆ ಇನ್ಯಾರೂ ಉಳಿದಿರುವಂತೆ ಕಾಣುತ್ತಿರಲಿಲ್ಲ. ಇದ್ದರೆ ಈ ಮಳೆ, ಬಿರುಗಾಳಿಯಲ್ಲೂ ತನ್ನನ್ನು ಕೊಲ್ಲಲು ತಮ್ಮ ಅವಿರತ ಪ್ರಯತ್ನ ಮಾಡುತ್ತಲೇ ಇರುತ್ತಿದ್ದರವರು.

ಎಲ್ಲೋ ಭಾರಿ ಮಿಂಚೊಂದು ಕೋರೈಸಿತು. ತುಟಿಕಚ್ಚಿ ರಾಘವನ್ ಶವದ ಕಡೆಗೆ ನೋಡಿದ ಕ್ಯಾಪ್ಟನ್ ಸಿಂಗ್.

ಒಮ್ಮೆಲೇ ಎದೆ ಬಡಿತ ನಿಂತು ಮತ್ತೆ ಹೊಡೆದುಕೊಳ್ಳಲು ಶುರುವಾಯಿತು. ರಾಘವನ್ ಶವ ಅತ್ತಿತ್ತ ಕದಲಿದಂತಾಗಿತ್ತು ! ಕಣ್ಣು ಹಿಗ್ಗಲಿಸಿ ನೋಡಿದ ಎದುರಿಗೆ ಗೋಡೆಗೊರಗಿಸಿಟ್ಟಿದ್ದ ಶವದತ್ತ ಗುಹೆಯೊಳಗೆ ಕತ್ತಲಿರುವ ಕಾರಣ ಆಕಾರದ ವಿನಹ ಸ್ಪಷ್ಟವಾಗಿ ಕಾಣಿಸುತ್ತಿಲ್ಲ. ಬೆಳ್ಳಗಿದ್ದ ಕಣ್ಣು ಗುಡ್ಡೆಗಳು ಮಾತ್ರ ತನ್ನನ್ನೇ ಚುಚ್ಚಿ ನೋಡುತ್ತಿರುವಂತೆ ತೋರುತ್ತಿತ್ತು.

ಬೆಚ್ಚಿಬಿದ್ದು ನೋಡಿದ ಷೇರ್‌ಸಿಂಗ್. ಶವದ ಕಣ್ರೆಪ್ಪೆಗಳು ಅಲುಗ್ಯಾಡಿದಂತೆನ್ನಿಸಿತು. ಕುಳಿತಲ್ಲೇ ಸ್ಥಿರಚಿತ್ತನಾಗಿ ಎರಡು ನಿಮಿಷ ಅತ್ತಲೇ ನೋಡುತ್ತಿದ್ದುಬಿಟ್ಟ ಸಿಂಗ್ ಉಸಿರಾಡುವುದನ್ನೂ ಮರೆತು. ನೆಲದ ಮೇಲೆ ಬಿದ್ದ ಸಿಗರೇಟ್ ತೇವಕ್ಕೆ ಆರಿ ಹೋಯಿತು

'ಡ್ಯಾಮಿಟ್ ! ಅವಶ್ಯಕವಾಗಿ ಏನೇನೋ ಊಹಿಸಿಕೊಳ್ಳುತ್ತಿದ್ದೇನೆ' ಅಂದುಕೊಳ್ಳುತ್ತಾ ಕಿಟ್ ಬ್ಯಾಗ್‌ನಲ್ಲಿ ಟಾರ್ಚ್‌ಗಾಗಿ ಹುಡುಕಾಡಿದ.

ಬ್ಯಾಗ್‌ನಿಂದ ಟಾರ್ಚ್ ತೆಗೆದು ಹತ್ತಿಸಿ ರಾಘವನ್ ಶವದ ಕಡೆಗೆ ಫೋಕಸ್ ಮಾಡಿದ.

ಟಾರ್ಚ್ ಬೆಳಕಲ್ಲಿ ಶವ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಕದಲಿಕೆಯಿಲ್ಲ. ತೆರೆದಿದ್ದ ಕಣ್ಣು ಗುಡ್ಡೆಗಳು ತನ್ನ ಕಡೆಗೆ ಹಾಗೆಯೇ ನಿರ್ಜೀವ ನೋಟ ಬೀರುತ್ತಿದ್ದವು.

ಟಾರ್ಚ್ ಹಾಗೆಯೇ ಉರಿಯಲು ಬಿಟ್ಟು ರೈನ್‌ಕೋಟ್ ತೆಗೆದು ಹಾಕಿಕೊಂಡ. ಮೌಂಟನೇರಿಂಗ್ ಕಿಟ್‌ನಿಂದ ಷೊವೆಲ್ ತೆಗೆದು ಟಾರ್ಚ್ ಕೈನಲ್ಲಿಡಿದು ಗುಹೆಯಿಂದಾಚೆಗೆ ಬಂದ.

ಮಳೆ ಕಡಿಮೆಯಾಗಿದ್ದರೂ ಗಾಳಿ ಮಾತ್ರ ಪ್ರಚಂಡ ವೇಗದೊಡನೆ ಬೀಸುತ್ತಿತ್ತು. ಗಾಳಿಯ ಜೋರಿಗೆ ಹಿಂದಕ್ಕೆ ಬೀಳ ಹೋಗಿ ಗುಹೆಯ ಅಂಚಿಡಿದು ನಿಂತುಕೊಂಡ.

ಟಾರ್ಚ್ ಆರಿಸಿ ಎದುರಿಗೆ ಕಾಣಿಸುತ್ತಿದ್ದ ಮರಗಳ ಕಡೆಗೆ ತೀಕ್ಷ್ಣವಾಗಿ ನೋಡಿದ. ಏನೂ ಕಾಣಿಸುತ್ತಿಲ್ಲ. ಐದು ನಿಮಿಷ ತುಸುವಾದರೂ ಅಲುಗದೆ ನಿಂತಲ್ಲಿಯೇ ನಿಂತ, ಸುತ್ತಮುತ್ತ ಮನುಷ್ಯರಿರುವ ಸುಳಿವಿಲ್ಲ.

ಟಾರ್ಚ್ ಹತ್ತಿಸಿ ಬಲಬದಿಗೆ ನಡೆದ. ಸ್ವಲ್ಪ ದೂರದಲ್ಲಿ ಸಮತಟ್ಟಾದ ಜಾಗವನ್ನು ನೋಡಿ ಟಾರ್ಚ್ ಆರಿಸಿಬಿಟ್ಟ.

ಷೊವೆಲ್‌ನೊಡನೆ ವೇಗವಾಗಿ ನೆಲ ಅಗೆಯಲು ಶುರು ಮಾಡಿದ ಮಳೆಯ ನೀರಲ್ಲಿನೆಂದು ಮೃದುವಾಗಿದ್ದ ಕಾರಣ ಹಳ್ಳ ತೆಗೆಯುವುದು ಕಷ್ಟವೆನಿಸಲಿಲ್ಲ. ಇಪ್ಪತ್ತು ನಿಮಿಷಗಳಲ್ಲಿ ರಾಘವನ್‌ನನ್ನು ಹೂಳಲು ಸರಿಹೋಗುವಷ್ಟು ಹಳ್ಳ ತೆಗೆದ. ಆಳ ಒಂದೂವರೆ ಅಡಿಯಷ್ಟು ಇತ್ತಷ್ಟೆ.

ತೋಡುವುದು ಮುಗಿದೊಡನೆ ಹಿಂದಿರುಗಿ ರಾಘವನ್‌ನನ್ನು ಭುಜದ

ಮೇಲೆ ಹೊತ್ತುಕೊಂಡ ಹಳ್ಳದಲ್ಲಿರಿಸಿ ಸರಸರನೆ ಮಣ್ಣಿನಿಂದ ಮುಚ್ಚಿದ. ಮತ್ತೆ ಟಾರ್ಚ್ ಹತ್ತಿಸಿ ಸುತ್ತಲೂ ಒಂದು ಸಲ ನೋಡಿದ.

ದೂರದಲ್ಲಿ ಮರಗಳ ಬಳಿ ತನ್ನ ರೈಫಲ್‌ಗೆ ಬಲಿಯಾದ. ಆದಿವಾಸಿಗಳ ಹೆಣಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು.

ನಿಟ್ಟುಸಿರುಗರೆದು ಟಾರ್ಚ್ ಆರಿಸಿ ವೇಗವಾಗಿ ಗುಹೆಯೊಳಕ್ಕೆ ನುಗ್ಗಿ ಬಿಟ್ಟ.

ಗುಹೆಯ ಹಿಂಬದಿಗೆ ಗೋಡೆಯನ್ನೊರಗಿ ನಿದ್ರೆ ಹೋಗುತ್ತಿದ್ದ ಪ್ರೇಮ್ ಸಿಂಗ್ ಜೋರಾಗಿ ಮೈ ಮುರಿಯುತ್ತಾ ಕಣ್ಣು ತೆರೆದ.

ಗುಹೆಯ ಒಳಗೆಲ್ಲಾ ಕತ್ತಲು. ಬೆಳಕಿರುವಂತೆ ಮುಸುಕುಮುಸುಕಾಗಿ ಕಾಣುತ್ತಿರುವ ಮರಗಳ ಗುಂಪು ಹೇಳುತ್ತಿತ್ತು.

ಮಳೆ, ಗಾಳಿ ರಾತ್ರಿಯಂತೆಯೇ ಆರ್ಭಟಿಸುತ್ತಿದ್ದವು. ಆಕಳಿಸುತ್ತ ರಿಸ್ಟ್‌ವಾಚ್ ಕಡೆಗೆ ನೋಡಿಕೊಂಡ. ಹತ್ತೂವರೆ ಸಮೀಪಿಸುತ್ತಿತ್ತು ಬೆಳಗ್ಗೆಯೇ ಇರಬೇಕು. ರಾತ್ರಿ ಮೂರು ಗಂಟೆಯವರೆಗೆ ಎದ್ದೇ ಇದ್ದ ತಾನು.

ಭೀತಿಯೊಡನೆಯೇ ಆ ಕತ್ತಲು ಗುಹೆಯಲ್ಲಿ ಕಡೆಯಲಾಗದಷ್ಟು ನಿದ್ರೆ ಬರುವವರೆಗೆ ಎಚ್ಚರವಾಗಿಯೇ ಇದ್ದ. ಸಣ್ಣ ಶಬ್ದವಾದರೂ ಪಿಸ್ತೂಲನ್ನು ಅತ್ತ ಕಡೆಗೆ ಏಮ್ ಮಾಡುತ್ತಾ ಹಸಿವಿನಿಂದ ಭೀತಿಯಿಂದ ಕ್ಷಣವೊಂದು ಯುಗದಂತೆ ಕಳೆದಿದ್ದ. ನಿದ್ರೆ ಬಂದ ಮೇಲೂ ಎಲ್ಲಾ ಕೆಟ್ಟ ಕನಸುಗಳೇ. ರಾಘವನ್ ಗೋರಿಯಿಂದೆದ್ದು ಬಂದು ಗುಹೆಯಲ್ಲಿ ಮಲಗಿದ್ದಂತೆ ಕನಸು ಬಿದ್ದಿತ್ತು.

ಸಿಗರೇಟ್‌ಗಾಗಿ ಜೇಬುಗಳನ್ನು ತಡವಿಕೊಂಡ. ರಾತ್ರಿಯೇ ಮುಗಿದು ಹೋದ ನೆನಪಾಯಿತು

ಈಗ ಬಂತು ಅನುಮಾನ. ಗುಹೆಯೊಳಗೆ ತನ್ನೊಡನೆಯೇ ಯಾರೋ ನಿಶ್ಶಬ್ದವಾಗಿರುವಂತೆ..... ಹೃದಯ ಫ್ರೀಝ್ ಮಾಡುವ ಯೋಚನೆ.....

ಉಸಿರು ಬಿಗಿ ಹಿಡಿದು ಕಿವಿ ನಿಮಿರಿಸಿ ಆಲಿಸಿದ ಏನಾದರೂ ಶಬ್ದ ಕೇಳಿಸುವುದೇನೋ ಎಂದು. ಗುಹೆಯೊಳಗೆ ಪಿನ್ ಡ್ರಾಪ್ ಸೈಲೆನ್ಸ್. ಮೆಲ್ಲಗೆ ತಲೆ ತಿರುಗಿಸಿ ಬಲಗಡೆಗೆ ನೋಡಿದ ಅಷ್ಟೇ !

ಒಂದು ಕ್ಷಣ ವಿದ್ಯುದಾಘಾತಕ್ಕೊಳಗಾದ. ಅವನಿಂದ ಒಂದು ಗಜದಷ್ಟು ದೂರದಲ್ಲಿ ಯಾರೋ ಗುಹೆಯ ಗೋಡೆಗೊರಗಿ ಕುಳಿತಿದ್ದರು. ಕಪ್ಪಗೆ ಅಸ್ಪಷ್ಟವಾಗಿ ಕತ್ತಲಲ್ಲಿ ಆಕಾರ ಮಾತ್ರ ಕಾಣಿಸುತ್ತಿತ್ತು. ಐದು ನಿಮಿಷಗಳ ಕಾಲ ರೆಪ್ಪೆ ಬಡಿಯದೆ ಕಡೆದ ವಿಗ್ರಹದಂತೆ ಅತ್ತ ಕಡೆಯೇ ನೋಡುತ್ತಿದ್ದು ಬಿಟ್ಟ.

ಯಾರದು ?

"ಯಾ......ಯಾರು ನೀನು ?" ವಿಸ್ಪರಿಂಗ್ ವಾಯ್ಸ್‌ನಲ್ಲಿ ಕೇಳಿದ ಷೇರ್‌ಸಿಂಗ್.

ಆಕಾರ ಮಾತಾಡಲಿಲ್ಲ. ಹಾಗೆಯೇ ಗೋಡೆಗೊರಗಿ ತಣ್ಣಗೆ ಕುಳಿತಿತ್ತು.

ಹೃದಯ ಡವಡವಿಸತೊಡಗಿತು ಷೇರ್‌ಸಿಂಗ್‌ಗೆ. ನಿಶ್ಶಬ್ದವಾಗಿ ಬೆಲ್ಟ್‌ನಿಂದ ಪಿಸ್ತೂಲು ತೆಗೆದು ಹಿಡಿದುಕೊಂಡ, ಇನ್ನೊಂದು ಕೈನಲ್ಲಿ ಟಾರ್ಚ್ ಲೈಟ್ ಎತ್ತಿಕೊಂಡ. ಪಿಸ್ತೂಲನ್ನು ಏಮ್ ಮಾಡಿ ಟಾರ್ಚ್ ಟಕ್ಕನೆ ಆನ್ ಮಾಡಿದ.

"ಓ ಮೈ ಗಾಡ್__!" ವಿಕೃತವಾಗಿ ಚೀರಿದ ಆಕಾರದ ಮುಖ ನೋಡಿದೊಡನೆ.

ಕೈನಲ್ಲಿದ್ದ ಟಾರ್ಚ್ ಜಾರಿ ಕೆಳಗೆ ಬಿತ್ತು ಧಡ್ಡನೆ. ಹೇಗೆ ಸಾಧ್ಯ ಇದು ? ಸ್ಪ್ರಿಂಗ್‌ನಂತೆ ಜಿಗಿದೆದ್ದು ನಿಂತು ಆಕಾರದತ್ತಲೇ ನೋಡುತ್ತಾ ನಿಂತು ಬಿಟ್ಟ.

ರಾಘವನ್ ಇಲ್ಲಿಗೆ ಹೇಗೆ ಬಂದ ?

ಎಸ್ ! ಆ ಆಕಾರ ರಾಘವನ್ ಹೆಣವೇ ! ರಾತ್ರಿ ತಾನು ಹೂತು ಹಾಕಿದ ಶವ ಮತ್ತೆ ಇಲ್ಲಿಗೆ ಹೇಗೆ ಬಂತು ? ನಿಮಿಷ ಗಡಗಡ ನಡುಗಿ ಬಿಟ್ಟ ಷೇರ್‌ಸಿಂಗ್ ರಾಘವನ್ ದೆವ್ವವಾದನೇ ?

ಗುಹೆಯ ಹೊರಗೆ ರಣಭೀಕರ ಮಳೆ ಸುರಿಯುತ್ತಲೇ ಇತ್ತು. ಬಿರು

ಗಾಳಿ ಗುಂಯ್ ಗುಂಯ್ ಎಂದೂ ಎದೆ ಕಂಗೆಡಿಸುವ ಶಬ್ದದೊಡನೆ ಬೀಸು ತ್ತಲೇ ಇತ್ತು. ಈ ಭಯಂಕರ ಬಿರುಗಾಳಿಯಲ್ಲಿ ನಾನು ಈ ಗುಹೆಯಿಂದ ಇನ್ನೆಲ್ಲಿಗಾದರೂ ಹೋಗುವ ಪ್ರಯತ್ನ ಮಾಡುವ ಬದಲು ಇಲ್ಲೇ ಆತ್ಮಹತ್ಯೆ ಮಾಡಿಕೊಳ್ಳುವುದೇ ಲೇಸೆನಿಸುವ ಪರಿಸ್ಥಿತಿ.

ಹೇಗಾಯಿತಿದು ? ತನ್ನ ಕೈಯ್ಯಾರೆ ತಾನೇ ಹೂತು ಬಂದ ರಾಘವನ್ ಬೆಳಗಾಗುವುದರೊಳಗೆ ಸಮಾಧಿಯಿಂದಾಚೆಗೆ ಹೇಗೆ ಬಂದ.

ಹೆಣಗಳು ನಡೆಯುತ್ತವೆಯೇ ? ಅಥವ ಬೇರಿನ್ಯಾರಾದರೂ ಹೆಣ ವನ್ನು ಹಳ್ಳದಿಂದೆತ್ತಿ ಗುಹೆಯೊಳಕ್ಕೆ ಸೇರಿಸಿದರೇ ? ಯಾರಿರಬಹುದು ಈ ಭಯಂಕರ ಬಿರುಗಾಳಿಯ ನಡುವೆ ಅಷ್ಟೊಂದು ಕಷ್ಟಪಟ್ಟು ತನ್ನನ್ನು ಭಯ ಪಡಿಸುವ ಪ್ರಯತ್ನವೆಸಗುವವರು ? ಆದಿವಾಸಿಗಳೇ ? ಅಲ್ಲ ಎಂದು ತರ್ಕ ಏಳುತ್ತದೆ. ತಾನು ಒಂಟಿಯಾಗಿ ಸಿಕ್ಕರೆ ಕೊಲ್ಲುವರೇ ಹೊರತು ಭಯ ಪಡಿಸುವ ಮನಸ್ಸತ್ವದವರಲ್ಲ ಅವರು.

ಅಷ್ಟು ಚಳಿಯಲ್ಲೂ ಕಡುಬೇಸಿಗೆಯಲ್ಲಿರುವಂತೆ ಬೆವರು ಜಿನುಗ ತೊಡಗಿತ್ತು ಅವನ ಹಣೆಯಿಂದ. ಕೆಳಗೆ ಬಿದ್ದಿರುವ ಟಾರ್ಚ್ ಎತ್ತಿಕೊಂಡು ಮತ್ತೆ ರಾಘವನ್ ಶವವನ್ನು ಪರೀಕ್ಷಿಸಲೂ ಭಯವಾಗುತ್ತಿತ್ತು ಷೇರ್‌ಸಿಂಗ್‌ಗೆ.

ತನ್ನ ಒಂಬತ್ತು ವರ್ಷಗಳ ಮಿಲಿಟರಿ ಜೀವನದಲ್ಲಿ ಪ್ರಪ್ರಥಮ ಬಾರಿಗೆ ದೇವರನ್ನು ಮನಃ ಪೂರ್ವಕವಾಗಿ ನೆನಪಿಸಿಕೊಂಡ.

ಕಾಲುಗಳಲ್ಲಿ ಶಕ್ತಿಯೇ ಇಲ್ಲದಂತಾಗಿ ಹಾಗೆಯೇ ನೆಲಕ್ಕೆ ಕುಸಿದ. ಅವನನ್ನು ಕಾಡಿಸುತ್ತಿದ್ದುದ್ದು ಅದೇ ಪ್ರಶ್ನೆ ಹೇಗಾಯಿತಿದು ?

ಶವದ ಕಡೆಗೆ ನೋಡುತ್ತಾ ಯೋಚಿಸುತ್ತಿದ್ದಷ್ಟು ಹೊತ್ತು ತಲೆ ತಿರುಗುತ್ತಿರುವ ಅನುಭವ, ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿ ಯುತ್ತಿತ್ತು.

"ದೇವರೇ......ಕಾಪಾಡು !" ಎಂಬ ಪ್ರಾರ್ಥನೆ ಅವನಿಗೆ ಗೊತ್ತಿಲ್ಲದೆ ಅವನ ಬಾಯಿಂದ ಹೊರಬಂದಿತ್ತು.

ಎಷ್ಟು ಹೊತ್ತು ಹಾಗೆಯೇ ಕಳೆಯಿತೋ, ಸುಸ್ತಿನಿಂದ ಭೀತಿಯಿಂದ ಹಾಗೆಯೇ ಎಷ್ಟು ಹೊತ್ತು ಮಲಗಿಬಿಟ್ಟನೋ ಗೊತ್ತಿಲ್ಲ......ನಿದ್ರೆಯಿಂದ

ದ್ದಾಗ ಸಾಯಂಕಾಲ ನಾಲ್ಕು ಗಂಟೆ. ಭಯಭಯದೊಡನೆಯೇ ಶವದ ಕಡೆಗೆ ನೋಡಿದ

ರಾಘವನ್ ಹೆಣ ಹಾಗೆಯೇ ಕದಲದೆ, ತುಸುವಾದರೂ ಚಲನೆಯಿಲ್ಲದೆ ಗೋಡೆಗೊರಗಿದಂತೆಯೇ ಇತ್ತು. ವಿಪರೀತ ಹಸಿವು, ಭಯ. ಒಂಟಿತನ ಷೇರ್‌ಸಿಂಗ್‌ಗೆ ಹುಚ್ಚಿಡಿಸುತ್ತಿದ್ದವು. ಮಿಲಿಟರಿಯಲ್ಲಿ ತನಗೆ ಕೊಟ್ಟ ಶಿಕ್ಷಣ, ವಿವೇಕ ತಾನು ನೋಡಿದ ಸತ್ಯ ಘಟನೆಯ ಹಿಂದಿನ ಅರ್ಥವನ್ನು ಹುಡುಕುವ ಪ್ರಯತ್ನದಲ್ಲಿ ತೊಡಗಿತ್ತು.

ಮೊದಲು ಈ ಹೆಣದ ಕಾಟದಿಂದ ವಿಮುಕ್ತನಾಗಬೇಕು. ಅಲ್ಲಿಯ ವರೆಗೆ ತನ್ನ ಮಿದುಳು ಚುರುಕಾಗಿ. ಸ್ಪಷ್ಟವಾಗಿ ಯೋಚಿಸದು.

ಮೆಲ್ಲನೆದ್ದು ರೈನ್‌ಕೋಟ್ ಹಾಕಿಕೊಂಡ. ಹೊರಗಿನ್ನೂ ಮಳೆ ಸುರಿಯುತ್ತಲೇ ಇತ್ತು ಕೆಳಗೆ ಬಿದ್ದಿದ್ದ ಟಾರ್ಚ್‌ಲೈಟ್ ಎತ್ತಿಕೊಂಡು ಹತ್ತಿಸಲು ಪ್ರಯತ್ನಿಸಿದ ಹತ್ತಲಿಲ್ಲ. ತನ್ನ ಕೈನಿಂದ ಜಾರಿ ಕೆಳಗೆ ಬಿದ್ದಾಗ ಬಹುಶಃ ಬಲ್ಬ್ ಒಡೆದು ಹೋಗಿರಬೇಕು.

ಮೆಲ್ಲಗೆ ರಾಘವನ್ ಶರೀರದ ಬಳಿಗೆ ಬಂದ. ತುಸು ಕೊಳೆತ ವಾಸನೆ ಬರುತ್ತಿತ್ತು. ಎರಡು ಕಾಲುಗಳನ್ನೂ ಹಿಡಿದು ಎಳೆದುಕೊಂಡು ಹೊರಗೆ ಬಂದ. ಪ್ರಾಣವಿಲ್ಲದಿದ್ದರೂ ತೂಕ ಸಶಕ್ತವಾಗಿಯೇ ಇತ್ತು

ಹಾಗೆಯೇ ಎಳೆದು ತಂದು ತಾನೇ ತೆಗೆದಿದ್ದ ಹಳ್ಳದಲ್ಲಿ ಬಿಸಾಡಿದ ಷೊವೆಲ್‌ನಿಂದ ಪೂರ್ತಿಯಾಗಿ ಮಣ್ಣು ತಳ್ಳಿ ಕಾಲಿನಿಂದ ಚೆನ್ನಾಗಿ ತುಳಿದು ಲೆವೆಲ್ ಮಾಡಿದ.

ಹೊಟ್ಟೆಗೇನೂ ಇಲ್ಲದೆ ಅಷ್ಟೆಲಾ ಶ್ರಮ ಪಟ್ಟ ಕಾರಣ ಮೈ ತೂರಾಡುತ್ತಿತ್ತು. ಗಾಳಿಯ ಜೋರಿಗೆ ನಿಲ್ಲಲೇ ಆಗುತ್ತಿಲ್ಲ. ಗುಹೆಯ ಬಳಿಗೆ ಬರುವಷ್ಟರಲ್ಲಿ ಕಾಲುಗಳು ಬೆಂಡಾಗಿ ಬಿಟ್ಟಂತೆನಿಸಿ ಕುಸಿದು ಬಿದ್ದ.

ವಾಟರ್ ಬಾಟಲ್‌ನಲ್ಲಿ ತುಸುವೇ ನೀರಿತ್ತು. ಕಾರ್ಕ್ ತೆಗೆದು ಗಟಗಟನೆ ಕುಡಿದ. ತಣ್ಣನೆಯ ನೀರು ಒಳಗೆ ಹೋದಾಗ ಪ್ರಾಣ ತುಸು ಹಿಂದಿರುಗಿದಂತಾಯಿತು. ನೆಲದ ಮೇಲೆ ಅರ್ಧ ಉರಿದು ಆರಿರುವ ಸಿಗರೇಟ್ ಕಾಣಿಸಿದಾಗಂತೂ ಆನಂದದಿಂದ ಅದನ್ನೆತ್ತಿಕೊಂಡು ಕಣ್ಣಿಗೊತ್ತಿ

ಕೊಂಡು ಹತ್ತಿಸಿದ ಹೊಗೆ ಒಳಕ್ಕೆ ಹೋದಾಗ ಎಷ್ಟೋ ರಿಲೀಫ್ ಆದಂತಾಯಿತು.

ಜೇಬಿನಿಂದ ಡೈರಿ ತೆಗೆದು ಅಲ್ಲಿಯವರೆಗೆ ನಡೆದ ವಿಷಯಗಳನ್ನೆಲ್ಲಾ ವಿವರವಾಗಿ ಬರೆದ. ರಾಘವನ್ ವಿಷಯ ಬರೆಯತೊಡಗಿದಾಗ ಕೈ ಬರೆಯ್ಯ ಲಾಗದಷ್ಟು ನಡುಗುತ್ತಿತ್ತು.

ಸಣ್ಣ ಶಬ್ದವಾದರೂ ರಾಘವನ್ ಹೆಣ ನಡೆದು ಬರುತ್ತಿದೆಯೇನೋ ಎಂಬ ಭೀತಿ ಅವನನ್ನು ಹಿಡಿದು ಅಲ್ಲಾಡಿಸುತ್ತಿತ್ತು. ಪಿಸ್ತೂಲು ತೆಗೆದು ಪಕ್ಕದಲ್ಲೇ ರೆಡಿಯಾಗಿಟ್ಟುಕೊಂಡ. ಸುಸ್ತಿನಿಂದಾಗಿ ಕಣ್ಣುಗಳು ಅವಷ್ಟ ಕ್ಕವೇ ಮುಚ್ಚಿಕೊಳ್ಳತೊಡಗಿದ್ದವು. ನಿಧಾನವಾಗಿ ಕತ್ತಲಾಗುತ್ತಿತ್ತು. ಇನ್ನೂ ಎಷ್ಟು ದಿನ ಹೀಗೆಯೇ ಒಂಟಿಯಾಗಿ ಹಸಿವಿನೊಡನೆ, ಭಯದಿಂದ ವಹಿಸಿ ಹೋಗಬೇಕೋ ಅರ್ಥವಾಗುತ್ತಿಲ್ಲ.

ಗುಹೆಯಲ್ಲಿ ಅತ್ತ ಕಡೆಯಿಂದ ಇತ್ತ ಕಡೆಗೆ ಯಾರೋ ಸರ್ರನೆ ನಡೆದು ಹೋದಂತಾಯಿತು. ಪಿಸ್ತೂಲನ್ನು ಬಿಗಿಯಾಗಿಡಿಯಿತು ಷೇರ್‌ಸಿಂಗ್ ಕೈ.

ಯಾರೂ ಇಲ್ಲ, ಮತ್ತೆ ನಿಶ್ಶಬ್ಧ, ರೆಪ್ಪೆಗಳು ಭಾರವಾಗುತ್ತಿದ್ದವು. ಬಲವಂತವಾಗಿ ಕಣ್ಣು ತೆರೆದು ಗುಹೆಯ ಬಾಗಿಲ ಕಡೆಯೇ ನೋಡುತ್ತಾ ಕುಳಿತ.

ಗಾಳಿ ಮಾಡುತ್ತಿರುವ ರೋದನೆ, ಮಳೆ ಸುರಿಯುತ್ತಿರುವ ಶಬ್ದ, ಹಸಿವು, ಸುಸ್ತು, ಎದೆಯಲ್ಲಿ ಭೀತಿಯಾಗಿ, ಪಿಸ್ತೂಲ ಸುತ್ತಲೂ ಬಿಗಿ ಹಿಡಿತ......ತನಗೇ ತಿಳಿಯದಂತೆ ನಿದ್ರಿಸಿ ಬಿಟ್ಟಿದ್ದ ಷೇರ್‌ಸಿಂಗ್.

ತಟಕ್ಕನೆ ಎಚ್ಚರಾಗಿತ್ತು. ಹೊರಗೆ ಗಾಳಿ ಕಡಿಮೆಯಾದರೂ ಮಳೆ ಮಾತ್ರ ಮೊದಲಿನಂತೆಯೇ ಇತ್ತು. ಬೆಳಗಾದಂತಿತ್ತು ಕಣ್ಣು ತೆರೆದು ನೋಡಿದ ಷೇರ್‌ಸಿಂಗ್.

ಎದುರಿಗೆ ಗೋಡೆಯನ್ನೊರಗಿ ಕುಳಿತಿರುವ ರಾಘವನ್ ಶವ ತನ್ನ ಕಡೆಗೇ ರೆಪ್ಪೆ ಹೊಡೆಯದೆ ನೋಡುತ್ತಿತ್ತು......ಕದಲದೆ, ಚಲನವಿಲ್ಲದೆ ಬಿಳಿಯ ಗುಡ್ಡೆಗಳೊಡನೆ ಬಿರುನೋಟದೊಡನೆ ತನ್ನ ಕಡೆಗೇ ನೋಡುತ್ತಿತ್ತು.

ಒಂದು ಕ್ಷಣ ಹಾರ್ಟ್‌ಬೀಟ್ ಸ್ಥಗಿತಗೊಂಡಂತಾಗಿತ್ತು ಮಿದುಳೂ ಬ್ಲಾಂಕ್.

ಮತ್ತೆ ಬಂತು......ವ್ಯೆಗಾಡ್......ರಾಘವನ್ ಮತ್ತೆ ಸಮಾಧಿಯಿಂದೆದ್ದು ಬಂದ......ಸತ್ತ ರಾಘವನ್ ಎದ್ದು ಬಂದ.

ಷೇರ್‌ಸಿಂಗ್ ಬೆರಳು ಟ್ರಿಗರ್ ರಾಡ್ ಮೇಲೆ ಬಿಗಿಯತೊಡಗಿತು.

ಮೆಲ್ಲಗೆ ಕೈ ಎತ್ತಿ ತನ್ನ ಕಡೆಗೇ ದುರುಗುಟ್ಟಿ ನೋಡುತ್ತಿದ್ದ. ಆ ಎರಡು ಕಣ್ಣುಗಳ ನಡುವೆ ಗುರಿ ಹಿಡಿದ ಕೈ ನಡುಗುತ್ತಿತ್ತು. ಗುರಿ ಹಿಡಿಯಲಾಗಲಿಲ್ಲ.

ಉಸಿರು ಬಿಗಿ ಹಿಡಿದು ಟ್ರಿಗರ್ ಪ್ರೆಸ್ ಮಾಡಿದ ಕ್ಯಾಪ್ಟನ್ ಷೇರ್ ಸಿಂಗ್......

# 7

"ಫೆಂಟಾಸ್ಟಿಕ್ ! ಅನ್‌ಬಿಲೀವಬಲ್ !" ಅಂದೆ ಕೊನೆಯ ಪೇಪರ್ ಓದಿ ಪೇರ್‌ಸಿಂಗ್ ಡೈರಿ ಮುಚ್ಚುತ್ತಾ.

ಮೇಜರ್ ಕಪಾಡಿಯಾ ನಕಾರಾತ್ಮಕವಾಗಿ ತಲೆಯಾಡಿಸಿದ. "ಎರೀರ್ ಥಿಂಗ್ ಡೆಫನೆಟ್ಲಿ ಇಂತಹ ಕೇಸುಗಳು ಬಹಳ ಅಪರೂಪ ಸೈಕ್ರಿಯಾಟಿಸ್ಟ್‌ಗಳಿಗೆ ಖಹು ಒಳ್ಳೆಯ ಎಕ್ಸಾಂಪಲ್ !" ಅಂದ.

"ವಾಡ್ ಡು ಯು ಮೀನ್ ಡಾಕ್ಟರ್ ? ಇಂತಹ ಘಟನೆಗಳು ನಡೆಯುವ ಸಾಧ್ಯತೆಯೂ ಇದೆಯೇ ?" ಕೇಳಿದೆ ಚಕಿತನಾಗಿ. "ಹಿಂದೆಂದಾದರೂ ನಡೆದಿವೆಯೋ ?"

ಜೇಬಿನಿಂದ ಸಿಗರೇಟ್ ಪ್ಯಾಕ್ ತೆಗೆದು ನನಗೊಂದು ಆಫರ್ ಮಾಡಿ ತಾನೊಂದು ಹಚ್ಚಿಕೊಂಡ ಕಪಾಡಿಯಾ "ಎಸ್ ! ನಡೆದಿವೆ" ಅಂದ.

"ಅಂದರೆ...... ನೀವು ದೆವ್ವಗಳಿವೆ ಎನ್ನುವಿರಲ್ಲವೇ ?"

ನನ್ನ ಕಡೆಗೆ ವಿಚಿತ್ರವಾಗಿ ನೋಡಿದ ಕಪಾಡಿಯಾ.

"ಇದರಲ್ಲಿ ದೆವ್ವಗಳ ಪ್ರಸಕ್ತಿ ಏಕೆ ಬಂತು ?"

"ಮತ್ತಿನ್ನೇನು ? ದೆವ್ವದ ಪ್ರಸಕ್ತಿಯಿಲ್ಲದೆ ಹೂತ ಶವ ಸಮಾಧಿಯಿಂದೆದ್ದು ಬಂದು ಹೇಗೆ ನಡೆಯುತ್ತವೆ ? ಇದಕ್ಕೆ ಸೈಂಟಿಫಿಕ್ ರೀಸನ್ ತೋರಿಸಬಲ್ಲಿರಾ ?"

ಕಿರು ನಗೆ ಬೀರಿದ ಕಪಾಡಿಯಾ. "ತೋರಿಸಬಲ್ಲೆ ಅಂದುಕೊಳ್ಳುತ್ತೇನೆ" ಅಂದ ಸಿಗರೇಟ್ ಹೊಗೆ ಹೊರ ಚೆಲ್ಲಿ.

ನಾನು ಮೇಜರ್ ಕಪಾಡಿಯಾನನ್ನು ನಂಬದವನಂತೆ ನೋಡಿದೆ.

"ಮೆಂಟಲ್ ಬ್ರೇಕ್ ಡೌನ್ ಡ್ಯೂ ಟು ಸೈಂಟಿಫಿಕ್ ಡಿಸೊಲೇಷನ್ !" ಅಂದ ಮೇಜರ್ ಕಪಾಡಿಯಾ.

ಅರ್ಥವಾಗಲಿಲ್ಲ ನನಗೆ, "ವಿವರವಾಗಿ ಹೇಳಿ" ಅಂದೆ.

"ಸೈಕಿಯಾಟ್ರಿಸ್ಟ್‌ಗಳಿಗೆ ಸ್ಟಡಿ ಮಾಡಲು ಬಹಳ ಅಪರೂಪವಾಗಿ ಸಿಗುವ ಕೇಸ್‌ಗಳಲ್ಲೊಂದು ಇದು. ಮನುಷ್ಯ ಮಾನಸಿಕವಾಗಿ ಏಕಾಕಿತನ ಅನುಭವಿಸುವಾಗ, ಅಭಾವದಿಂದಾಗಿ ಒಂದು ವಿಚಿತ್ರ ರೀತಿಯ ಮಾನಸಿಕ ತುಮುಲ-ಕಾಲ್ ದಿಸ್ ಎ ಡಿಸೀಸ್‌ಕ್ಕೊಳಗಾಗುತ್ತಾನೆ ಅದನ್ನೇ 'ಮೆಂಟಲ್ ಬ್ರೇಕ್ ಡೌನ್ ಡ್ಯೂ ಟು ಸೈಂಟಿಫಿಕ್ ಡೆಸೊಲೇಷನ್' ಅನ್ನುತ್ತಾರೆ.

"ಮನುಷ್ಯ ಈ ವಿಚಿತ್ರ ವಿಶಿಷ್ಟ ಮಾನಸಿಕ ವ್ಯಾಧಿಗೆ ಗುರಿಯಾದಾಗ ತನ್ನ ಒಂಟಿ ತನವನ್ನು ದೂರಾಗಿಸಿಕೊಳ್ಳಲು ಬಹಳ ಆಶ್ಚರ್ಯಕರ. ನಂಬಲ ಸಾಧ್ಯ ಕೆಲಸಗಳನ್ನು ಮಾಡಿ ಬಿಡುತ್ತಾನೆ. ಒಂಟಿತನದೊಡನೆ ವಿಪರೀತ ಭಯ, ಆತಂಕ. ದುಗುಡ ಮನಸ್ಸನ್ನು ಈ ಸ್ಥಿತಿಗೆ ದೂಡಲು ಸಹಾಯ ಮಾಡುತ್ತದೆ.

"ಇಂತಹ ಮಾನಸಿಕ ಸ್ಥಿತಿಯಲ್ಲಿರುವ ವ್ಯಕ್ತಿ ಒಂಟಿತನದಿಂದ ವಿಮುಕ್ತ ನಾಗಲು ಮಾಡುವ ಪ್ರಯತ್ನಗಳು ಸಬ್‌ಕಾಂಕ್ಷಸ್ ಸ್ಥಿತಿಯಲ್ಲಿ ಅಂದರೆ ಬಾಹ್ಯ ವಾಗಿ ತಾನು ಗುರುತಿಸಲಾಗದ ಸ್ಥಿತಿಯಲ್ಲಿರುತ್ತಾನೆ.

"ಕ್ಯಾಪ್ಟನ್ ಸಿಂಗ್ ವಿಷಯದಲ್ಲಿ ಆದದ್ದೂ ಇದೇ. ನೂರು ದಿನಗಳ ಕಾಲ ಆ ಬೆಟ್ಟ ಪ್ರದೇಶದಲ್ಲಿ ಹೊರ ಪ್ರಪಂಚದೊಡನೆ ಸಂಬಂಧವಿಲ್ಲದ ಪ್ರಾಣ ಭಯ, ಹಸಿವು, ಅಸಹಾಯಕತೆಗಳ ಅವನು ಈ ವಿಚಿತ್ರ ಮಾನಸಿಕ ವ್ಯಾಧಿಗೆ ವಿಕ್ಟಿಂ ಆದ.

"ಎಚ್ಚರಾಗಿರುವಾಗ ಅವನಲ್ಲಿನ ವಿವೇಕ, ತಾರ್ಕಿಕ ಜ್ಞಾನ ಚೆನ್ನಾ ಗಿಯೇ ಕೆಲಸ ಮಾಡುತ್ತಿತ್ತು. ಆದರ ನಿದ್ರೆ ಹೋದ ಸ್ಥಿತಿಯಲ್ಲಿ ಅವನ ವ್ಯಾಧಿಯ ತೀವ್ರತೆಯಿಂದಾಗಿ ವಿಪರೀತವಾಗಿ ತನಗೆ ತಿಳಿಯದಂತೆಯೇ ವರ್ತಿ ಸುತ್ತಿದ್ದ. ತಾನು ಸಂಕಟ ಪಡುತ್ತಿರುವ ಒಂಟಿ ತನದಿಂದ ತಪ್ಪಿಸಿಕೊಳ್ಳಲು ನಿದ್ರೆಯಲ್ಲಿ ಅವನ ಮನಸ್ಸು ಪರಿತಪಿಸುತ್ತಿತ್ತು. ಆಗನವನು ನಿದ್ರೆಯಲ್ಲೇ ಮೇಲೆದ್ದು ಹೋಗೆ ತಾನು ಹಳ್ಳ ತೆಗೆದು ಹೂತಿದ್ದ ತನ್ನ ಸಹಚರನ ಶವ ವನ್ನು ತನಗೆ ಜೊತೆಯಾಗಿ ತನ್ನ ಪಕ್ಕದಲ್ಲೇ ತಂದಿಂಸಿಕೊಳ್ಳುತ್ತಿದ್ದ. ಎಚ್ಚರಾದಾಗ ತಾನು ನಿದ್ರೆಯಲ್ಲಿ ಮಾಡಿದ ಕೆಲಸಗಳು ಅವನಿಗೆ ನೆನಪಿರುತ್ತಿ

ರಲಿಲ್ಲ. ಆದ್ದರಿಂದಲೇ ರಾಘವನ್ ದೆವ್ವವಾಗಿ ಸಮಾಧಿಯಿಂದೆದ್ದು ಬಂದನೆಂದು ಭಯಪಟ್ಟ.

"ಹೀಗೆಯೇ ಎರಡು ಸಲ ಆದಾಗ ಅವನ ಮಾನಸಿಕ ಸ್ಥಿತಿ ಸಂಪೂರ್ಣವಾಗಿ ತಳಮಟ್ಟ, ತಲುಪಿ ಬಿಟ್ಟಂತೆ ಕಾಣುತ್ತದೆ. ಆ ಡಿಪ್ರೆಷನ್‌ನಲ್ಲಿ ಭೀತಿಯಿಂದ, ಭ್ರಮೆಯಿಂದ, ದೆವ್ವದಿಂದ ತಪ್ಪಿಸಿಕೊಳ್ಳಬೇಕೆಂಬ ಹುಚ್ಚು ಪ್ರಯತ್ನದಲ್ಲಿ ರಾಘವನ್ ಹಣೆಕ್ಕೆ ಗುಂಡು ಹಾಕಿ ತಾನೂ ಅದೇ ಪಿಸ್ತೂಲಿನಿಂದ ಆತ್ಮಹತ್ಯೆ ಮಾಡಿಕೊಂಡ.

"ನಾನು ಸೈಕ್ರಿಯಾಟಿಸ್ಟ್ ಅಲ್ಲ. ಆದರೆ ಸೈಕಾಲಜಿಯಲ್ಲಿ ನನಗಿರುವ ಜ್ಞಾನದಿಂದಾಗಿ ನಡೆದಿರುವ ಘಟನೆಗಳ ಮೂಲಕ ಈ ರೀತಿಯಲ್ಲಿ ವಿಶ್ಲೇಷಿಸಿದ್ದೇನೆ. ಬಹುಶಃ ಕ್ವಾಲಿಫೈಡ್ ಸೈಕ್ರಿಯಾಟ್ರಿಸ್ಟ್ ಇದಕ್ಕೂ ಹೆಚ್ಚಿನ ವಿವರಗಳನ್ನು ನಿಮಗೆ ನೀಡಬಹುದು. ಆದರೆ ಜಸ್ಟ್ ಮಾತ್ರ ನಾನು ಕೊಟ್ಟಷ್ಟೇ" ಅಂದ ಕಪಾಡಿಯಾ ಸಿಗರೇಟ್ ಬಟ್ ದೂರಕ್ಕೆ ಫ್ಲಿಕ್ ಮಾಡುತ್ತಾ.

ನಾನು ಕ್ಯಾಪ್ಟನ್ ಸಿಂಗ್ ಕಡೆಗೆ, ರಾಘವನ್ ಕಡೆಗೆ ಟಾರ್ಚ್ ಬೆಳಕು ಹರಿಸಿ ಎರಡೆರಡು ಸಲ ನೋಡಿದೆ. ಡೆಡ್ ಬಾಡಿ ನಡೆಯುವ ಬಗ್ಗೆ ನಾನೆಂದೂ ಕೇಳಿರಲಿಲ್ಲ.

ಸೋ..... ಮೇಜರ್ ಕಪಾಡಿಯಾ ಮಾತಿನಲ್ಲಿ ನಿಜವಿರಲೇಬೇಕು !

ಆದರೂ...... ದೆವ್ವದ ವ್ಯವಹಾರವಲ್ಲ ತಾನೇ ಇದು ?

ನೀವೇನನ್ನುವಿರಿ ?

Desert Storm B.V. Anantharam

ಶ್ರೀ ಬಿ.ವಿ. ಅನಂತರಾಮ್ ಅವರ 'ಡೆಸರ್ಟ್ ಸ್ಟಾರ್ಮ್'
ಕೃತಿಯನ್ನು ಪ್ರಕಟಿಸಲು ನಮಗೆ ಸಂತೋಷವಾಗುತ್ತದೆ.
ಈ ಕಾದಂಬರಿಯು ಬಹಳ ಕುತೂಹಲಯಾಗಿದ್ದು
ಓದುಗರ ಮನಗೆಲ್ಲುವಂತಿದೆ.

ಜನಪ್ರಿಯ ಲೇಖಕರಾದ ಶ್ರೀ ಬಿ.ವಿ. ಅನಂತರಾಮ್‌ರವರ
ಈ ಕಾದಂಬರಿಯು ನಮ್ಮ ಇತರ ಪ್ರಕಟಣೆಗಳಂತೆ
ಜನಪ್ರಿಯವಾಗುವುವು ಎಂಬ ವಿಶ್ವಾಸ ನಮ್ಮದು.

ವಸಂತ ಪ್ರಕಾಶನ

ನಂ. 10, ತುಳಸೀ ವನಂ,
ಬೆಂಗಳೂರು 560 053.